ಶ್ರೀ ಆರ್. ಅಶೋಕ್ : ನಾನು ಎನ್‌ಕ್ವೈರಿ ಮಾಡಿದ್ದೇನೆ. ಎಲ್ಲರೂ ವಾಪಸ್ಸು ಬಂದಿದ್ದಾರೆ. ಆರು ಜನರನ್ನು ಬಿಟ್ಟು ಬಾಕಿ ಎಲ್ಲರೂ ವಾಪಸ್ಸು ಬಂದಿದ್ದಾರೆ. ಆರು ಜನರು ಮಾತ್ರ ಉಳಿದಿರುವುದು....

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ದಯವಿಟ್ಟು ಯಾರ್‍ಯಾರು ವಾಪಸ್ಸು ಬಂದಿದ್ದಾರತ ಅವರ ಹೆಸರುಗಳನ್ನು ಹೇಳಲಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಹೇಳಿ

ಅಧ್ಯಕ್ಷರು : ರೆಡ್ಡಿಯವರೇ, ಮಂತ್ರಿಗಳಿಗೆ ಗೊತ್ತಿಲ್ಲ. ಯಾರು ಬಂದಿದ್ದಾರೆಂದು ಅಶೋಕ್‌ರವರು ಹೇಳಬೇಕು.

ಶ್ರೀ ಆರ್. ಅಶೋಕ್ : ಆರು ಜನ ಮಾತ್ರ ಉಳಿದಿದ್ದಾರೆ. ಇನ್ನು ಎಲ್ಲರನ್ನೂ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಹೆಸರುಗಳನ್ನು ಕೇಳುತ್ತಿದ್ದಾರೆ. ನಾಳೆಯೇ ನಾನು ತಂದುಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅದಕ್ಕೆ ಬೇರೆ ಪ್ರಶ್ನೆ ಕೇಳಲಿ

ಅಧ್ಯಕ್ಷರು : ಬೇರೆ ಪ್ರಶ್ನೆ ಕಳಿಸಿ. ಉತ್ತರ ಹೇಳುತ್ತೇನೆ ಎಂದು ಮಂತ್ರಿಯವರು ಹೇಳುತ್ತಿದ್ದಾರೆ. ಈಗ ಸಭೆ ಮುಂದುವರೆದು ಪುನಃ 3-15ಗಂಟೆಗೆ ಸೇರುತ್ತದೆ

(2-05ಗಂಟೆಗೆ ಸಭೆ ಮುಕ್ತಾಯಗೊಂಡು ಪುನಃ 3-15ಗಂಟೆಗೆ ಸೇರಲು ನಿರ್ಧರಿಸಲಾಯಿತು)

ಸದನವು ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಪುನರಾರಂಭಗೊಂಡಿತು

(ಮಾನ್ಯ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

3. ರಾಜ್ಯ ಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಅಧ್ಯಕ್ಷರೇ, ನಿನ್ನೆ ನಾನು ಮಾತನಾಡುತ್ತಾ ಈ ರಾಜ್ಯದ ಆಡಳಿತದಲ್ಲಿ ತರಬೇಕಾದಂತಹ ಬದಲಾವಣೆ, ಸುಧಾರಣೆಗಳು, ಪಾರದರ್ಶಕವಾದ ಆಡಳಿತ ಕುರಿತು ಪ್ರಸ್ತಾಪಿಸಿದ್ದೆ. ರಾಜ್ಯಪಾಲರ ಭಾಷಣದಲ್ಲಿ ನಾನು ಪ್ರಮುಖವಾಗಿ ಕಂಡಂತಹ ಮೂರು ರಾಷ್ಟ್ರೀಯ ಸಮಸ್ಯೆಗಳನ್ನು ಇಂದು ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೊದಲನೆಯದು, ಪ್ರಾಥಮಿಕ ಶಿಕ್ಷಣ, ಎರಡನೆಯದು ಪರಿಸರ, ಮೂರನೆಯದು ಜನಸಂಖ್ಯಾ ನಿಯಂತ್ರಣ. ಪ್ರಾಥಮಿಕ ಶಿಕ್ಷಣದ ಬಗ್ಗೆ ಪ್ಯಾರ 23, 24, 25ರಲ್ಲಿ ಕರ್ನಾಟಕ ರಾಜ್ಯದಲ್ಲಿ ಜನಸಾಮಾನ್ಯರನ್ನು ವಿದ್ಯಾವಂತರನ್ನಾಗಿ ಮಾಡಲು ತೆಗೆದುಕೊಂಡ ಕ್ರಮಗಳ ಬಗ್ಗೆ

ಪ್ರಸ್ತಾಪಿಸಲಾಗಿದೆ. ಅಧ್ಯಕ್ಷರೇ, ನನ್ನ ಮಾತಲ್ಲ, ಮೆಕೆ ಅವರು ಒಂದು ಕಡೆ ಹೇಳುತ್ತಾರೆ A vigilant citizen is a prize of democracy. ಇಂತಹ ಎಚ್ಚೆತ್ತ ಒಬ್ಬ ಪ್ರಜೆ ಪ್ರಜಾಪ್ರಭುತ್ವಕ್ಕೆ ಬೇಕೇಬೇಕು, ಅವಶ್ಯಕ, ಅನಿವಾರ್ಯ ಎಂಬುದನ್ನು ನಾವು ಅರಿತುಕೊಂಡರೆ ಒಬ್ಬ ಪ್ರಜ್ಞಾವಂತ ಪ್ರಜೆ ವಿದ್ಯೆ ಇಲ್ಲದೆ ಆಗಲು ಸಾಧ್ಯವಿಲ್ಲ. ಇದನ್ನು ಕೇವಲ ರಾಜ್ಯಕ್ಕೆ ಪ್ರಾಂತ್ಯಕ್ಕೆ, ದೇಶಕ್ಕೆ ಸೀಮಿತವಾಗಿ ನಾನು ಹೇಳುತ್ತಿಲ್ಲ. ಭಾರತ ದೇಶದಲ್ಲಿ ಇಂತಹ ಪ್ರಜ್ಞಾವಂತ ಪ್ರಜೆ ಮಾಡುವಂತಹ, ಸರ್ವರಿಗೂ ವಿದ್ಯೆ ಕೊಡುವುದರಲ್ಲಿ ಸಫಲರಾಗಿಲ್ಲವೆಂಬುದು ಅಂಕಿಅಂಶಗಳು ತೋರಿಸುತ್ತವೆ. ದೇಶಕ್ಕೆ ಸ್ವತಂತ್ರ ಬಂದ ಮೇಲೆ ಕರ್ನಾಟಕದಲ್ಲಿ ಅನಕ್ಷರತೆ ತೊಡೆದುಹಾಕಲು ಸುಮಾರು 34 ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆಯೆಂದು ಇಲಾಖೆಯವರ ಮೂಲಕ ನನಗೆ ತಿಳಿದುಬಂತು. ಸಾಕ್ಷರತಾ, ವಯಸ್ಕ ಶಿಕ್ಷಣ, ವಾಹನಗಳ ಮೇಲೆ ಶಾಲೆ ನಡೆಸುವುದು, ಹೀಗೆ 34 ಯೋಜನೆಗಳನ್ನು ಕಾರ್ಯಗತಗೊಳಿಸಿದ ಮೇಲೂ ಕರ್ನಾಟಕದಲ್ಲಿ ಶೇಕಡ 44ರಷ್ಟು ಅವಿದ್ಯಾವಂತರಿದ್ದಾರೆಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಪ್ರಜ್ಞಾವಂತ ಪ್ರಜೆ ಪ್ರಜಾಪ್ರಭುತ್ವಕ್ಕೆ ಅನಿವಾರ್ಯ ಅಗತ್ಯ ಎಂಬ ಅರಿವು ನಮಗಿರುವಾಗ ಇನ್ನೂ ಶೇ.44 ರಷ್ಟು ಅವಿದ್ಯಾವಂತರನ್ನಿಟ್ಟುಕೊಂಡು ಪ್ರಜಾಪ್ರಭುತ್ವವನ್ನು ಯಶಸ್ವಿ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಒಟ್ಟಾರೆ ನಾವೆಲ್ಲ ಪ್ರಯತ್ನ ಮಾಡಿ, ವಿವಿಗಳ ಶಿಕ್ಷಣ ತಾಂತ್ರಿಕ ಶಿಕ್ಷಣ ಇವುಗಳಿಗಿಂತ ಹೆಚ್ಚಿನ ಗಮನವನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟು ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡುವ ಕಾರ್ಯಕ್ರಮ ಕೈಗೊಂಡು ಈ ರಾಷ್ಟ್ರೀಯ ಕಾರ್ಯಕ್ರಮವನ್ನು ನಾವು ಯಶಸ್ವಿಗೊಳಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಎರಡನೇ ರಾಷ್ಟ್ರೀಯ ಕಾರ್ಯಕ್ರಮದ ಬಗ್ಗೆ ರಾಜ್ಯಪಾಲರು ಪ್ಯಾರ 21,22ರಲ್ಲಿ ಅರಣ್ಯದ ಬಗ್ಗೆ ಹೇಳಿದ್ದಾರೆ. ಅಧ್ಯಕ್ಷರೆ, ಬದುಕಿನ ಎಲ್ಲ ಸ್ಥಾವರದಲ್ಲಿ ಮಾಲಿನ್ಯ ಕಾಣುವುದೇ ನಮ್ಮ ದುರ್ದೈವವಾಗಿದೆ. ಅದು ಸಾಮಾಜಿಕ ಮಾಲಿನ್ಯ ಇರಬಹುದು. ಪರಿಸರ ಮಾಲಿನ್ಯ ಇರಬಹುದು, ಧರ್ಮದ ಹೆಸರಿನಲ್ಲಿ ಮಾಲಿನ್ಯವಿರಬಹುದು, ದೇವಸ್ಥಾನಗಳಲ್ಲಿ ಮಾಲಿನ್ಯ ಇರಬಹುದು. ಇವನ್ನೆಲ್ಲ ಬದಿಗಿಟ್ಟು ಪರಿಸರ ಮಾಲಿನ್ಯ ಕುರಿತು ಎರಡು ಮಾತು ಹೇಳಲಿಚ್ಛಪಡುತ್ತೇನೆ: ಪರಿಸರ ಮಾಲಿನ್ಯ ಯಾವ ಮಟ್ಟಕ್ಕೆ ತಲುಪಿದೆಯೆಂದರೆ, ಗಂಗಾನದಿ. ನೀರಿನ ಮಾಲಿನ್ಯತೆ ಬಗ್ಗೆ ಹೇಳುವಾಗ, ಒಂದು ಕಾಲದಲ್ಲಿ ಗಂಗೆಯಲ್ಲಿ ಮಿಂದುಬಂದರೆ ಮಾಡಿದ್ದ ಎಲ್ಲ ಪಾಪಗಳ ಪರಿಹಾರ. ಹೋಗಿಬನ್ನಿ ಕಾಶಿಗೆ ಎಂದು ಹಿರಿಯರು ಎಲ್ಲರನ್ನೂ ಕಳಿಸುತ್ತಿದ್ದರು. ನಾವೆಲ್ಲ ಬೆಚ್ಚಿಬೀಳುವಂತಹ ಪರಿಸ್ಥಿತಿ ಏನಪ್ಪ ಅಂದರೆ ಆ ಗಂಗೆಯ ನೀರು ಕಲುಷಿತವಾಗಿದೆ. ಎಷ್ಟು ಕಲುಷಿತ ಎಂದರೆ ಅಮೇರಿಕಾದಿಂದ 5 ಸಾವಿರ ಕೋಟಿ ಡಾಲರ್ ಪಡೆದು ಸ್ವಚ್ಛಗೊಳಿಸುವ ಕೆಲಸ ಕೈಗೊಳ್ಳುತ್ತಿದ್ದೇವೆ. ಮೂರು ತಿಂಗಳ ಹಿಂದೆ ನೀವೆಲ್ಲ ಪತ್ರಿಕೆಯಲ್ಲಿ ನೋಡಿರಬೇಕು: ವಾರಣಾಸಿಯಲ್ಲಿ ಅಮೇರಿಕದ ಕಾರ್ಯದರ್ಶಿ ಬಂದು ಸಭೆ ಮಾಡಿದ್ದಾರೆ, ಉದ್ದೇಶವೇನಪ್ಪ ಅಂದರೆ ಅವರ ನೆರವಿನಿಂದ ಗಂಗಾನದಿಯನ್ನು ಸ್ವಚ್ಛಗೊಳಿಸುವುದು. ಇದೊಂದು ಉದಾಹರಣೆ ಸಾಕು, ಜಲಮಾಲಿನ್ಯ ನಮ್ಮ ರಾಷ್ಟ್ರದಲ್ಲಿ ಯಾವ ಹಂತ ತಲುಪಿದೆ ಎನ್ನುವುದಕ್ಕೆ.

ಅಧ್ಯಕ್ಷರೆ ಇನ್ನು ಗಾಳಿಯ ಮಾಲಿನ್ಯ. ಈಗಾಗಲೇ ದೊಡ್ಡ ಪಟ್ಟಣಗಳಲ್ಲಿ ಮೂಗಿಗೊಂದು ಯಂತ್ರ ಕಟ್ಟಿಕೊಂಡು ತಿರುಗಾಡುತ್ತಿದ್ದೇವೆ. ಇನ್ನು ಸ್ವಲ್ಪ ದಿನದಲ್ಲೇ ನಮ್ಮ ಜೇಬಿನಲ್ಲಿ ಮಿನಿಸಿಲಿಂಡರ್ ಇಟ್ಟುಕೊಂಡು ಅದರಿಂದ ಆಮ್ಲಜನಕ ಪಡೆದು ಉಸಿರಾಡುವಂಥ ಪರಿಸ್ಥಿತಿ

ಬರುವುದರಲ್ಲಿ ಯಾವ ಅನುಮಾನವೂ ಇಲ್ಲ. ಇವತ್ತು ನೀರು ಕಲುಷಿತವಾಗಿರುವುದಷ್ಟೇ ಅಲ್ಲ ಅದರ ಲಭ್ಯತೆಯೂ ಕಡಿಮೆಯಾಗಿದೆ. ಎಷ್ಟು ಕಡಿಮೆ ಆಗಿದೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ದಿವಸಗಳ ಹಿಂದೆ ಒಂದು ಸಭಾಂಗಣದಲ್ಲಿ ಭಾಷಣ ಮಾಡುತ್ತ ಒಂದು ವಿಚಾರವನ್ನು ಹೇಳಿದರು ಅವರು ದಾವೋಸ್‌ನಲ್ಲಿ ನಡೆದ ಪ್ರಾಪಂಚ ಸಮ್ಮೇಳನವೊಂದರಲ್ಲಿ ಪಾಲ್ಗೊಂಡಿದ್ದರು, ಅಲ್ಲಿನ ಚರ್ಚೆ ವಿಷಯ ಏನಪ್ಪ ಅಂದರೆ, ಪ್ರಪಂಚದಲ್ಲಿ ಕುಡಿಯುವ ನೀರಿನ ಸಮಸ್ಯೆ. ಆ ಸಮ್ಮೇಳನದಲ್ಲಿ ಪ್ರಜ್ಞಾವಂತರೊಬ್ಬರು ಪ್ರತಿಪಾದಿಸಿದ್ದು there will be war between the nations and there will be a fight between the individuals for drinking water in future. ಎಂದರೆ ನಮಗೆಲ್ಲ ಆಶ್ಚರ್ಯವಾಗುವುದಷ್ಟೇ ಅಲ್ಲ ಅದ್ಭುತ ಅನ್ನಿಸುವುದಿಲ್ಲ, ಇದನ್ನು ಕೇಳಿ ನಮಗೆ ಭಯ ವಾಗುತ್ತದೆ ಬಹುಶಃ ಇದು ಅತಿಶಯೋಕ್ತಿಯಲ್ಲವೆನಿಸುತ್ತದೆ. 50 ವರ್ಷಗಳ ಹಿಂದೆ ಮಳೆ ಹೊಯ್ದು ಶೀತ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಮನೆಗಳು ಕುಸಿದು ಬೀಳುತ್ತಿದ್ದವು. ಆದರೆ ಇಂದು 600 ಅಡಿ ಆಳದಲ್ಲಿ ಬೋರ್‌ವೆಲ್ ಕೊರೆದರೂ ನೀರಿಲ್ಲ, ಬರೀ ಧೂಳು ಏಳುತ್ತದೆ. ಈ ಪರಿಸ್ಥಿತಿಯನ್ನು ಗಮನಿಸಿದಾಗ ನಮ್ಮಲ್ಲಿನ ನೀರಿನ ಲಭ್ಯತೆ, ಬೇಸಾಯಕ್ಕೆ ಹಾಗೂ ಕುಡಿಯುವುದಕ್ಕೆ ಎಷ್ಟು ಕಡಿಮೆಯಾಗಿದೆ ಎಂದು ತಿಳಿಯುತ್ತದೆ. ಇವತ್ತು ಏರ್‌ಪೋರ್ಟ್‌ನಲ್ಲಿ ಒಂದು ಲೀಟರ್ ನೀರಿನ ಬೆಲೆ 38 ರುಪಾಯಿ ನಾನಂತೂ ತೀರ್ಮಾನ ಮಾಡಿದ್ದೇನೆ ಸತ್ತರೂ ಈ ನೀರನ್ನು ಕೊಳ್ಳುವುದಿಲ್ಲ ಅಂತ. ಅದಕ್ಕೆ ಕಾರ್‌ನಲ್ಲಿ ನಾನು ನಾಲ್ಕು ಬಾಟಲ್ ಇಟ್ಟುಕೊಂಡು ಹೋಗುತ್ತೇನೆ. ಅಥವಾ ಒಂದು ಹಳ್ಳಿಗೆ ಹೋದಾಗ 14 ರೂಪಾಯಿ ಕೊಟ್ಟು ಒಂದು ಲೀಟರ್ ನೀರು ಕುಡಿಯುವಂತಾದರೆ, ಇವತ್ತು ಹುಟ್ಟಿದ ಮಗು 60 ವರ್ಷ ವಯಸ್ಸಿಗೆ ಕಾಲಿಡುವ ಹೊತ್ತಿಗೆ ಈ ದೇಶದ ಪರಿಸ್ಥಿತಿ ಏನಾಗುತ್ತದೆ? ಮುಂದಿನ ಜನಾಂಗಕ್ಕೆ ಕುಡಿಯಲು ನೀರೂ ಉಳಿಸದ ಪಾಪದ ಪರಿಸ್ಥಿತಿ ಸೃಷ್ಟಿಸಿದ ಜನಾಂಗಕ್ಕೆ ನಾವು ಸೇರ ಬೇಕಾಗುತ್ತದೆ. I think there is no alternative for taking remedial measures. ಆದರೆ ಹಾಲಿನ ಬೆಳೆ ಏಳು ರೂಪಾಯಿ ಎಮ್ಮೆ ತಂದು ಹುಲ್ಲು ಹಾಕಿ ನೀರು ಕುಡಿಸಿ ಮೈತಿಕ್ಕಿ ಹಾಲು ಕರೆದು ಮಾರಿದರೆ ಒಂದು ಲೀಟರ್ ಹಾಲಿನ ಬೆಲೆ ಅಮ್ಮಮ್ಮ ಅಂದರೆ 10 ರೂಪಾಯಿ ಆದರೆ ಕುಡಿಯುವ ನೀರಿನ ಬೆಲೆ ಹಳ್ಳಿಯಲ್ಲಿ 14 ರೂಪಾಯಿ ಏರ್‌ಪೋರ್ಟ್‌ನಲ್ಲಿ 38 ರೂಪಾಯಿ ಇದೆ. ಇದನ್ನು ಗಮನಿಸಿದಾಗ ದಾವಾಸ್‌ನಲ್ಲಿ ಯಾರೋ ಪುಣ್ಯಾತ್ಮ ಹೇಳಿದನಲ್ಲ there will be war between the nations and fight between the individuals for drinking water. ಎಂಬುದು ನಿಜವಾಗಬಹುದೇನೋ. ಆದ್ದರಿಂದ ನಾವಿವತ್ತು ಎಚ್ಚೆತ್ತುಕೊಳ್ಳುವ ಅವಶ್ಯಕತೆ ಇದೆ. ಇದನ್ನು ತಪ್ಪಿಸಲು ಯಾವ ಎಚ್ಚರ ವಹಿಸಬೇಕು ಅಂದರೆ ರಾಜ್ಯಪಾಲರು ತಮ್ಮ ಭಾಷಣದ ಪ್ಯಾರ 21, 22ರಲ್ಲಿ ದಯಪಾಲಿಸಿರುವ ತರಹ ಅರಣ್ಯಸಂಪತ್ತನ್ನು ವೃದ್ಧಿ ಮಾಡುವುದು ನಮಗೆ ಇಂದಿನ ಅನಿವಾರ್ಯ. ಗಿಡಮರಗಳನ್ನು ಬೆಳೆಸದೆ ಇದ್ದರೆ ಬಹುಶಃ ಮಳೆ ಬರುವುದಿಲ್ಲ, ಪರ್ಜನ್ಯಜಪ ಮಾಡಿದರೆ ಮಳೆ ಬರುವುದಿಲ್ಲ, ಮಂತ್ರಕ್ಕೆ ಮಾವಿನ ಕಾಯಿ ಉದುರುವುದಿಲ್ಲ.

ಮಳೆ ಬರಬೇಕಾದರೆ ಮುಂದಿನ ಜನಾಂಗಕ್ಕೆ ನೀರಿಲ್ಲದ ಪಾಪದ ಪರಿಸರವನ್ನು ಸೃಷ್ಟಿಸಿದ ಜನಾಂಗಕ್ಕೆ ನಾವು ಸೇರುವುದಿಲ್ಲ ಎನ್ನುವ ಪ್ರತಿಜ್ಞೆಯನ್ನು ನಾವು ಮಾಡಬೇಕಾದರೆ ಈ ನಾಡಿನ ಅರಣ್ಯ ಸಂಪತ್ತನ್ನು ಹೆಚ್ಚಿಸುವುದು ಅತ್ಯಂತ ಅನಿವಾರ್ಯ. ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಏನು

ಹೇಳುತ್ತಾರೆ ಎನ್ನುವುಂದು ನನಗೆ ಗೊತ್ತಿದೆ. ಜನರನ್ನೇ ದೇವರು ಎಂದು ತಿಳಿದುಕೊಂಡು ನಾನು ಬದುಕುಂಥವನು. ಪೂಜಿಸುವಂಥವನು. ಆರಾಧನೆ ಮಾಡುವಂಥವನು. ಯಾವ ಜಪವೂ ರಾಮಯ್ಯನನ್ನು ಅಲ್ಲಾಡಿಸುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಚಿಂತೆ ಬೇಡ. ನನ್ನ ಸ್ನೇಹಿತರು ಅವರ ಆಶೀರ್ವಾದ ಒಂದು ಇರಲಿ ಸಾಕು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನೀರಿನ ಲಭ್ಯತೆ ಇವತ್ತು ನಮ್ಮ ಕರ್ನಾಟಕದ ಪ್ರಶ್ನೆಯಲ್ಲ, ಭಾರತದ ಪ್ರಶ್ನೆಯಲ್ಲ, ಇದು ವಿಶ್ವದ ಪ್ರಶ್ನೆ. ಪ್ರಪಂಚದ ಪ್ರಶ್ನೆ. ಆದ್ದರಿಂದ ನಮ್ಮ ಗಿಡಮರಗಳನ್ನು ಅರಣ್ಯದ ಸಂಪತ್ತನ್ನು ಹೆಚ್ಚು ಮಾಡಿಕೊಳ್ಳಬೇದ್ದು ಅನಿವಾರ್ಯತೆ ಇದೆ. ಇರುವ ಅರಣ್ಯವನ್ನು ಕಾಪಾಡಬೇಕು, ಇಲ್ಲದಿರುವಂಥ ಅರಣ್ಯವನ್ನು ಬೆಳೆಸಬೇಕು. ನನಗತ ಅನಿಸುತ್ತದೆ, ಅದು ಶರಾವತಿ ಟೇಲ್ ಇರಬಹುದು, ಕೈಗಾ ಇರಬಹುದು, ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲೇಬೇಕಾದಂಥ ಅವಶ್ಯಕತೆ ನಮಗೆ ಇರುವುದರಿಂದ ನಮಗೆ ಇರುವಂಥ ಅರಣ್ಯಗಳನ್ನು ರಕ್ಷಿಸುವುದು ಇವತ್ತಿನ ಪರಿಸ್ಥಿತಿಯಲ್ಲಿ ತುಂಬಾ ಕಷ್ಟದ ಕೆಲಸ. ಇರುವ ಅರಣ್ಯಗಳನ್ನು ರಕ್ಷಿಸುವುದೆಂದರೆ ಸಾಧ್ಯತೆ ಇಲ್ಲ ಎಂದಮೇಲೆ ನಮಗೆ ಇರುವುದು ಒಂದೇ ಒಂದು ದಾರಿ. ಅದ್ಯಾವುದೆಂದರೆ ನಾಡನ್ನೇ ಕಾಡನ್ನಾಗಿ ಪರಿವರ್ತನೆ ಮಾಡುವುದು, ಇದು ಅತ್ಯಂತ ಅವಶ್ಯಕ. ನಮ್ಮ ಸ್ಮಶಾನಗಳು, ನಮ್ಮ ಶಾಲೆಗಳು, ನಮ್ಮ ವಿಧಾನಸೌಧದ ಸುತ್ತಮುತ್ತ ಇರುವ ಖಾಲಿ ಜಾಗ, ನಮ್ಮ ಮನೆಯ ಮೇಲೆ ಇರುವ ಖಾಲಿ ಜಾಗ, ರಸ್ತೆಯಲ್ಲಿರುವ ಖಾಲಿ ಜಾಗ, ಮೈದಾನಗಳು, ಎಲ್ಲೆಲ್ಲಿ ನಾಡಿನಲ್ಲಿ ಖಾಲಿ ಜಾಗಗಳು ಇದೆಯೋ ಅದೆಲ್ಲಾ ಕಡೆ ಅರಣ್ಯವನ್ನು ಬೆಳೆಸಿ ಸೋಷಿಯಲ್ ಫಾರೆಸ್ಟ್ರಿ ಎಂದು ಏನು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೋ ಆ ಕಾರ್ಯಕ್ರಮವನ್ನು ನಾವು ಯಥೇಚ್ಛವಾಗಿ ಕಾರ್ಯರೂಪಾಕ್ಕೆ ತರದಿದ್ದರೆ, ವಸಸಂಪತ್ತನ್ನು ಹೆಚ್ಚಿಸದಿದ್ದರೆ ಮಳೆ ಬರುವುದಿಲ್ಲ. ಮಳೆ ಬರದಿದ್ದರೆ ಜನಕ್ಷಾಮ ಒಂದೇ ಅಲ್ಲ, ಪರಿಸರವನ್ನು ಕೂಡ ನಾವು ಸ್ವಚ್ಛವಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ಅದಕ್ಕಾಗಿ ನಮ್ಮ ಸರ್ಕಾರ ಮಾನ್ಯ ರಾಜ್ಯಪಾಲರು ಹೇಳಿರುವ ಪ್ರಕಾರ ಈ ಪರಿಸರ ರಕ್ಷಣೆಗೆ ಇದು ರಾಷ್ಟ್ರೀಯ ಕಾರ್ಯಕ್ರಮ ನನ್ನ ಪ್ರಕಾರ ಇದನ್ನು ಅರಣ್ಯವನ್ನು ಹೆಚ್ಚಾಗಿ ಬೆಳೆಸುವುದರ ಮೂಲಕ ಉತ್ತಮವಾದಂಥ ಗಾಳಿ ಮತ್ತು ನೀರನ್ನು ಹೊಂದಲಿಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಇನ್ನು ಮೂರನೇಯ ರಾಷ್ಟ್ರೀಯ ಕಾರ್ಯಕ್ರಮ ನನ್ನ ಪ್ರಕಾರ ಎಂದರೆ ಜನಸಂಖ್ಯೆಯ ನಿಯಂತ್ರಣ. ಜನಸಂಖ್ಯೆಯ ನಿಯಂತ್ರಣವನ್ನು ನಾವು ಮಾಡದಿದ್ದರೆ ಬಹುಶಃ 'ಆನೆಯ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವ ಗಾದೆ ಏನಿದೆಯೋ ನಾವು ಮಾಡಿದ ಅಭಿವೃದ್ಧಿ ಕೆಲಸಗಳು ಈ ಜನಸಂಖ್ಯೆಯ ಹೆಚ್ಚಳದಿಂದಾಗಿ ಯಾವ ಪ್ರಯೋಜನಕ್ಕೂ ಬಾರದೇ ಇರತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತೇವತ. ಆ ಒಂದು ದೃಷ್ಟಿಯಿಂದ ನಿರ್ವಿವಾದವಾಗಿ ಜನಸಂಖ್ಯೆಯನ್ನು ನಿಯಂತ್ರಣ ಮಾಡುವ ಅವಶ್ಯಕತೆ ನಮಗೆ ಇದೆ. ಸ್ವಲ್ಪ ಮಟ್ಟಿಗೆ ನಾವು ಯಶಸ್ವಿ ಕೂಡ ಆಗಿದ್ದೇವೆ. ನನ್ನ ಸ್ನೇಹಿತರ ಅನುಭವ ಏನೋ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಯಾವ ಊರಿನಲ್ಲೂ ಪ್ರೈಮರಿ ಸ್ಕೂಲಿನ ಕಟ್ಟಡ ಕೇಳುವ ಜನಗಳೇ ಮುಂದೆ ಬರುತ್ತಿಲ್ಲ. ಪ್ರೈವೇಟ್ ಸ್ಕೂಲ್ ಕಟ್ಟಡ ಬೇಕು ಎಂದು ಯಾರೂಕೇಳುತ್ತಲೇ ಇಲ್ಲ. ಅಷ್ಟೇ ಅಲ್ಲ, ಬಹಳ ಜನರಿಗೆ ಇದು ಅನುಭವವಾಗಿರಬಹುದು. ನಮ್ಮ ಊರಿನಲ್ಲಿ ರೂಮುಗಳು ಖಾಲಿಯಾಗುತ್ತಾ ಇವೆ. ಇದರ ಕಾರಣವೇನೆಂದರೆ ಕರ್ನಾಟಕ ಕೇರಳದಂಥ ಅನೇಕ ರಾಜ್ಯಗಳಲ್ಲಿ they have successfully implemented the family planning programme.

I congragulate the Government and the officials fro this achievement. ಅತ್ಯಂತ ಹೃದಯಪೂರ್ವಕವಾಗಿ ಆ ಕೆಲಸವನ್ನು ಮಾಡಿದಂಥ ಅಧಿಕಾರಿಗಳನ್ನು ಮತ್ತು ಸರ್ಕಾರವನ್ನು ಅದು ಯಾವ ಪಕ್ಷದ ಸರ್ಕಾರವೋ, ಯಾರು ಮುಖ್ಯಮಂತ್ರಿಯಾಗಿದ್ದರೋ, ಯಾರು ಡಿಹೆಚ್‌ಓ ಆಗಿದ್ದರೋ, ಯಾರು ಡೈರೆಕ್ಟರ್‌ಆಗಿದ್ದರೋ ನನಗೆ ಅದು ಬೇಕಾಗಿಲ್ಲ. ಜನಸಂಖ್ಯೆಯ ನಿಯಂತ್ರಣ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಈ ರಾಜ್ಯದಲ್ಲಿ ಕಾರ್ಯರೂಪಕ್ಕೆ ತಂದಂಥ ಎಲ್ಲರನ್ನೂ ಕೂಡ ನಾನು ಅಭಿನಂದಿಸುತ್ತೇನೆ ಅದಕ್ಕಾಗಿ ಸನ್ಮಾನ್ಯ ರಾಜ್ಯಪಾಲರು 56ನೇ ಪ್ಯಾರಾದಲ್ಲಿ ಈ ಜನಸಂಖ್ಯೆಯ ಕಾರ್ಯಕ್ರಮಗಳ ನಿಯಂತ್ರಣವನ್ನು ಇನ್ನೂ ಹೆಚ್ಚಿನ ರೂಪದಲ್ಲಿ ನಾವು ಕಾರ್ಯರೂಪಕ್ಕೆ ತರುತ್ತೇವೆ ಎನ್ನುವಂಥ ಯಶಸ್ವಿ ಕಾರ್ಯಕ್ರಮಗಳ ಬಗ್ಗೆ ಅವರು ಪ್ರಸ್ತಾಪವನ್ನು ಮಾಡಿದ್ದಾರೆ. ಅದಕ್ಕೆ ನಾನು ಹೇಳಿದ್ದು, ಏಕೆ ನಾನು ರಾಷ್ಟ್ರೀಯ ಕಾರ್ಯಕ್ರಮ ಎಂದು ಹೇಳಿದ್ದು ಎಂದರೆ ಈ ಒಂದು ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಂಥ ಕೇರಳ ಮತ್ತು ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಶಿಕ್ಷೆಯನ್ನು ಕೊಡಲಿಕ್ಕೆ ಹೊರಟಿದೆ. ನಾನು ಮತ್ತೆ ಹೇಳುತ್ತಿದ್ದೇನೆ, ಇದು ಪಕ್ಷಾತೀತವಾಗಿ, ಪ್ರಾಂತ್ಯಾತೀತವಾಗಿ ಇರುವಂಥ ಪರಿಸ್ಥಿತಿಯನ್ನು ಗಮನಕ್ಕೆ ತರುತ್ತಿದ್ದೇನೆ. ರೂವ ದೃಷ್ಟಿಯಿಂದ ಎಂದರೆ ಕೇಂದ್ರ್ರದ ಅನೇಕ ಯೋಜನೆಗಳಿಗೆ ಹಣವನ್ನು ನಿಗದಿ ಮಾಡುವ ಸಂಧರ್ಭದಲ್ಲಿ ಜನಸಂಖ್ಯೆಯ ಆದಾದಮೇಲೆ ನಿಗದಿ ಮಾಡಬೇಕಾಗುತ್ತದೆ ಎನ್ನುವ ಒಂದು ಪ್ರಸ್ತಾವನೆ ಒಂದು ಕಾರ್ಯಕ್ರಮ ಕೇಂದ್ರಸರ್ಕಾರದ ಮುಂದೆ ಬರುತ್ತಾ ಇದೆ. ಇದು ಒಳ್ಳೆಯದಲ್ಲ. ಜನಸಂಖ್ಯೆಯ ನಿಯಂತ್ರಣದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದಂಥ ನಮ್ಮ ಸರ್ಕಾರಗಳಿಗೆ ನೀವು ಶಹಭಾಷ್‌ಗಿರಿಯನ್ನು ಕೊಡಬೇಕೇ ಹೊರತು ಹಣವನ್ನು ಜಾಸ್ತಿ ಮಾಡಿ ಜನಸಂಖ್ಯೆಯ ಆಧಾರದಮೇಲೆ ಹಣವನ್ನು ಒದಗಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ರಾಜ್ಯಗಳಿಗೆ ಶಿಕ್ಷೆ ಕೊಡುವುದನ್ನು ತಪ್ಪಿಸಬೇಕು ಎನ್ನುತ್ತಾ ಈ ಸದನದ ಮೂಲಕ, ತಮ್ಮೂಲಕ, ನಾನು ಕೇಂದ್ರಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಮೂರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಮಾಡುವುದಕ್ಕೆ ರಾಜ್ಯಪಾಲರು ಪ್ರಸ್ತಾವನೆಯನ್ನು ಮಾಡಿದ್ದಾರೆ. ನನ್ನ ಸ್ನೇಹಿತರನ್ನು ಎಲ್ಲರನ್ನೂ ನನ್ನ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇವೆ. ಮೂರು ವಿಷಯಗಳಲ್ಲಿ ರಾಷ್ಟ್ರೀಯ ಒಮ್ಮತ , ರಾಷ್ಟ್ರೀಯ ಸಮ್ಮತ, ರಾಷ್ಟ್ರೀಯ ಒಪ್ಪಿಗೆ ಮೂಡಿ ಬರಬೇಕಾಯಿತು. On three issues, national consensus should emerge. ಅವು ಯಾವುವು ಎಂದರೆ ಮೊದಲನೆಯದಾಗಿ ಯೋಜನಾ ವೆಚ್ಚದ ನಿಯಂತ್ರಣ, ಎರಡನೆಯದು ಜನಪ್ರಿಯ ಕಾರ್ಯಕ್ರಮಗಳನ್ನು ಮುಂದುವರಿಸುವ ಬಗ್ಗೆ ಚಿಂತನೆ, ಮೂರನೆಯದು ಏನು ನಾವೆಲ್ಲರೂ ಅವತ್ತಿನಿಂದ ಒಂದೇ ಸಮನೆ ಆತನಾಡುತ್ತಿದ್ದೇವೋ ಡಬ್ಲ್ಯು.ಟಿ.ಓ. ಅಂತರರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆಯ ಆಗುಹೋಗುಗಳು, ಈ ಮೂರು ವಿಷಯಗಳ ಬಗ್ಗೆ ನನಗೆ ಪ್ರಾಮಾಣಿಕವಾಗಿ ಅನಿಸುತ್ತದೆ, ಪಕ್ಷ, ಪ್ರಾಂತ್ಯ, ಇದೆಲ್ಲವನ್ನೂ ಬಿಟ್ಟು ಒಂದು ರಾಷ್ಟ್ರೀಯ ಒಮ್ಮತ, ರಾಷ್ಟ್ರೀಯ ಸಮ್ಮತ, ರಾಷ್ಟ್ರೀಯ ಒಪ್ಪಿಗೆ ಮೂಡಿ ಬರಬೇಕಾಗುತ್ತದೆ ಎನ್ನುವುದು ನನ್ನ ಬಲವಾದ ಅನಿಸಿಕೆ. ಮೊದಲನೆಯದು ಜನಪ್ರಿಯಕಾರ್ಯಕ್ರಮಗಳು, ನಾನು ಈ ಒಂದು ಸಭೆಯಲ್ಲಿ 10-15 ವರ್ಷಗಳ ಹಿಂದೆ ಆಗತಾನೆ ನಾನು 1983-84ರಲ್ಲಿ ವಿಧಾನಸಭೆಗೆ ಬಂದಿದ್ದೆ. ನಾನು ಅವತ್ತು ಒಂದು ಮಾತನ್ನು ಹೇಳಿದ್ದೆ. ಇತ್ತು ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ.

Cry as per the populist programmmes if you really want to take the country to a permanent development. ಈ ಜನಪ್ರಿಯ ಕಾರ್ಯಕ್ರಮಗಳಿಂದ ಅಶಾಶ್ವತವಾದ, ತಾತ್ಕಾಲಿಕವಾದ ಪರಿಹಾರವನ್ನು ನಾವು ಕಾಣುವುದಕ್ಕೆ ಸಾಧ್ಯತೆ ಆಗಬಹುದು. ಆದರೆ ಈ ಜನಪ್ರಿಯ ಕಾರ್ಯಕ್ರಮಗಳಿಂದ ಗರಿಷ್ಟ ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯತೆ ಆಗುವುದಿಲ್ಲ. ಆದಕ್ಕಾಗಿ ಈ ದೇಶದಲ್ಲಿ ಇವತ್ತು ಏನಾಗಿದೆ, ಒಬ್ಬರ ಮೇಲೆ ಒಬ್ಬರು ಕಾಂಪಿಟೆಷನ್. ಒಬ್ಬರು ತಾಳಿ ಕೊಡುತ್ತೇವೆಂದರೆ ಇನ್ನೊಬ್ಬರು ಕುಂಕುಮವನ್ನು ಕೊಡುತ್ತೇವೆಂದು ಹೇಳುತ್ತಾರೆ. ಒಬ್ಬರು ಪಂಚೆ ಕೊಡುತ್ತೇವೆಂದರೆ ಇನ್ನೊಂದು ರಾಜ್ಯದಲ್ಲಿ ಧೋತಿಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಈ ಒಂದು ಜನಪ್ರಿಯ ಕಾರ್ಯಕ್ರಮಗಳು ಏನಿದ್ದಾವೋ, ಜನರನ್ನು ಮೆಚ್ಚಿಸುವಂಥ ಕಾರ್ಯಕ್ರಮಗಳೇನು ಇದ್ದಾವೋ, ವೋಟಿನ ಬೇಟೆಗಾಗಿಯೇ ಕಾರ್ಯಕ್ರಮಕ್ಕೆ ತರುತ್ತಿರತ್ತಿ ಕಾರ್ಯಕ್ರಮಗಳನ್ನು ಏನಿವೆಯೋ ಈ ಕಾರ್ಯಕ್ರಮಗಳಿಗೆ ಒಂದು ಕಡಿವಾಣವನ್ನು ಹಾಕುವಂಥ ಕೆಲಸವನ್ನು ಇವತ್ತು ಯಾವ ರಾಜ್ಯಸರ್ಕಾರವೂ ಮಾಡುವುದಕ್ಕೆ ಧೈರ್ಯ ಇಲ್ಲ. because you have already given to them, you cannot snatch it. ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, ರಾಷ್ಟ್ರಮಟ್ಟದಲ್ಲಿ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ, ಒಮ್ಮತದ ಒಂದು ಅಭಿಪ್ರಾಯ ಮೂಡಿಬರಬೇಕಾಗುತ್ತದೆ. ನನ್ನ ಸ್ನೇಹಿತರು ಹೇಳುತ್ತಿದ್ದರು, Our Government itself is a beggar. Yes, It seems to be true if you see the present developments. ಇವತ್ತು ನಮ್ಮ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ನಾವು ಹುಡ್ಕೋ ಮುಂದೆ ಹೋಗಿ ಕೈಚಾಚಬೇಕು. ವಿಶ್ವಬ್ಯಾಂಕಿನ ಮುಂದೆ ಹೋಗಿ ಕೈಚಾಚಬೇಕು. ಆಮೇಲೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮುಂದೆ ಹೋಗಿ ಕೈ ಚಾಚಬೇಕು. ಈ ಪರಿಸ್ಥಿತಿ ಏಕೆ ಬಂದಿದೆ? ಈ ದೇಶದಲ್ಲಿ ಇವತ್ತು ತುಮಕೂರು ಜಿಲ್ಲಾ ಪರಿಷತ್ತಿನ ಬಜೆಟ್‌ನಲ್ಲಿ 70 ಕೋಟಿ ರೂಪಾಯಿಗಳ ಕೆಲಸವನ್ನು ಮಾಡುವುದಕ್ಕೆ 314 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಏನು ಇದು? ನಮ್ಮ ಜನಗಳಿಗೆ ಏನಾದರೂ ಗೊತ್ತಾದರೆ ಹಳ್ಳಿಗಳ ಕಡೆ ನಮ್ಮನ್ನು ಬಿಡುತ್ತಾರಾ? ಚರ್ಮ ಸುಲಿದುಹಾಕಿಬಿಡುತ್ತಾರೆ. 70 ಕೋಟಿ ರೂಪಾಯಿಗಳ ಕೆಲಸ ಮಾಡುವುದಕ್ಕೆ ತುಮಕೂರು ಜಿಲ್ಲೆಯಲ್ಲಿ ನಾವು ಕೊಡುತ್ತಿರುವ ಕೂಲಿ 314 ಕೋಟಿ ರೂಪಾಯಿಗಳು. ಮಡಿಕೇರಿ ಜಿಲ್ಲೆಗೆ ಹೋಗಿ ನಾನು ನೋಡಿದ್ದೇನೆ. 20 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿಸಲಿಕ್ಕೆ ಕೂಲಿ ಕೊಡುತ್ತಿರುವುದು 70 ಕೋಟಿ ರೂಪಾಯಿಗಳು. ಸ್ವಲ್ಪ ಹೆಚ್ಚುಕಡಿಮೆ The non-plan expenditure of all the states including the Central Government is 65% and onky 35% is available for plan expenditure. ಯೋಜನೇತರ ವೆಚ್ಚಗಳು ಶೇ. 65% ಆದರೆ ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಿಕ್ಕೆ ಇರತಕ್ಕ ಹಣ ಕೇವಲ ಶೇ. 35 ಪರ್‌ಸೆಂಟ್. ಈ 35 ಪರ್‌ಸೆಂಟೂ ಕೂಡ ಪೂರ್ತಿ ಅಭಿವೃದ್ಧಿಗೆ ಸಿಗುವುದಿಲ್ಲ. ಈ 35 ರಲ್ಲೂ ಕೂಡ there is salary portion again. ಇದನ್ನಾದರೂ ಕೂಡಿ, ನಮ್ಮ ಕೆರೆಕಟ್ಟೆಗಳು, ಕಾಲುವೆಗಳೆಲ್ಲಾ ಒಡೆದುಹೋಗಿವೆ. ರಸ್ತೆಗಳೆಲ್ಲಾ ಗುಂಡಿ ಬಿದ್ದಿವೆ ಎಂದರೆ ಇಲ್ಲಾ ಸ್ವಾಮಿ, ಅದರಲ್ಲೂ ಸ್ಯಾಲರಿ ಪೋರ್ಷನ್ ಇದೆ, ಅದ್ಯಾವುದೆಂದರೆ ಈ ಹೊಸ ಯೋಜನೆಗಳು ಬರುತ್ತವಲ್ಲಾ, ಆ ಹೊಸ ಯೋಜನೆಗಳೇ ಇಷ್ಟು ವರ್ಷ ಆದರಿಂದಲೇ ಸಂಬಳವನ್ನು ಕೊಡಬೇಕೆನ್ನುವ ಒಂದು

ನಿಯಮ ಇದೆ ಎನ್ನುತ್ತಾರೆ. ಆ ಒಂದು ದೃಷ್ಟಿಯಿಂದ ಈ ಸಂಬಳದ ಪ್ರೊಪೋರ್ಷನ್ ಈ ಯೋಜನೇತರ ವೆಚ್ಚದಲ್ಲೂ ಕೂಡ, ಯೋಜನಾ ವೆಚ್ಚದಲ್ಲೂ ಕೂಡ ಸೇರಿಕೊಂಡಿದೆ. ಆದ್ದರಿಂದ 65 ಭಾಗವನ್ನು ಸಂಬಳಕ್ಕೆ, ಸಾರಿಗೆಗೆ, ಸವಲತ್ತಿಗೆ, ಹೋಗುತ್ತಿದೆ. ನಾನು ಬರೀ ಅಧಿಕಾರಿಗಳನ್ನು ಕೇಳುತ್ತಿಲ್ಲ, ನಮ್ಮದೂ ಸೇರಿಕೊಂಡು ಇಂತಹ ಯೋಜನೇತರ ವೆಚ್ಚಗಳಿಗೆ 65 ಪರ್ಸೆಂಟನ್ನು ಖರ್ಚು ಮಾಡಿ ಕೇವಲ 35 ಪರ್ಸೆಂಟ್ ಯೋಜನೆಗಳ ವೆಚ್ಚಕ್ಕೆ ಇಟ್ಟುಕೊಂಡಿರುವಂತಹ ಪರಿಸ್ಥಿತಿಯಲ್ಲಿ ಸಾಲ ಮಾಡುವುದು ಎಲ್ಲ ಸರ್ಕಾರಕ್ಕೆ ಅನಿವಾರ್ಯವಾಗಿದೆ. ಇದನ್ನು ತಪ್ಪಿಸಲಿಕ್ಕೆ ಒಂದು ರಾಜ್ಯದ ಮುಖ್ಯಮಂತ್ರಿಗಳಿಂದ ಸಾಧ್ಯವಾಗುವುದಿಲ್ಲ. ಒಂದು ರಾಜ್ಯದ ಯಾವುದೇ ಪಕ್ಷದ ಸರ್ಕಾರದಿಂದ ಸಾಧ್ಯವಾಗುವುದಿಲ್ಲ. That is why, I beg, I plead with my friends all over the nation to emerge and find out a remedy for this problem.

ಇದು ರಾಷ್ಟ್ರೀಯ ಒಮ್ಮತವಾಗಿ ಬರಬೇಕು. ರಾಷ್ಟ್ರೀಯ ಸಮ್ಮತವಾಗಿ ಮೂಡಿ ಬರಬೇಕು ಎಂದು ಆ ಕಾರಣಕ್ಕಾಗಿಯೇ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾವು ಎಲ್ಲವನ್ನೂ ಚಿಂತನೆ ಮಾಡುತ್ತಿದ್ದೇವೆ. ಈ ರಾಷ್ಟ್ರದಲ್ಲಿ ಚಿಂತನೆ ಮಾಡುತ್ತಿದ್ದೇವೆ. ನಾನು ನಿನ್ನೆ ಒಂದು ಮಾತನ್ನು ಹೇಳಿದೆ. ಶಾಸಕರಿಗೆ ಹೊಣೆಗಾರಿಕೆ ಇದೆ. ಮಂತ್ರಿಗಳಿಗೆ ಹೊಣೆಗಾರಿಕೆ ಇದೆ. ಅಧಿಕಾರಿಗಳಿಗೆ ಹೊಣೆಗಾರಿಕೆ ಇದೆ. ನಮಗೆಲ್ಲರಿಗೂ ಅಕೌಂಟಬಲಿಟಿ ಇದೆ. ಈ ರಾಷ್ಟ್ರದ ಜನರಿಗೆ ಅಕೌಂಟಬಲಿಟಿ ಇಲ್ಲವೇನು? ಅವರಿಗೂ ಕೂಡ ಹೊಣೆಗಾರಿಕೆಯನ್ನು ತರಬೇಕಾಗುತ್ತದೆ. ಅವರ ಹೊಣೆಗಾರಿಕೆ ಏನು? ಅವರು ಉರಿಸುವಂತಹ ದೀಪಕ್ಕೆ ಎಲೆಕ್ಟ್ರಿಸಿಟಿ ಛಾರ್ಜನ್ನು ಕಟ್ಟಬೇಕಾಗುತ್ತದೆ. ಅವರು ಕಂದಾಯವನ್ನು ಕಟ್ಟಬೇಕಾಗುತ್ತದೆ. ಹೊಣೆಗಾರಿಕೆ ಕೇವಲ ಒಬ್ಬರಿಗೇ ಅಂತಲ್ಲ. We are conscious of our rights, but we are not conscious of our duties. ಆದ್ದರಿಂದ ಈ ದಿಸೆಯಲ್ಲಿ ಪ್ರತಿ ಒಂದು ರಾಜ್ಯದಲ್ಲಿ ಪ್ರತಿ ಒಂದು ರಾಷ್ಟ್ರದಲ್ಲಿ ಸಂಪತ್ತಿನ ಕ್ರೋಢೀಕರಣ ಕಡೆಗೆ ಗಮನವನ್ನು ನಾವು ಹರಿಸಬೇಕು Mobilisation of resources. ಅದನ್ನು ನಾವು ಮರೆತೇ ಬಿಟ್ಟಿದ್ದೇವೆ. ಅದಕ್ಕೇ ನಾನು ಸ್ನೇಹಿತರಿಗೆ ಬೆಳಿಗ್ಗೆ ಹೇಳುತ್ತಿದ್ದು The government itself is a beggar. ಹೌದು ಈ ಪರಿಸ್ಥಿತಿಯನ್ನು ತಂದವರು ಯಾರು? ಇವತ್ತು ಒಂದೂವರೆ ವರ್ಷಗಳ ಹಿಂದೆ ಈಚೆಗೆ ಸನ್ಮಾನ್ಯ ಕೃಷ್ಣ ಅವರು ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದ ಮೇಲೆ ಈ ಪರಿಸ್ಥಿತಿ ಸೃಷ್ಟಿ ಆಗಲಿಲ್ಲ. ಇದಕ್ಕೂ ಈ ಪಾಪ್ಯುಲಿಸ್ಟ್ ಪ್ರೋಗ್ರಾಮ್‌ಗೂ ಸಂಬಂಧವಿದೆ. ಎಂದಿನವರೆಗೆ ಯೋಜನೇತರ ವೆಚ್ಚವನ್ನು ಕಟ್ ಮಾಡಲಿಕ್ಕೆ ಅಥವಾ ಕಟ್ ಮಾಡಲಿಕ್ಕೆ ಅಥವಾ ಕಟ್ ಮಾಡಲಿಕ್ಕೆ ಸಾಧ್ಯ ಆಗುವುದಿಲ್ಲವೋ ಅಂದಿನವರೆಗೆ ಬೇರೆಯವರ ಮುಂದೆ ಭಿಕ್ಷೆಯನ್ನು ಬೇಡುವುದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದು ನಂಬರ್ ಒನ್. ಎರಡನೆಯದು ಎಂದಿನವರೆಗೆ ಪಾಪ್ಯುಲಿಸ್ಟ್ ಪ್ರೋಗ್ರಾಮ್‌ನ್ನು ನಡೆಸುತ್ತೀರೋ ಜನಮೆಚ್ಚಿಗೆ ಕಾರ್ಯಕ್ರಮಗಳಿಗೆ ಕಡಿವಾಣ ಹಾಕುವುದಿಲ್ಲವೋ, ನಿಮ್ಮ ಯೋಜನೇತರ ವೆಚ್ಚಗಳಿಗೆ ಕಡಿವಾಣ ಹಾಕುವುದರ ಜೊತೆಗೆ ನಮ್ಮ ಮೊಬಿಲೈಸೇಷನ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡದೇ ಇದ್ದರೆ ಇದನ್ನು ನಿಭಾಯಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ನಾನು ಮೊದಲನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಒಂದು ಯೋಜನೇತರ ವೆಚ್ಚಗಳಿಗೆ ಕಡಿವಾಣ ಹಾಕುವುದು ಮತ್ತು ಜನಪ್ರಿಯ ಕಾರ್ಯಕ್ರಮಗಳನ್ನು ನಿಲ್ಲಿಸಲಿಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಸಹಮತ ಮಾಡಿ

ಬರಬೇಕು. ಈ ವಿಷಯದಲ್ಲಿ ರಾಷ್ಟ್ರೀಯ ಚಿಂತನೆ ನಡೆಯಬೇಕು. ಒಮ್ಮತ ಮೂಡಿ ಬರಬೇಕು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತಿದ್ದೇನೆ.

ಇನ್ನು ಡಬ್ಲ್ಯುಟಿಓ ವಿಚಾರ. ಈ ಡಬ್ಲ್ಯುಟಿಓ ಬಗ್ಗೆ ಮತ್ತು ವಿಶ್ವದ ವ್ಯಾಪಾರ ಸಂಸ್ಥೆ ಬಗ್ಗೆ ನಾನು ಸಾಕಷ್ಟು ಕೇಳಿದ್ದೇನೆ. ಅದರ ಬಗ್ಗೆ ಚರ್ಚೆ ನಡೆಯುವುದಾದರೆ ನಾನು ಅದನ್ನು ಬಿಟ್ಟು ಬೇರೆ ವಿಚಾರ ಹೇಳುತ್ತೇನೆ. ಆಗ ನಾನು ಆ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ. ಆದರೆ ಒಂದು ಗೊಂದಲ ಇದೆ ಇದರೊಳಗೆ, ಅದನ್ನು ಅಂದರೆ ಈ ಗ್ಯಾಟ್ ಅಂದರೆ ಏನು? ಡಬ್ಲುಟಿಓ ಅಂದರೆ ಏನು? ನ್ಯಾಷನಲೈಸೇಷನ್ ಅಂದರೆ ಏನು? ಗ್ಲೋಬಲೈಸೇಷನ್ ಅಂದರೆ ಏನು? ಡಂಕಲ್ ಎಂದರೆ ಏನು? ಇದರ ಬಗ್ಗೆ ಎಲ್ಲ ವ್ಯಾಖ್ಯಾನಗಳನ್ನು ಭಾಷಣಗಳನ್ನು ಸೆಮಿನಾರ್‌ಗಳನ್ನು ನಾವು ಕಾಣುತ್ತೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ವರದಿಯನ್ನು ತರಿಸುವ ಮುಖಾಂತರ ಆ ವಿಷಯಗಳನ್ನು ಓದಿಕೊಳ್ಳುವುದಕ್ಕಾದರೂ ಒಂದು ಪುಣ್ಯದ ಕೆಲಸವನ್ನು ಮಾಡಿದ್ದಾರೆ. ನನಗತ ತಿಳಿದ ಮಟ್ಟಿಗೆ This has started with GATT. ಜನರಲ್ ಟ್ರೇಡ್ ಅಗ್ರಿಮೆಂಟ್ ಗ್ಯಾಟ್. ಡಂಕಲ್ ಎನ್ನುವುದು ಅದೊಂದು ವ್ಯಕ್ತಿಯ ಹೆಸರು. ಡಂಕಲ್ ಎನ್ನುವಂತಹ ವ್ಯಕ್ತಿ. ಈ ವ್ಯಾಪಾರ ಕಾರ್ಯಕ್ರಮ ಹೇಗಿರಬೇಕು ಎನ್ನುವುದರ ಬಗ್ಗೆ ಒಂದು ವರದಿಯನ್ನು ಸಲ್ಲಿಸಿದ್ದಾರೆ, ಅವರು ಡಂಕಲ್. ಡಬ್ಲುಟಿಓ ಎನ್ನುವುದು ಇತ್ತೀಚೆಗೆ ಬಂದಿರುವುದು, ಪ್ರಪಂಚದ ವ್ಯಾಪಾರಿ ಸಂಸ್ಥೆ. ಲಿಬರಲೈಸೇಷನ್ - ಉದಾರೀಕರಣ, ಗ್ಲೋಬಲೈಸೇಷನ್- ಜಾಗತೀಕರಣ ಎಲ್ಲ ಒಂದಕ್ಕೊಂದು ಸುತ್ತಿಕೊಂಡಿದ್ದಾವಲ್ಲ ಎಂದರೆ ನಿಜ. 1990ರ ದಶಕದಲ್ಲಿ ಅವತ್ತು ಅಧಿಕಾರದಲ್ಲಿ ಇದ್ದಂತಹ ಪಕ್ಷ ಲಿಬರಲೈಸೇಷನ್ ಅನ್ನು ಕಾರ್ಯರೂಪಕ್ಕೆ ತಂದಿದೆ. ಅದನ್ನು ಯಾವ ಪಕ್ಷ ಕಾರ್ಯರೂಪಕ್ಕೆ ತಂದಿದೆ, ಅದನ್ನು ಮುಂದಕ್ಕೆ ಪ್ರಸ್ತಾಪ ಮಾಡುತ್ತೇನೆ. ಅವತ್ತು ಲಿಬರಲೈಸೇಷನ್ ಎಂದರೆ ಏನು ಇತ್ತು ಅಂದರೆ ನಾನು ತಿಳಿದುಕೊಂಡಂತಹ ಮಟ್ಟಿಗೆ, ನನ್ನ ಹತ್ತಿರ ಮಾಹಿತಿ ಇಟ್ಟುಕೊಂಡಿರುವ ಮಟ್ಟಿಗೆ ಹೊರದೇಶದಿಂದ ಯಾವುದಾದರೂ ದೇಶಕ್ಕೆ ಅವಶ್ಯಕತೆ ಇರುವಂತಹ ವಸ್ತುಗಳನ್ನು ತರಲಿಕ್ಕೆ ಇದ್ದಂತಹ ಕೆಲವು ನಿರ್ದಿಷ್ಟವಾದಂತಹ ಕಂಡೀಷನ್‌ಗಳನ್ನು ರಿಲ್ಯಾಕ್ಸ್ ಮಾಡುವುದು That is what we have done in 1991. ಅವೊತ್ತು ಮಾಡುವಾಗ ಸುಮ್ಮನೆ ಮಾಡಿದ್ದಾರಾ? ಅದರ ಪ್ರಸ್ತಾಪ ನನ್ನ ಹತ್ತಿರ ಇದೆ. There was a restricted list. There was a negative list. Silk was in the negative list. Tor Dal was in the negative list. Palmoline oil was in the negative list. ನಾನು ಮತ್ತೆ ಮಾನ್ಯ ಜೆ. ಹೆಚ್. ಪಟೇಲ್ ಅವರನ್ನು ದಿನಕ್ಕೆ ಒಂದು ಸಾರಿ ಆದರೂ ಜ್ಞಾಪಿಸಿಕೊಳ್ಳದಿದ್ದರೆ ಸಮಾಧಾನ ಆಗುವುದಿಲ್ಲವೇನೋ? ಅವರೇನು ನಮ್ಮ ಪಕ್ಷದವರಲ್ಲ ಈಗ. ಆಗ ಬಿಡಿ. ಅವರಿಗೆ ಲೈಫ್ ಸೇವಿಂಗ್ ಡ್ರಸ್ಸ್ ಬೇಕಿತ್ತು. ನಾನು ದೆಹಲಿಯಲ್ಲಿ ಹೋಗಿ ಕೇಳಿದಾಗ ಯಾವುದೋ ದೇಶದಿಂದ ಔಷಧಿಯನ್ನು ತರಿಸುತ್ತಿದ್ದಾರೆ. ಅದು ಬಂದರೆ ಸರಿ ಹೋಗುತ್ತದೆ ಎಂದು ಹೇಳಿದರು. I have no objection. If this country imports Life-Saving drugs, can any human being oppose it? ಅದು ಯಾವ ಸರ್ಕಾರವಾದರೂ ಮಾಡಿರಲಿ ಅದನ್ನು ಡಾ|| ಮನ್‌ಮೋಹನ್ ಸಿಂಗ್ ಅವರು ಮಾಡಿದ್ದಾರೆ ಅಥವಾ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಮಾಡಿದ್ದಾರಾ? ಹೆಗಡೆಯವರು ಮಾಡಿದ್ದಾರಾ? ಅದು ಬೇಡ. ಅದರ ಬಗ್ಗೆ ಚರ್ಚೆ ಬೇಡ. ಆದ್ದರಿಂದಾಗಿ ಅವರು ಏನು ಮಾಡಿದರು

ಎಂದರೆ ಇಂತಹ ಸಂದರ್ಭದಲ್ಲಿ ಉದಾರವಾಗಿ ರಿಸ್ಟ್ರಿಕ್ಷನ್ಸ್ ಇಲ್ಲದೇ with certain conditions ಹೊರ ದೇಶದಿಂದ ಆಮದು ಮಾಡಿಕೊಳ್ಳಬಹುದು ಎಂದು ಹೇಳಿ ಉದಾರೀಕರಣ ನೀತಿಯನ್ನು ತಂದರು. ಅದಾದ ಮೇಲೆ ಎರಡನೇ ಹಂತ ಬಂತು. ಅದು ಗ್ಲೋಬಲೈಸೇಷನ್. ಆ ಗ್ಲೋಬಲೈಸೇಷನ್‌ನಲ್ಲಿ ಏನು ಮಾಡಿದರು ಅಂದರೆ ಪ್ರಪಂಚದ ಯಾವುದೇ ರಾಷ್ಟ್ರಕ್ಕೆ ಕೆಲವು ನಿಬಂಧನೆಗಳ ಪ್ರಕಾರ ವಸ್ತುಗಳನ್ನು ಕಳಿಸಬಹುದು. ಬೇರೆ ಯಾವುದೇ ದೇಶದಿಂದ ನಿಬಂಧನೆಯ ಪ್ರಕಾರ ಕೆಲವು ವಸ್ತುಗಳನ್ನು ತರಿಸಿಕೊಳ್ಳಬಹುದು. That has bee the second round which we can as Globalisation. ಅದು ಗ್ಲೋಬಲೈಸೇಷನ್ ಅಥವಾ ಜಾಗತೀಕರಣ. ಆಮೇಲೆ ಗ್ಯಾಟ್ ಬಂತು. ಡಂಕಲ್ ಕಮಿಷನ್ ರಿಪೋರ್ಟ್ ಬಂದ ಮೇಲೆ ಇಲ್ಲಿ ಗ್ಯಾಟ್ ಬಂತು. ಜನರಲ್ ಟ್ರೇಡ್ ಅಗ್ರಿಮೆಂಟ್. ಅವತ್ತೂ ಕೂಡ ನಮಗೆ ಅಷ್ಟು ತೊಂದರೆ ಆಗಲಿಲ್ಲ. ಜನರಲ್ ಟ್ರೇಡ್ ಅಗ್ರೆಂಟ್‌ನಲ್ಲಿ ಏನು ಇದೆ ಎಂದರೆ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದ ಜೊತೆಗೆ ವ್ಯಾಪಾರದ ವಿಷಯದಲ್ಲಿ ಒಪ್ಪಂದವನ್ನು ಮಾಡಿಕೊಳ್ಳಬಹುದು. ಅದನ್ನೆಲ್ಲಾ ಓದು ಎಂದರೆ ಪುಸ್ತಕ ದೊಡ್ಡದು ಇದೆ, ಓದುವುದಕ್ಕೆ ಆಗುವುದಿಲ್ಲ. The gist is that any independent sovereign country can enter into agreement with any other sovereign country. That is the simplest meaning of GATT. But see, how this WTO differs from all these things and how it is determental to the soverignity of the country? ಇದು ದೇಶಿಯ ಉದ್ಯಮಕ್ಕೆ ಹೇಗೆ ಮಾರಕವಾಯಿತು? ಗ್ಯಾಟ್ ಆಗಲಿಲ್ಲ, ಲಿಬರಲೈಸೇಷನ್ ಆಗಲಿಲ್ಲ. ಜಾಗತೀಕರಣ ಆಗಲಿಲ್ಲ. ಆದರೆ ವಿಶ್ವ ಜಾಗತೀಕರಣ ಆದ ಮೇಲೆ ಬಂದಂತಹ ಈ ನಾಡಿನ ಅಥವಾ ಈ ರಾಜ್ಯದ ಕೃಷಿ ಉತ್ಪನ್ನಗಳ ಮೇಲೆ ಕೆಟ್ಟ ಪರಿಣಾಮವನ್ನು ಬೀರಿತು ಎನ್ನುವುದು ನಮಗೆ ಅತ್ಯಂತ ಮುಖ್ಯವಾದ ವಿಷಯವಾಗಿದೆ. ಇವತ್ತು ಡಬ್ಲ್ಯುಟಿಓ ಅಂದರೆ ಏನು? ಇದರಿಂದ ಆದಂತಹ ಕೆಟ್ಟ ಪರಿಣಾಮ ಏನು ಎನ್ನುವುದನ್ನು ವಿಸ್ತಾರವಾಗಿ ಹೇಳಲಿಕ್ಕೆ ಹೋಗದೆ ಡಬ್ಲ್ಯುಟಿಓ ಅಂದರೆ ರಾಜ್ಯ ಸರ್ಕಾರ ಇರುವ ತರಹ, ಕೇಂದ್ರ ಸರ್ಕಾರದ ತರಹ ಅದೊಂದು ಜಾಗತಿಕ ಸರ್ಕಾರ. It is an international Government in respect of the trade. ಡಬ್ಲ್ಯುಟಿಓ ಅಂದರತ ಅವರಿಗೂ ಗೊತ್ತಿಲ್ಲ ಎಂದು ಮೊನ್ನೆ ಯಾರೋ ಇಲ್ಲಿ ಹೇಳುತ್ತಿದ್ದರು. ಇದೇನೂ ದೊಡ್ಡದಾಗಿ ತಲೆ ಕೆಡಿಸಿ ಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಇದೇನು ಪ್ರಪಂಚದ ಆಡಳಿತವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮಿಲಿಟರಿ ಆಡಳಿತ ಅಲ್ಲ. ಬರೀ ವ್ಯಾಪಾರದ ಆಡಳಿತವನ್ನು ನಿಂತ್ರಣದಲ್ಲಿ ಇಟ್ಟುಕೊಂಡಿರುವಂತಹ ಒಂದು ಸಂಸ್ಥೆ ಇದೆಯಲ್ಲಾ ಅದೇ ಡಬ್ಲ್ಯುಟಿಓ (WTO), ಅದೇ ವಿಶ್ವ ವ್ಯಾಪಾರಿ ಸಂಸ್ಥೆ. ಇದರಿಂದ ಏನು ಕೆಟ್ಟದ್ದು ಆಗಿದೆ. ಇವತ್ತು ಈ ಒಂದು ಒಪ್ಪಂದಕ್ಕೆ ರುಜು ಹಾಕಿರುವಂತಹ ರಾಷ್ಟ್ರಕ್ಕೆ ತನ್ನದೇ ಆದಂತಹ ವ್ಯಾಪಾರದ ಕಾನೂನನ್ನು ಜಾರಿಗೆ ತರಲಿಕ್ಕೆ ಸಾಧ್ಯ ಇಲ್ಲ. ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ, ನನ್ನ ಹತ್ತಿರ ಕಡತ ಇದೆ. ಭಾರತ ದೇಶದಲ್ಲಿ ಮಕ್ಕಳಿಂದ ದುಡಿಮೆ ರದ್ದಾಗಿದೆ. Child labour is prohibited ಅಷ್ಟೇ ಅಲ್ಲ ಚೈಲ್ಡ್ ಲೇಬರ್‌ನ್ನು ಉಪಯೋಗಿಸಿಕೊಂಡು ಯಾವುದಾದರೂ ಒಂದು ಕಾರ್ಖಾನೆಯಲ್ಲಿ ತಯಾರಿಸಿದಂತಹ ಪಧಾರ್ಥವನ್ನು ವ್ಯಾಪಾರ ಮಾಡಲಿಕ್ಕೆ ಅವಕಾಶ ಇಲ್ಲ. It is prohibited ಆದರೆ ಈ ವಿಶ್ವ ವ್ಯಾಪಾರಿ ಸಂಸ್ಥೆಯ ಒಪ್ಪಂದಕ್ಕೆ ರುಜು ಮಾಡಿದ ಮೇಲೆ ನಿಮ್ಮ ಕಾನೂನು ರಿಪೀಲ್ ಆಗುತ್ತದೆ Automatically it will be repealed. This is the danger of the WTO and this is the disastrous effect of the WTO.

4. 10 ಪಿ.ಎಂ.

ಗ್ಯಾಟ್‌ನಲ್ಲಿ, ಉದಾರೀಕರಣದಲ್ಲಿ ಮತ್ತು ಜಾಗತೀಕರಣದಲ್ಲಿ ನಮಗೆ ಸಮಸ್ಯೆ ಇರಲಿಲ್ಲ. ಆದರೆ, ಇವೊತ್ತು ಒಂದು ರಾಜ್ಯ, ಒಂದು ರಾಷ್ಟ್ರ ವಿಶ್ವ ವ್ಯಾಪಾರ ಒಪ್ಪಂದಕ್ಕೆ ತನ್ನ ರುಜು ಹಾಕಿದ ನಂತರ ತನ್ನದೇ ಆದಂಥ ವ್ಯಾಪಾರ ನೀತಿಯನ್ನು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ನಮಗೆ ಬಂದಿರುವ ಸಂಕಷ್ಟ, ತೊಂದರೆಯಾಗಿದೆ. ಈ ವಿಚಾರದಲ್ಲಿ ನನ್ನ ಸ್ನೇಹಿತರು ಕೆಲವು ಅಂಶಗಳನ್ನು ಹೇಳಿದಾಗ ಅವರ ಪ್ರಚೋದನೆಗೆ ಒಳಗಾಗದೇ ನಾನು ವಸ್ತುಸ್ಥಿತಿಯನ್ನು ಮಾತ್ರ ಹೇಳಬಯಸುತ್ತಿದ್ದೇನೆಯೇ ವಿನಾಃ ಯಾವುದೇ ಪಕ್ಷದ, ರಾಜ್ಯದ, ಜನಾಂಗದ ಪ್ರಭಾವಕ್ಕೊಳಗಾಗಿ ಈ ಮಾತನ್ನು ಹೇಳುತ್ತಿಲ್ಲ. ಇವೊತ್ತು ನಾನು ನಿರ್ವಿವಾದವಾಗಿ ಹೇಳುತ್ತಿರುವುದೇನೆಂದರೆ, ಯಾವ ಪಕ್ಷದ ಸರ್ಕಾರವೇ ಕೇಂದ್ರದಲ್ಲಿರಲಿ, ಆಮದಿನಂಥ ಅನಿಷ್ಟ ನೀತಿಯಿಂದ ರಾಷ್ಟ್ರೀಯ, ದೇಶೀಯ ಉದ್ದಿಮೆಗಳು ನಾಶವಾಗುತ್ತಿದೆ. This is my firm, definite and specific opinion, because of the imports. I say that our industries, particularly agricultural industries, are going to be affected. ಇದರಲ್ಲಿ ಎರಡನೇ ವಾದವಿಲ್ಲ. ಇದನ್ನು ಯಾರು ಮಾಡಿದರು? ಇದನ್ನು ತಂದವರು ಯಾರು? ಮನಮೋಹನ್ ಸಿಂಗ್ ಯಾರು? ನರಸಿಂಹರಾವ್ ಯಾರು? ಪ್ರಣಾಬ್ ಮುಖರ್ಜಿ ಯಾರು? ರಾಮಕೃಷ್ಣ ಹೆಗಡೆಯವರು ಯಾರು? ಅಟಲ್ ಬಿಹಾರಿ ವಾಜಪೇಯಿ ಯಾರು? ಇಂತಹ ಪಟ್ಟಿಯನ್ನು ಬೆಳೆಸಲು ನನಗಿಷ್ಟವಿಲ್ಲ. ಅಕಸ್ಮಾತ್ ಅಲ್ಲಿ ಯಾರೋ ಒಬ್ಬರು ಕುಳಿತುಕೊಳ್ಳುತ್ತಾರೆ. ನಾಳೆ ದಿವಸ ನಾವು-ನೀವು ಕುಳಿತುಕೊಳ್ಳಬಹುದು, ದು ಅಷ್ಟೊಂದು ಮುಖ್ಯವಲ್ಲ. 1991ರಲ್ಲಿ ಏನಾಯಿತು? ಮೊನ್ನೆ ದಿವಸ ಸದನದಲ್ಲಿ ನಡೆಯುತ್ತಿದ್ದಂಥ ಕಲಾಪವನ್ನು ನಾನು ತಮಾಷೆಯಿಂದ ನೋಡುತ್ತಾ ಕುಳಿತಿದ್ದೆ. ಈ ರಾಜ್ಯದ ರೈತರ ಹಿತ ಕಾಪಾಡುವುದಕ್ಕೆ ಪಕ್ಷಗಳಲ್ಲಿ ಸ್ಪರ್ಧೆ ನಡೆಯುತ್ತಿತ್ತು. ಅದೇ ಸಂದರ್ಭದಲ್ಲಿ ಹೊಣತಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನವೂ ಸಹ ನಡೆಯುತ್ತಿತ್ತು. Truem we are competing with each other to protect the interests of the farmers, but at the same time, you are shirking your responsibility. I am telling this as a Member of a Political Party. I am telling this keeping in view of the miseries of the farmers. ಇವೊತ್ತು ಹಳ್ಳಿಗಳಿಗೆ ಹೋಗುವುದಕ್ಕಾಗುತ್ತದೆಯೇ? ಇಲ್ಲಿ ತಣ್ಣಗೆ ಕುಳಿತಿದ್ದೇವೆ, ಹೊರಗಡೆಯಿರುವ ಬೆಂಕಿಯನ್ನು ತಡೆಯುವುದಕ್ಕಾಗುತ್ತದೆಯೇ? ಹಳ್ಳಿಗಳಲ್ಲಿರುವ ಹೊಲಗಳನ್ನು ನೋಡುವುದಕ್ಕಾಗುತ್ತದೆಯೇ? ದನಗಳ ಮೂಳೆಗಳನ್ನು ನೋಡುವುದಕ್ಕಾಗುತ್ತದೆಯೇ? ಇಲ್ಲಿ ರೈತರ ಹಿತ ಕಾಪಾಡುವುದಕ್ಕೆ ನಾವು ಸ್ಪರ್ಧೆ ಮಾಡುತ್ತೇವೆ ಮತ್ತು ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೂ ಎಲ್ಲರೂ ಪ್ರಯತ್ನ ಮಾಡುತ್ತೇವೆ. Yerm, liberalisation was brought in 1991 when the Congress Government was there. ವಯಸ್ಸಿನಲ್ಲಿ ನಾನು ದೊಡ್ಡವನಾಗಿದ್ದರೂ ಬುದ್ಧಿಯಲ್ಲಿ ಅತ್ಯಂತ ಕಿರಿಯನಾಗಿ ಈ ಸದನದಲ್ಲಿ ಅತ್ಯಂತ ವಿನಯದಿಂದ ನಾನು ಒಂದು ಪ್ರಶ್ನೆ ಕೇಳುತ್ತೇನೆ : ನರಸಿಂಹರಾವ್‌ರವರ ಸರ್ಕಾರ ಬಂದ ನಂತರ ಭಾರತ ದೇಶದಲ್ಲಿ all the successive Governments were non-Congress Governments. Who prevented them the stopping of imports or scraping of liberalisation, globalisation or the

WTO.ನನ್ನ ಪ್ರಶ್ನೆ ಇಷ್ಟೆ; ಯಾರೇ ಇರಲಿ, ಪ್ರಧಾನಮಂತ್ರಿಯಾಗಿ ಗುಜ್ರಾಲ್ ಇದ್ದರು, ದೇವೇಗೌಡರು ಇದ್ದರು, ಅಟಲ್ ಬಿಹಾರಿ ವಾಜಪೇಯಿಯವರು ಇದ್ದರು, ರಾಮಕೃಷ್ಣ ಹೆಗಡೆಯವರು ವಾಣಿಜ್ಯ ಸಚಿವರಾಗಿದ್ದರು. ಇದನ್ನು ಕಾಂಗ್ರೆಸ್‌ನವರು ತಂದರೆಂದು ಒಪ್ಪಿಕೊಂಡ ನಂತರ ಅದನ್ನು ನಿಲ್ಲಿಸುವುದಕ್ಕೆ ನಿಮಗಿದ್ದಂಥ ಅಡ್ಡಿ ಏನು? ಮಾನ್ಯ ಅಧ್ಯಕ್ಷರೆ, ನನಗೊಂದು ಮಾತ್ರ ಜ್ಞಾಪಕಕ್ಕೆ ಬರುತ್ತಿದೆ. ''ಪಂಚಪುರ ಶಿಶುವೊಂದು ನೀರಿನಲ್ಲಿ ಮುಳುಗುತ್ತಿರೆ, ನನ್ನ ಮತಭ್ರಷ್ಟವಾಗುವುದೆಂದು ಸುಮ್ಮನಿದ್ದರೆ ಅದು ಧರ್ಮಸಮ್ಮತವೇನು? ಮನು ಹೇಳಿರಲಾರ ಅಯ್ಯಯ್ಯೋ, ಹೇಳಿದ್ದರೆ ನಿನ್ನೆದೆಯು ಎಲ್ಲ ಧೈರ್ಯವನ್ನು ಒಟ್ಟುಗೂಡಿಸಿ ಆ ಶಾಸ್ತ್ರದಲ್ಲಿ ಬರೆದಿಟ್ಟಿದ್ದು ಇಂದು ನಮಗೆ ಕಟ್ಟೇನು? ಎಂದೋ ಮನಮೋಹನ್‌ಸಿಂಗ್ ಬರೆದಿಟ್ಟಿದ್ದು ಇಂದು ನಮಗೆ ಕಟ್ಟೇನು? ಅವೊತ್ತಿನ ಪರಿಸ್ಥಿತಿ ಏನಿತ್ತೆಂಬುದು ನನಗೆ ಗೊತ್ತಿಲ್ಲ. ಮನಮೋಹನ್‌ಸಿಂಗ್‌ರಿಗೆ, ನಂಸಿಂಹರಾವ್ ರವರಿಗೆ, ಪ್ರಣಾಬ್ ಮುಖರ್ಜಿಯವರಿಗೆ ಆವೊತ್ತಿನ ದಿವಸ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಏನಿತ್ತೆಂಬುದು ನನಗೆ ಗೊತ್ತಿಲ್ಲ. ಇದನ್ನು ಏಕೆ ತಂದರೋ ಗೊತ್ತಿಲ್ಲ. ಅವರು ಮಾಡಿದ್ದು ಸರಿಯೆಂದು ನಾನು ವಾದ ಮಾಡುವುದಿಲ್ಲ. ಅವೊತ್ತು ಅವರು ಮಾಡಿದ್ದನ್ನು ಕಿತ್ತು ಹಾಕುವುದಕ್ಕೆ ನಿಮಗೆ ಏನು ಅಡ್ಡಿ ಇತ್ತು? ಅದಕ್ಕಾಗಿ ನಾನು ಹೇಳುತ್ತಿರುವುದೇನೆಂದರತ, ಇವೊತ್ತು ಕೇವಲ ಕರ್ನಾಟಕದಲ್ಲಿಷ್ಟೇ ಅಲ್ಲ, ಭಾರತ ದೇಶದಲ್ಲಿ ಬೆಲೆ ಕುಸಿತದಿಂದ ನಲುಗುತ್ತಿರುವ ಪ್ರತಿಯೊಬ್ಬ ರೈತನ ನರಳುವಿಕೆ, ನೋವು, ದುಃಖ, ಸಂಕಟದ ಪಾಪ ಇವರೆಲ್ಲರಿಗೂ ತಟ್ಟುತ್ತದೆ. ನಾನು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುವುದಕ್ಕೆ ಇಷ್ಟಪಡುವುದೇನೆಂದರೆ, ಸದನದಲ್ಲಿ ಹಿಂದೊಮ್ಮೆ ಜನಪದದ ಸಣ್ಣ ಕತೆಯೊಂದನ್ನು ಹೇಳಿದ್ದೆ. ಈಗಲೂ ಮತ್ತೊಮ್ಮೆ ದಯಮಾಡಿ ಹೇಳುತ್ತೇನೆ; ಏಕೆಂದರೆ, ರಾಜ್ಯದ ರೈತರ ಹಿತ ಕಾಪಾಡುವುದಕ್ಕೆ ಮತ್ತು ಅದೇ ಸಂದರ್ಭದಲ್ಲಿ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪಕ್ಷಗಳು ಯತ್ನಿಸುತ್ತಿರುವುದರಿಂದ ಇದು ಜ್ಞಾಪಕಕ್ಕೆ ಬಂತು. ಒಬ್ಬನಿಗೆ ಇಬ್ಬರು ಹೆಂಡತಿಯರು. ಅವರಲ್ಲಿ ಒಬ್ಬಳು ವಯಸ್ಸಾದವಳು ಮತ್ತೊಬ್ಬಳು ಹುಡುಗಿ. ವಯಸ್ಸಾದವಳಿಗೆ ತನ್ನ ಗಂಡ ತನ್ನಂತೆಯೇ ವಯಸ್ಸಾಗಿ ಕಾಣಲೆಂದು ಗಂಡನ ತಲೆಯಲ್ಲಿದ್ದ ಕಪ್ಪು ಕೂದಲನ್ನು ಕೀಳುತ್ತಾಳೆ. ಅದೇ ರೀತಿ ಮತ್ತೊಬ್ಬ ಹೆಂಡತಿಯಾದ ಹುಡುಗಿಯೂ ಸಹ ತನ್ನ ಗಂಡ ತನ್ನಂತೆಯೇ ಯುವಕನಾಗಿ ಕಾಣಲೆಂದು ಆತನ ತಲೆಯಲ್ಲಿದ್ದ ಬಿಳಿ ಕೂದಲುಗಳನ್ನೆಲ್ಲಾ ಕಿತ್ತಳಂತೆ. ಕೊನೆಗೆ ಆತನ ತಲೆ ಬೋಳಾಯಿತು! ಹಾಗೆ ಕೇಂದ್ರ ಸರ್ಕಾರದವರು ಮಾಡುತ್ತಾರೆಂದು ರಾಜ್ಯ ಸರ್ಕಾರದವರು, ರಾಜ್ಯ ಸರ್ಕಾರದವರು ಮಾಡುತ್ತಾರೆಂದು ಕೇಂದ್ರ ಸರ್ಕಾರದವರು ಒಬ್ಬರ ಮೇಲೊಬ್ಬರು ಜವಾಬ್ದಾರಿ ಹೊರಿಸಿ ಗಂಡ-ಹೆಂಡಿರ ಜಗಳದಲ್ಲಿ ಕೂಸು ಬಡವಾದಂತೆ ಕೇಂದ್ರ-ರಾಜ್ಯ ಸರ್ಕಾರಗಳ ನಡುವೆ ರೈತನನ್ನು ಬಡವಾಗಿಸುವುದನ್ನು ಮಾಡಬೇಡಿ. This is my pertinent appeal. Don't do this. let us accept the faults, either of the Central Government or of the State Government. Let us come out with national consensus on the issues. ಇದು ಒಂದು ಭಾಗವಾದರೆ, ಎರಡನೆಯ ಭಾಗ, ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಆಮದು ಮುಖ್ಯ ಕಾರಣವಾದರೂ ಕೂಡ ಬೇರೆ ಕಾರಣಗಳೂ ಇವೆ. ಅದೇನೆಂದರೆ, ಒಂದು ಕಾಲದಲ್ಲಿ ಈ ರಾಜ್ಯದಲ್ಲಿ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ತಿನ್ನುವುದಕ್ಕೆ ಅನ್ನ ಇಲ್ಲದಿರುವಂಥ ಸಂದರ್ಭದಲ್ಲಿ ಹೊರಗಡೆಯಿಂದ ಜೋಳ ತರಿಸಿಕೊಂಡು ತಿಂದು ಬದುಕಿದ್ದೇವೆ. ಅದನ್ನು ನಾವು ಮರೆಯಲು ಸಾಧ್ಯವಿಲ್ಲ. ಆದರೂ

ನಾವು ಆವುದನ್ನು ವಿರೋಧಿಸಲಿಲ್ಲ. ಎನ್ನುವಂಥ ವಾದವನ್ನು ಮುಂದಿಡುವಂಥ ಆಯೋಗ್ಯತನವನ್ನು ಪ್ರದರ್ಶಿಸಲು ನನಗೆ ಇಷ್ಟವಿಲ್ಲ. Whenever it is necessary! Life Saving Drugs. ಅಥವಾ ನಮಗೆ ಪ್ರಾಣ ಹೋಗುತ್ತದೆ ಎನ್ನುವುದಾದರೆ ಅದನ್ನು ಮಾಡಿಕೊಳ್ಳಿ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ I once again congragulate the agricultural scientists of this country and the farmers, who have achieved self-sufficiency in food prodcuction ಪಾಪವೇನು? ಆಮದಿನ ಜೊತೆಗತ ಈ ರಾಷ್ಟ್ರದಲ್ಲಿ ಕೃಷಿ ಉತ್ಪನ್ನಗಳ ಉತ್ಪತ್ತಿ ಹೆಚ್ಚಳವಾದದ್ದು ಮತ್ತೊಂದು ಕಾರಣ. ಅದಕ್ಕೋಸ್ಕರ ಬೆಲೆ ಕಡಿಮೆಯಾಯಿತೆಂಬ ಒಂದು ವಾದವನ್ನು ಒಪ್ಪವಂತಹದ್ದಾಗಿದೆ. ಕೃಷಿ ಉತ್ಪನ್ನಗಳ ಡಿಮ್ಯಾಂಡ್ ಅಂಡ್ ಸಪ್ಲೈ - if you apply the primary principles of Economics, increase in supply will reduce prices of the commodities. I fully agree with you ಯಾವ ದೇಶದಲ್ಲಿ ತಿನ್ನಲು ಅನ್ನವಿಲ್ಲದೆ ಬೀದಿಯಲ್ಲಿ ಬದುಕುತ್ತಿದ್ದಂಥ ಆ ಜನರಿಗೆ ತಿನ್ನುವುದಕ್ಕಾಗದ, ಅದಕ್ಕಿಂತಲೂ ಹೆಚ್ಚಾಗುವಷ್ಟು ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆದ ಈ ನಾಡಿನ ಕೃಷಿಕರಿಗತ ನೀವು ಶಿಕ್ಷೆ ಕೊಡುತ್ತೀರಿ, ಈ ನಾಡಿನ ಕೃಷಿ ವಿಜ್ಞಾನಿಗಳಿಗೆ ಶಿಕ್ಷೆ ಕೊಡುತ್ತೀರಿ. ಇದು ಇವರು ಮಾಡಿದ ಪಾಪವೇ? ಇವೊತ್ತೇನಾದರೂ ಈ ನಾಡಿನ ರೈತರೆಲ್ಲರೂ ಸಂಘಟಿತರಾದರೆ, ಸಂಘಟಿತರಾಗುವ ಸಂದರ್ಭವೊದಗಿದರೆ If they stop growing, producing foodgrains for two years, what will happen to this country. ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಕೃಷಿ ಉತ್ಪನ್ನಗಳ ಬೆಲೆ ಕಡಿಮೆ ಯಾಗುವುದಕ್ಕೆ ಕೇಂದ್ರ ಸರ್ಕಾರ, ಅದು ಯಾವ ಪಕ್ಷವೇ ಇರಬಹುದು. ಇವೊತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಇದೆ, ನಾಳೆ ಕಾಂಗ್ರೆಸ್ ಪಕ್ಷ ಬರುತ್ತದೆ, ಕಮ್ಯುನಿಸ್ಟ್ ಬರಬಹುದು. ಪ್ರಶ್ನೆ ಇವೊತ್ತಿನದಲ್ಲ. 1977ರಲ್ಲಿ ಕೇಂದ್ರದಲ್ಲಿ ಮೊದಲ ಬಾರಿ ಜನತಾ ದಳ ಸರ್ಕಾರ ಬಂದಾಗ ಜಾರ್ಜ್ ಫರ್ನಾಂಡಿಸ್‌ರವರು ವಾಣಿಜ್ಯ ಮಂತ್ರಿಗಳಾಗಿದ್ದರು. I wrote a letter to the then Minister.

ಸಿಲ್ಕ್‌ಗೂ ಹೊಗೆಸೊಪ್ಪಿಗೂ ಟ್ಯಾಲಿ ಮಾಡಲು ಹೋಗಿದ್ದರು. ಹೊಗೆಸೊಪ್ಪನ್ನು ಇಲ್ಲಿಂದ ಕಳುಹಿಸಿ ಅಲ್ಲಿಂದ ಸಿಲ್ಕ್ ಅನ್ನು ತರಿಸಿಕೊಳ್ಳಬೇಕೆಂದು ಪ್ರಯತ್ನಿಸಿದ್ದರು. That was the first time when I wrote a letter opposing the import of silk. ಇದು ಅನಿಷ್ಠ ಪದ್ಧತಿಯೆಂದು ನಾನು ಅವೊತ್ತಿನಿಂದಲೇ ಕರೆದುಕೊಂಡು ಬಂದಿದ್ದೇನೆ. ಆ ಅನಿಷ್ಠ ಪದ್ಧತಿಯೇ ಇದಕ್ಕೆಲ್ಲಾ ಮೂಲ ಕಾರಣ. ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ನಾನು ಈ ಸದನದ ಮೂಲಕ ಕೋರುತ್ತೇನೆ. ಇವೊತ್ತು ಕೃಷಿಕರ ಉತ್ಪನ್ನಗಳ ಬೆಲೆ ಕಡಿಮೆಯಾಗುವುದಕ್ಕೆ ಆಮದು ನೀತಿ ಕಾರಣವೆಂದು ಮತ್ತು ವಿಶ್ವ ವ್ಯಾಪಾರ ಸಂಸ್ಥೆಯೊಂದಿಗತ ಮಾಡಿಕೊಂಡಿರುವಾ ಒಪ್ಪಂದವೇ ಕಾರಣವೆಂದು ಹೇಳಿದ ನಂತರ can we come out of W.T.O? No, we can't. As an Advocate I say. ನಾನು ಮೊನ್ನೆ ಒಂದು ಸೆಮಿನಾರ್‌ಗೆ ಹೋಗಿದ್ದಾಗ ನ್ಯಾಷನಲ್ ಸ್ಕೂಲ್‌ನಿಂದ ಬಂದಿದ್ದಂಥ ಲಾಯರ್ಸ್, ಪ್ರೊಫೆಸರ್ಸ್ ಬಹಳ ಚೆನ್ನಾಗಿ ಮಾತನಾಡಿದರು. NO we can't come out of W.T.O. at this stage. ಎಂದು ನಾನು ಹೇಳುತ್ತಿಲ್ಲ, ಅವರು

ಹೇಳುತ್ತಾರೆ. ಅವರು ಬಹಳ ಎತ್ತರದಲ್ಲಿರುವ ವ್ಯಕ್ತಿ. India Government has committed a fault at the negotiations stage. They have not properly negotiated.

ಅದು ಯಾವ ಪಕ್ಷದ ಸರ್ಕಾರವಾದರೇನು? ನಾಳೆ ದಿವಸ ಕಾಂಗ್ರೆಸ್ ಪಕ್ಷದ ಸರ್ಕಾರ ಬಂದರೆ ಅದೇಜನರು ಅಲ್ಲಿರುತ್ತಾರೆ, ಬೇರೆ ಯಾರೂ ಇರುವುದಿಲ್ಲ. ಮತ್ತೆ ಕಮ್ಯುನಿಸ್ಟ್ ಪಕ್ಷದ ಸರ್ಕಾರ ಬಂದರೂ ಅವರೇ ಇರುತ್ತಾರೆ. ಈ ಜನ ಏನು ಮಾಡಿದ್ದಾರೆಂದರೆ, ನೆಗೊಷಿಯೇಷನ್ ಮಾಡುವ ಹಂತದಲ್ಲಿ ದಾರಿ ತಪ್ಪಿಸಿದ್ದಾರೆ. ಇದು ಮೊದಲ ಕಾರಣ. ಎರಡನೆಯ ಕಾರಣವೇನೆಂದರೆ, Agriculture is the State subject. ಭಾರತ ರಾಷ್ಟ್ರದ ಸರ್ಕಾರ, ಅದು ಯಾವುದೇ ಪಕ್ಷದ್ದಾಗಿರಲಿ, ಯಾವ ವಿಷಯ ಕೇಂದ್ರ ಸರ್ಕಾರದ ಒಪ್ಪಿಗೆಯಲ್ಲಿ ಬರುತ್ತದೋ, ತನ್ನ ಚೌಕಟ್ಟಿನೊಳಗೆ ಬರುತ್ತದೋ, ಆ ಒಂದು ವಿಷಯದ ಬಗ್ಗೆ ಒಪ್ಪಂದ ಮಾಡಿಕೊಳ್ಳುವ ಮೊದಲು ರಾಜ್ಯ ಸರ್ಕಾರಗಳನ್ನು ಕೇಳುವಂಥ ಕನಿಷ್ಠ ಗೌರವವನ್ನು ತೊರಲಿಲ್ಲ. ಬಿಜೇಪಿಯವರ ಸರ್ಕಾರ ಒಂದು ರಾಜ್ಯದಲ್ಲಿದ್ದರೆ, ಕಮ್ಯುನಿಸ್ಟ್ ಪಕ್ಷದ ಸರ್ಕಾರ ಇನ್ನೊಂದು ರಾಜ್ಯದಲ್ಲಿದೆ, ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರವನ್ನಷ್ಟೇ ಕೇಳಲಿಲ್ಲವೆಂದಲ್ಲ, ಯಾವುದೇ ರಾಜ್ಯ ಸರ್ಕಾರಗಳನ್ನು ಕೇಳಲಿಲ್ಲ. ಯಾವ ಒಪ್ಪಂದಕ್ಕೆ ಇವರು ರುಜು ಮಾಡುವುದರಿಂದ ರಾಜ್ಯ ಸರ್ಕಾರದ ಮೇಲೆ ನೇರವಾದ ಪರಿಣಾಮ ಬೀರಿತೋ, ಅಂತಹ ರಾಜ್ಯ ಸರ್ಕಾರಗಳನ್ನು ಗಣನೆಗೆ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡಲಿಲ್ಲ. ಇದಕ್ಕೆ ಯಾರು ಹೊಣೆ? ಬೆಲೆ ಕುಸಿತವಾಗಿರುವ ಒಂದು ಹಂತದ ಮುಂದಕ್ಕೆ ಏನಾಗಿದೆ ಎಂಬುದರ ಬಗ್ಗೆ ಸದನದಲ್ಲಿ ನಡೆಯುತ್ತಿರುವ ಚರ್ಚೆಯನ್ನು ನಾನು ಅವೊತ್ತಿನಿಂದಲೂ ನೋಡುತ್ತಿದ್ದೇನೆ: 'ರೈತರ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಿಲ್ಲ, ಖರೀದಿ ಮಾಡಿಲ್ಲ' ಎಂದೇ ಹೇಳುತ್ತಿದ್ದಾರೆ. ನಾನು ಒಂದು ಮಾತನ್ನು ಪ್ರಾಮಾಣಿಕವಾಗಿ ಕೇಳಬಯಸುವುದೇನೆಂದರೆ, ಯಾರ ನೋವಿಗೆ ಕಾರಣಕರ್ತರೋ, ಅವರೇ ನೋವನ್ನು ಕಡಿಮೆ ಮಾಡಬೇಕು. Who is responsible for all these disastrous circumstances. ಯಾರಿಂದ ನೋವು ಪ್ರಾರಂಭವಾಯಿತೆಂಬುದನ್ನು ನಾವು ಮೊದಲು ಪತ್ತೆಹಚ್ಚಬೇಕಾಗಿದೆ. ಪ್ರಾರಂಭವಾಗಿರುವ ಈ ನೋವಿಗೆ ಕಾರಣಕರ್ತರು ಯಾರೆಂದರೆ ಕೇಂದ್ರ ಸರ್ಕಾರದ ಆಮದು ನೀತಿ. ಅದು ಯಾವುದೇ ಪಕ್ಷದ ಸರ್ಕಾರವಿರಲಿ, ಇನ್ನು ಮುಂದೆ ಕಾಂಗ್ರೆಸ್ ಬರಬಹುದು, ಮುಂದೆ ನಾನು ಏನು ವಾದ ಮಾಡಬೇಕಾಗುತ್ತದೋ ಅದನ್ನು ಮಾಡುತ್ತೇನೆ. ಮುಂದೆ ಅದೇನೇ ಆಗಲಿ, ಇವೊತ್ತಿನ ಪರಿಸ್ಥಿತಿಯಲ್ಲಿ ನಾನು ಇದಕ್ಕೆ ಅಂಟಿಕೊಳ್ಳುವುದಕ್ಕೆ ಸಿದ್ಧನಾಗುತ್ತೇನೆ, ಪ್ರಯತ್ನ ಮಾಡುತ್ತೇನೆ. ಆಮದು ನೀತಿಯಿಂದ ಈ ರಾಷ್ಟ್ರದ ಕೃಷಿ ಉತ್ಪನ್ನಗಳ ಬೆಲೆ ಕುಸಿದು ಹೋಗಿದೆ. ಇದನ್ನು ಪರಿಹರಿಸಬೇಕಾಗಿರುವವರು ಯಾರು? ಖರೀದಿಸಿಲ್ಲವೆಂದು ಏಕೆ ಹೇಳುತ್ತಿದ್ದಾರೆ? ಖರೀದಿಯನ್ನು ಕಳೆದ ವರ್ಷದಿಂದ ಮಾಡುತ್ತಿದ್ದರಾ? ಅದರ ಹಿಂದಿನ ವರ್ಷದಿಂದ ಮಾಡುತ್ತಿದ್ದಿರಾ? ಹತ್ತು ವರ್ಷಗಳಿಂದ ಮಾಡುತ್ತಿದ್ದರಾ? ರೈತರ ಕೃಷಿ ಉತ್ಪನ್ನಗಳು ಇವೊತ್ತು ಬೀದಿಯಲ್ಲಿ ಬೀಳುವುದಕ್ಕೆ, ಅವರ ಉತ್ಪನ್ನಗಳನ್ನು ಕೊಂಡುಕೊಳ್ಳಲು ಆಗದಿರುವಂಥ ಪರಿಸ್ಥಿತಿ ಸೃಷ್ಟಿಯಾಗುವುದಕ್ಕೆ ಕಾರಣರಾರು? ಕೇಂದ್ರ ಸರ್ಕಾರ! ಇಷ್ಟನ್ನೂ ಹೇಳಿದ ನಂತರ ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ರಾಜ್ಯ ಸರ್ಕಾರದ ಜವಾಬ್ದಾರಿ ಇಲ್ಲವೆನ್ನುವಂಥ ಧಡ್ಡತನವನ್ನು ಪ್ರದರ್ಶಿಸಲು ನಾನು ಸಿದ್ಧನಿಲ್ಲ. ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ಆದರೆ,

ಇದರ ಸೃಷ್ಟಿಕರ್ತರು, ಇದಕ್ಕೆ ಕಾರಣಕರ್ತರಾದವರು ತಮ್ಮದೇನೂ ಜವಾಬ್ದಾರಿಯಿಲ್ಲವೆಂದರೆ, ಅದಕ್ಕೋಸ್ಕರವೇ ನಾನು ಹೇಳಿದ್ದು: ಇಲ್ಲಿ ರೈತರ ಹಿತ ಕಾಪಾಡುವಂಥ ಸ್ಪರ್ಧೆ ನಡೆಯುತ್ತಿದೆ, ಮತ್ತು ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥ ಪ್ರಯತ್ನವೂ ನಡೆಯುತ್ತಿದೆ. ನಮಗೇನೂ ಆಗಿಲ್ಲ, ಸಂಬಂಧವಿಲ್ಲವೆಂದು ಕೂಗಾಡಿದರೆ ಇದಕ್ಕೆ ನಾನೇನು ಹೇಳಲಿ? ರಾಜ್ಯ ಸರ್ಕಾರ ಏನು ಮಾಡಬೇಕು? ಖರೀದಿ ಮಾಡಬೇಕು. ಎಷ್ಟು ಖರೀದಿಸುವುದಕ್ಕೆ ಸಾಧ್ಯ? ಇದು ಶಾಶ್ವತ ಪರಿಹಾರವೇ? ಇಲ್ಲ. ಅದಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಪ್ರಾರ್ಥನೆ ಇಷ್ಟೆ: ಅವರು ಎರಡು ವರ್ಷಗಳ ಕಾಲ ಭಾಷಣ ಮಾಡುವಾಗ ನಾನು ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೆ. ಆಮದು ಸುಂಕ ಹೆಚ್ಚು ಮಾಡುವುದರಿಂದ ಈ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸದನಕ್ಕೆ ಬಂದದ್ದು ಒಳ್ಳೆಯದಾಯಿತು. ಅವರು ಇಲ್ಲದಿದ್ದಾಗ ಹೇಳುವುದಕ್ಕೆ ನನಗಿಷ್ಟವಿರಲಿಲ್ಲ. ಅವರ ಬರುವಿಕೆಗಾಗಿಯೇ ನಾನು ಕಾಯುತ್ತಿದ್ದೆ. ಆಮದು ಸುಂಕವನ್ನು ಎಷ್ಟು ಪ್ರಮಾಣದಲ್ಲಿ ಹಾಕಬಹುದು? ಇವರು ಇಷ್ಟು ಹಾಕಿದ್ದಾರೆ? ಎನ್ನುವುದರ ಬಗ್ಗೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ 'ಗರಿಷ್ಠ ಹಾಕಿದ್ದಾರೆ' ಎಂದಿದ್ದಾರೆ.

ನಾನು ಬಹಳ ಕಷ್ಟಪಟ್ಟು ಅಂಕಿ-ಅಂಶಗಳನ್ನು ತರಿಸಿಕೊಂಡಿದ್ದೇನೆ. ಇದರ ಬಗ್ಗೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ: ಬಹುಶಃ ಕೇಂದ್ರದಲ್ಲಿ ಯಾವುದೇ ಪಕ್ಷದ ಸರ್ಕಾರವಿದ್ದರೂ ಕೂಡ ನಾನು ಈ ಭಾಷಣವನ್ನು ಮಾಡಿಯೇ ಮಾಡುತ್ತೇನೆ. ತೆಂಗಿನಕಾಯಿಗೆ ಗರಿಷ್ಠ ಶೇಕಡ 150 ಹಾಕಬಹುದು, ಇವರು ಶೇಕಡ 70ರಷ್ಟು ಹಾಕಿದ್ದಾರೆ, ಹಿಂದೆ ಶೇಕಡ 35 ಇತ್ತು, ಈ ವರ್ಷ ಶೇಕಡ 70 ಮಾಡಿದ್ದಾರೆ. ಅದೇ ರೀತಿ ಗೋಧಿಗೆ ನೂರರಷ್ಟು ಹಾಕಬಹುದು, ಈಗ ಶೇಕಡ 50 ಹಾಗಿದ್ದಾರೆ, ಹಿಂದೆ ಶೇಕಡ 35 ಇತ್ತು. ಅಕ್ಕಿಗೆ ಗರಿಷ್ಠ ಶೇಕಡ 150 ಹಾಕಬಹುದು, ಈಗ ಶೇಕಡ 70ರಿಂದ 80 ಮಾಡಿದ್ದಾರೆ, ಹಿಂದೆ ಶೇಕಡ 35 ಇತ್ತು. ಪಲ್ಸಸ್‌ಗೆ ಯಾವುದೇ ಟ್ಯಾಕ್ಸ್ ಹಾಕಿಲ್ಲ. ನನ್ನ ಎಣಿಕೆ ತಪ್ಪಾಗಿದೆಯೆಂದು ಅವರು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಇದಾದ ಬಳಿಕ ಆಯಿಲ್‌ಗೆ ಗರಿಷ್ಠ ಆಮದು ಸುಂಕ ಇರುವುದು ಶೇಕಡ 300ರಷ್ಟು, ಇವರು ಶೇಕಡ 75ರಷ್ಟು ಹಾಕಿದ್ದಾರೆ, ಹಿಂದೆ ಶೇಕಡ 35 ಇತ್ತು. ನಾನು ಹಳೆಯ, ಪರಿಷ್ಕೃತ ಮತ್ತು ಗರಿಷ್ಠ ಈ ಮೂರು ವಿವರಗಳನ್ನು ತರಿಸಿದ್ದೇನೆ, ಅವರ ಸರ್ಕಾರದಿಂದಲೇ ತರಿಸಿದ್ದೇನೆ. ಆದುದರಿಂದ, ಪ್ರೈಮರಿ ಮೇಜ್, ಪ್ಯಾಡಿ ಕಮಾಡಿಟೀಸ್‌ಗೆ ಶೇಕಡ ನೂರರಷ್ಟು, ಪ್ರೊಸೆಸ್ ಕಮಾಡಿಟೀಸ್‌ಗೆ ಶೇಕಡ 150 ರಷ್ಟು, ಆಯಿಲ್‌ಗೆ ಶೇಕಡ 300ರಷ್ಟು ಮತ್ತು ಪಲ್ಸಸ್‌ಗೆ ಸೊನ್ನೆ, ಏನೂ ಇಲ್ಲ. ಇದನ್ನು ಕೇಂದ್ರ ಸರ್ಕಾರದ ಕಛೇರಿಯಿಂದಲೇ ನಾನೂ ಕೂಡ ಅವರಂತೆಯೇ ಅಂಕಿ-ಅಂಶಗಳನ್ನು ತರಿಸಿದ್ದೇನೆ. ಆದಕಾರಣ, ನನ್ನ ಒಂದೇ ಒಂದು ಪ್ರಾರ್ಥನೀಯ ಹಂತದಲ್ಲಿ ಯಾರನ್ನೂ ದೂಷಿಸದೆ..... ಏಕೆಂದರೆ, ನಾನು ಇವೊತ್ತು ಕೂಡ ಒಬ್ಬ ರೈತನ ಮಗನಷ್ಟೇ ಅಲ್ಲ, ಆಕಸ್ಮಿಕವಾಗಿ ಒಬ್ಬ ಲಾಯರ್ ಆಗಿ ಬಂದೆನೇ ಹೊರತು ಬೇಸಾಯದ ಬಗ್ಗೆ ಇನ್ನೂ ಅಂಟಿಕೊಂಡಿರುವವನಾಗಿದ್ದು, ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ: ನೀವೆಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ, ಮಾನ್ಯ ಪ್ರಧಾನಮಂತ್ರಿಗಳು ಕೂಡ ಈ ಬಗ್ಗೆ ಮನಸ್ಸು ಮಾಡಿದಂತೆ ಕಾಣುತ್ತದೆ. ಈ ಮ್ಯಾಕ್ಸಿಮಮ್ ಟ್ಯಾರಿಫ್ ಏನಿದೆ, ಇದನ್ನು ಇಂಪೋರ್ಟ್ ಡ್ಯೂಟಿ ಮೇಲೆ ಹಾಕಿದರೆ ಇದರಿಂದ ಸ್ವಲ್ಪಮಟ್ಟಿಗೆ ನಮಗೆ

ಪರಿಹಾರ ಸಿಗುವುದಕ್ಕೆ ಸಾಧ್ಯವಾಗುತ್ತದೆ. I plead with my freinds in the opposition, particularly those who represent the ruling party at the centre to insist on their Government to impose maximum import duty on these materials. ಅಷ್ಟನ್ನಾದರೂ ನೀವು ಮಾಡಿದರೆ ನಿಜವಾಗಲೂ ನಾನು ಈ ಸದನದಲ್ಲಿ ನಿಮ್ಮನ್ನು ಅಭಿನಂದಿಸುತ್ತೇನೆ. ಮ್ಯಾಕ್ಸಿಮಮ್ ಇಂಪೋರ್ಟ್ ಡ್ಯೂಟಿ ಹಾಕಿಲ್ಲದಿರುವುದರಿಂದ ಇದನ್ನು ಮಾಡಿಸುವಂಥ ಪ್ರಯತ್ನ ಮಾಡಿ ನಮ್ಮ ರೈತರ ನೆರವಿಗೆ ಬರಬೇಕೆಂದು ನಾನು ಪ್ರಾರ್ಥಿಸುತ್ತೇನೆ. ನಾನು ಆಗಲೇ ಹೇಳಿದಂತೆ ವಿಶ್ವ ವ್ಯಾಪಾರ ಸಂಸ್ಥೆಯಿಂದ ಹೊರಗಡೆ ಬರುವುದಕ್ಕೆ ಸಾಧ್ಯವಿಲ್ಲ. ಇದು ಅನಿವಾರ್ಯವಾಗಿದ್ದು, ನಾವು ಮುಂದೆವರಿಯಲೇಬೇಕಾಗುತ್ತದೆ. WTO it is inevitable because we have already signed. ಮತ್ತೇನು ಪರಿಹಾರದ ಮಾರ್ಗ? ನಾವು ಪರಿಹಾರ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ನನ್ನ ಅಲ್ಪಮಟ್ಟಿಗೆ ತೋಚಿರುವುದಿಷ್ಟೆ: After reading all these agreements and negotiations, after hearing so many seminars on the subject, ನನಗೆ ತಿಳಿಯುವುದಿಷ್ಟೆ: Mexico has come up. ಈ ಒಂದು ಪರಿಸ್ಥಿತಿ ಕೇವಲ ದೇಶಕ್ಕೆ ಮಾತ್ರ ಬಂದಿಲ್ಲ, ಕೃಷಿ ಉತ್ಪನ್ನಗಳ ಮೇಲೆ ಅವಲಂಬನೆಯಾಗಿರುವಂಥ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಈ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಅವರೆಲ್ಲಾ ಸನ್ನದ್ಧರಾಗುತ್ತಿದ್ದಾರೆ, ಉದ್ದಕ್ಕೂ ನಿಲ್ಲುತ್ತಿದ್ದಾರೆ. ಅವರ ಜೊತೆ ನಾವೂ ಸೇರಿಕೊಂಡು ಈ ಒಪ್ಪಂದಗಳಿಂದ ಆಗುತ್ತಿರುವಂಥ ಕೆಟ್ಟ ಪರಿಣಾಮಗಳೇನಿವೆ, ಅದನ್ನು ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನ ಮಾಡುವುದೊಂದೇ ಮಾರ್ಗ ನಮಗೀಗ ಉಳಿದಿರುವುದು. ನೆಗೋಷಿಯೇಷನ್ ಸ್ಟೇಜ್‌ನಲ್ಲಿ ಎಲ್ಲಿ ತಪ್ಪಿದ್ದಾರೋ, ನಿಮ್ಮ ಸರ್ಕಾರದವರೇ ಹೇಳುತ್ತಾರೆ: The Commerce Department has not consulted the Law Department ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗಿರುವ ಕಾಯಿಲೆ ಇದಲ್ಲ, ಎಲ್ಲಾ ಪಕ್ಷದವರೂ ಅಧಿಕಾರಕ್ಕೆ ಬಂದಾಗಲೂ ಈ ಕಾಯಿಲೆ ಇರುವಂಥದ್ದು. ಅವರನ್ನು ಕಂಡರೆ ಇವರಿಗಾಗುವುದಿಲ್ಲ, ಇವರನ್ನು ಕಂಡರೆ ಅವರಿಗಾಗುವುದಿಲ್ಲ. ಅವರದೇನು ಮಹಾ! ಇವರದೇನು ಮಹಾ! Commerce Department has not consulted the Law Department before the negotiations started for W.T.O. ಆದುದರಿಂದ, ಈ ಒಣ ಪ್ರತಿಷ್ಠೆಯನ್ನು ಬದಿಗೊತ್ತಬೇಕು. ನಾನು ಈ ಕುರಿತು ರೈತ ಎದುರಿಸುತ್ತಿರುವ ಸಮಸ್ಯೆಯನ್ನು ಗಮನಕ್ಕೆ ತರಬೇಕೆಂದರೆ, ಇತ್ತೀಚೆಗೆ ಬೆಂಗಳೂರಿನ ಪೀಣ್ಯದಲ್ಲಿರುವ ಕೈಗಾರಿಕೆಗಳ ಉದ್ಯಮಿಗಳು ಸರ್ಕಾರ ವಿದ್ಯುತ್ ದರ ಏರಿಸಿದ ಹಿನ್ನೆಲೆಯಲ್ಲಿ ಮುಷ್ಕರ ಹೂಡಿದರು. ಈ ಬಗ್ಗೆ ಪ್ರಕಟವಾಗಿರುವ ಒಂದು ವ್ಯಂಗ್ಯ ಚಿತ್ರದಲ್ಲಿ ಒಂದೆಡೆ ಮುಷ್ಕರ ಹೂಡುತ್ತಿರುವ ಕೈಗಾರಿಕೋದ್ಯಮಿಗಳು, ಅದೇ ಚಿತ್ರದಲ್ಲಿ ಕೆಳಗಡೆ ರೈತನ ಚಿತ್ರ ಬರೆದು ಆತನ ಮೇಲೆ ಭಾರವಾಗಿರುವ ಕಲ್ಲನ್ನು ಹೋರಿಸಿದ್ದಾರೆ. ರೈತನನ್ನು ಆ ವ್ಯಂಗ್ಯ ಚಿತ್ರದಲ್ಲಿ ಬರೆದಿದ್ದಾರೆ. ಇವರಿಗೆ ಎಲ್ಲಾದಕ್ಕೂ ರೈತನೇ ಸಿಗುತ್ತಾನೆ. ನಮ್ಮ ರೈತ ಅಷ್ಟು ಕೇವಲವೇ? ವ್ಯಂಗ್ಯ ಚಿತ್ರದಲ್ಲಿ ಆತನ ಮೇಲೆ ಕಲ್ಲಿನ ಭಾರ ಹೊರಿಸಿದ್ದಾರಲ್ಲ, ಕೈಗಾರಿಕೋದ್ಯಮಿಗಳು ಆ ಕಲ್ಲಿನ ಭಾರವನ್ನು ಹೊತ್ತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಅವರು ಮುಷ್ಕರ ಹೂಡುವುದಕ್ಕೆ ಆತನೇ ಬೇಕಾಗಿತ್ತೇ? ಆದುದರಿಂದ ಈ ಒಣ ಪ್ರತಿಷ್ಠೆಗಳನ್ನು ಬದಿಗಿಟ್ಟು ಈ ರೈತನಿಗೆ ಪರಿಹಾರ ಕೊಡುವಂತಹ

ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದವರು ಈಗಲಾದರೂ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಈ ವಿಚಾರದ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಆದರೂ ಕೂಡ ಇದರಲ್ಲಿ ಒಂದು ವಿಷಯ ಪ್ರಸ್ತಾಪಿಸುವುದು ತಪ್ಪಿಹೋಗಿದೆ ಎಂದು ನನಗನಿಸುತ್ತಿದೆ. ನಮಗೆ ಬೆಲೆ ಕಡಿಮೆಯಾಗಿರುವುದು ಅಷ್ಟೊಂದು ಪ್ರಾಮುಖ್ಯವಾದುದುದಲ್ಲ. ಬೆಲೆಯ ಅನಿಶ್ಚಿತತೆ ಬಹಳ ಮುಖ್ಯ. ಬೆಲೆಗಳು ಈಗ ಸ್ಥಿರವಾಗಿರುವುದೇ ಇಲ್ಲ. ಟೋಮ್ಯಾಟೋಗೆ ಕೆ.ಜಿ.ಗೆ. 25 ರೂ. ಬೆಲೆ ಇದೆ ಎಂದುಕೊಂಡು ರೈತರು ಸಾಲಸೋಲ ಮಾಡಿ, ಒಡವೆ ಮತ್ತು ತಮ್ಮ ದನಕರುಗಳನ್ನು ಮಾರಿ ಟಮ್ಯೋಟೋ ಬೆಳೆದು ಮಾರ್ಕೆಟ್‌ಗೆ ತೆಗೆದುಕೊಂಡು ಹೋಗುವಷ್ಟರಲ್ಲಿ ಅದರ ಬೆಲೆ ಕೆ.ಜಿ.ಗೆ. 20 ಪೈಸೆಗೆ ಇಳಿದಿರುತ್ತದೆ. ಮಂಡ್ಯದಲ್ಲಿ ಕಬ್ಬಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದರೆ ಭತ್ತ ಇತ್ಯದಿ ಬೆಳೆಗಳೆಲ್ಲವನ್ನೂ ಸಹಾ ಹಾಕಿ ಎಲ್ಲರೂ ಕೂಡ ಪೂರ್ತಿ ಕಬ್ಬನ್ನೇ ಬೆಳೆಯುತ್ತಾರೆ. ಆದರೆ ತಾವು ಬೆಳೆದ ಕಬ್ಬಿಗೆ ಒಳ್ಳೆಯ ಬೆಲೆ ಸಿಗದಿದ್ದಾಗ ಅವರು ಕಂಗಾಲಾಗುತ್ತಾರೆ. ಅದನ್ನು ಅವರು ಬೆಂಕಿ ಇಟ್ಟು ಸುಡಬೇಕಾದ ಪ್ರಸಂಗ ಬರುತ್ತದೆ. ಸರ್ಕಾರದ ತಪ್ಪು ನೀತಿಯಿಂದ ಆಗಿರುವಂತಹ ಕೆಟ್ಟ ಪರಿಣಾಮ ಕೇವಲ ಬೆಲೆ ಕುಸಿತವಷ್ಟೇ ಅಲ್ಲ. ಇದಕ್ಕಿಂತ ಹೆಚ್ಚಾಗಿ ಬೆಲೆಯ ಅನಿಶ್ಚಿತೆಯೂ ಕೂಡಾ ಸೇರಿದೆ. ಒಳ್ಳೆಯ ಬೆಳೆ ಬರುತ್ತದೆ, ಅದರಿಂದಾಗಿ ನನಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಕಾದು ಕುಳಿತುಕೊಂಡಿರುವ ರೈತನಿಗೆ ಏಪ್ರಿಲ್ ಒಂದನೇ ತಾರೀಖಿನಿಂದ if you dump the foreign agricultural produce ಇವತ್ತು ನೀವು ಎಲ್ಲೋ ಒಂದೆರಡು ಆತ್ಮಹತ್ಯೆ ಪ್ರಕರಣಗಳನ್ನು ಮಾತ್ರ ನೋಡುತ್ತಿದ್ದೀರಿ. ಆಗ ಪ್ರತಿಯೊಂದು ಊರಿನ ಮನೆ ಮನೆಯಲ್ಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನೋಡಬೇಕಾಗುತ್ತದೆ. Actually, if you have not seen the disastrous effect so far, this is just a preclude. ಇದು ಮುಂದೆ ಬರುವಂತಹ ಪರಿಣಾಮಗಳಿಗೆ ಒಂದು ಎಚ್ಚರಿಕೆ ಗಂಟೆಯಾಗಿದೆ. ಏಪ್ರಿಲ್ ಒಂದರಿಂದ ಅಗ್ರಿಮೆಂಟ್ ಕಾರ್ಯರೂಪಕ್ಕೆ ಬಂದರೆ, ಈಗ ಶಿಪ್‌ನಲ್ಲಿ ರಡಿಯಾಗುತ್ತಿರುವಂತಹ ಎಲ್ಲಾ ವಸ್ತುಗಳು ಭಾರತದೇಶಕ್ಕೆ ಬಂದು ಡಂಪ್ ಆದರೆ ಅನೇಕ ಆತ್ಮಹತ್ಯೆ ಪ್ರಕರಣಗಳನ್ನು ನಾವು ಕಾಣಬಹುದಾಗಿದೆ. ಇದಕ್ಕೆ ಕಾರಣಕರ್ತರಾದವರು ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಹೊರ ದೇಶಗಳಿಂದ ನಮ್ಮಲ್ಲಿಗೆ ಬರುವಂತಹ ಗೂಡ್ಸ್‌ಗಳು ಇಲ್ಲಿಗೆ ಬಾರದಂತೆ ನಿಲ್ಲಿಸಬೇಕಾಗುತ್ತದೆ. ಅವುಗಳಿಗೆ ಗರಿಷ್ಠ ಇಂಪೋರ್ಟ್ ಡ್ಯೂಟಿಯನ್ನು ಹಾಕಬೇಕಾಗುತ್ತದೆ. Then you will see the effect. ಇಷ್ಟನ್ನು ಮಾಡದೇ ಇದ್ದರೆ ಬಹುಶಃ ನಾವು ಆತ್ಮವಂಚನೆಯನ್ನು ಮಾಡಿಕೊಂಡಂತಾಗುತ್ತದೆ. ಇದನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಸಂಬಂಧಪಟ್ಟವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಡಬ್ಲ್ಯೂ.ಟಿ.ಓ. ನಿಂದ ನಾವು ಹೊರಗಡೆ ಬರುವುದಕ್ಕಾಗುವುದಿಲ್ಲ. ನೆಗೋಷಿಯೇಷನ್ ಅನ್ನು ಅದರೊಂದಿಗೆ ಮತ್ತೆ ಮಾಡಬೇಕು. ಇಷ್ಟನ್ನು ಮಾಡಿದ ತಕ್ಷಣ ಎಲ್ಲವನ್ನೂ ಕೇಂದ್ರ ಸರ್ಕಾರದ ಮೇಲೆ ಹೊರಿಸಿ ರಾಜ್ಯ ಸರ್ಕಾರ ಕೈಚೆಲ್ಲಿ ಕುಳಿತುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ಕೇಳಿ ಬಹುಶಃ ವಿರೋಧ ಪಕ್ಷದಲ್ಲಿರುವ ನನ್ನ ಸ್ನೇಹಿತರಿಗೆ ಸಂತೋಷವಾಗಿದೆ ಎಂದು ಅನಿಸುತ್ತಿದೆ. ರಾಜ್ಯ ಸರ್ಕಾರದ ಜವಾಬ್ದಾರಿಯೂ ಕೂಡ ಇದರಲ್ಲಿ ಸೇರಿದೆ. ಡಬ್ಲ್ಯೂ.ಟಿ.ಓ.ನಲ್ಲಿ *WTO* - Advantages ಅಂತಹ ಒಂದು ಚಾಪ್ಟರ್ ಇದೆ. If you get into the competition, quality will be upgraded. That is the first advantage. You can improve. ಜ್ಞಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡಬೇಕಾದರೆ ನಿಮ್ಮ ಗುಣಮಟ್ಟ ಹೆಚ್ಚಾಗಬೇಕು.

ನೀವು ನನ್ನನ್ನು ತೆಗೆದುಕೊಂಡು ಹೋಗಿ ದಾರಾಸಿಂಗ್ ಜೊತೆಗೆ ನಿಲ್ಲಿಸಿದರೆ ನಾನೇನು ಮಾಡಲಿ? ಮೊದಲು ನನ್ನನ್ನು ದಾರಾಸಿಂಗ್ ಆಗಿ ಮಾಡಿ And then put me into fighting. ಇದು ನಮ್ಮ ಪ್ರಶ್ನೆ. 'ಡಬ್ಲ್ಯೂ.ಟಿ.ಓ. ನಮಗೆ ಬೇಡ, ನಾವು ಕೂಪಮಂಡೂಕಗಳಂತೆ ಭಾರತ ದೇಶದ ಕರ್ನಾಟಕ ರಾಜ್ಯದ ಕುಣಿಗಲ್‌ನಲ್ಲೇ ಇರುತ್ತೇವೆ ಎಂದು ಹೇಳುವಂತಹ ಅಯೋಗ್ಯ ನಾನಲ್ಲ. ಜಾಗತಿಕ ವ್ಯಾಪಾರ ಸಂಸ್ಥೆಯ ಅವಶ್ಯಕತೆ ನಮಗೆ ಇದೆ. ಜಾಗತಿಕ ವ್ಯಾಪಾರ ಸಂಸ್ಥೆಯಲ್ಲಿ ನಮ್ಮ ವಸ್ತುವಿನ ಗುಣಮಟ್ಟದ ಸ್ಪರ್ದೆಗೆ ನಾವು ಸಿದ್ಧರಾದಾರ ನಮಗೆ ಅದರ ಅವಶ್ಯಿತೆ ಇದೆ. ಅದನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ. ಇದು ಕೇವಲ ರಾಜ್ಯ ಸರ್ಕಾರದಿಂದ ಮಾತ್ರವೇ ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗತ ಭಾರತ ದೇಶದ ಕೃಷಿ ಉತ್ಪನ್ನಗಳ ಗುಣಮಟ್ಟ ಅಂತರರಾಷ್ಟ್ರೀಯ ಮಟ್ಟಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಸ್ಪರ್ಧೆ ಮಾಡಲಿಕ್ಕೆ ನಮಗೆ ಸಾಧ್ಯತೆ ಇಲ್ಲ. The remedy is to see that our quality is upgraded and the technology is upgraded. ಎಲ್ಲಕ್ಕಿಂತ ಹೆಚ್ಚಾಗಿ ನಿಮಗೆ ಗೊತ್ತಿರುವಂತೆ ವ್ಯಾಪಾರದಲ್ಲಿ ಪ್ರಾಮಾಣಿಕತೆ ಮುಖ್ಯ. ಈ ದೇಶದಲ್ಲಿ ಮಾತ್ರವಲ್ಲ ಎಲ್ಲಾ ದೇಶಗಳಲ್ಲೂ ಕೂಡ ಅನೇಕ ಸಾರಿ ಗೂಡ್ಸ್‌ಗಳು ಹೋಗಿ, ಅವು ಚೆನ್ನಾಗಿರಲಿಲ್ಲ, ಅವುಗಳು ಕಳಪೆ ಗೂಡ್ಸ್, ಮೋಸ ಮಾಡಿದ್ದಾರೆ ಎಂದು ವಾಪಸ್ ಬರುತ್ತವೆ. ಎಲ್ಲಾ ದೃಷ್ಟಿಯಿಂದ ಗುಣಮಟ್ಟ ಹೆಚ್ಚಿಸುವುದು ಬಹಳ ಮುಖ್ಯ. Being a Member of the World Trade Organisation, ಈ ಸರ್ಕಾರದ ವ್ಯಾಪಾರ ತನ್ನ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಭಾರತ ದೇಶದ ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗಬೇಕಾದರೆ ಅದರ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವಂತಹ ಪ್ರಯತ್ನವನ್ನು ರಾಜ್ಯ ಸರ್ಕಾರಗಳು ಮಾಡಬೇಕು. ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾದರೆ ಏನು ಮಾಡಬೇಕು? ಮೊದಲನೆಯದಾಗಿ ತಳಿ ಬಗ್ಗೆ ಗಮನ ಕೊಡಬೇಕು. ಉತ್ತಮವಾದಂತಹ ತಳಿ ಇಲ್ಲದೇ ಇದ್ದರೆ ಯಾವುದೇ ಉತ್ತಮವಾದಂತಹ ಪ್ರಾಡಕ್ಟ್ ಬರುವುದಿಲ್ಲ. ಈ ತಳಿಯನ್ನು ಕೊಡುವಂತಹ ಕೆಲಸ ನಮ್ಮಂತಹ ರಾಜಕಾರಣಿಗಳ ಕೈಯಲ್ಲಿ ಆಗುವುದಿಲ್ಲ. ಅದು ವಿಜ್ಞಾನಿಗಳ ಕೈಯಲ್ಲಿರುತ್ತದೆ. ಇದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಬಹುತೇಕ ನಾನು ಮತ್ತು ನನ್ನ ಸ್ನೇಹಿತರುಗಳೆಲ್ಲಾ ರೇಷ್ಮೆ ವಲಯದಿಂದ ಬಂದವರಾಗಿದ್ದೇವೆ. ಯಾವುದೋ ಒಂದು ಕಾಲದಲ್ಲಿ ಬೈವೋಲ್ಟೀಸ್‌ನ ಎರಡು ತಳಿಗಳು ಬಂದಿದ್ದವು ಇವತ್ತಿನವರೆಗೂ nobody has replaced that race. ಆ ರೇಸ್ ಯಾವುದು ಎಂದರೆ, ಅದು ಚೈನಾದಿಂದ ಮತ್ತು ಜಪಾನ್‌ನಿಂದ ಬಂದಿದ್ದಾಗಿದೆ. ಜಪಾನ್‌ನಲ್ಲಿ ಬೇಸಾಯ ಆ ರೀತಿ ಇದೆ, ಭಾರತ ದೇಶದ ಬೇಸಾಯ ಈ ರೀತಿ ಇದೆ ಎಂಬ ವಾದವನ್ನು ನಮ್ಮ ಇಬ್ಬರು ಸ್ನೇಹಿತರು ಯಾವಾಗಲೂ ಹೇಳುತ್ತಿರುತ್ತಾರೆ. ಅವರು ಆ ರೀತಿ ಹೇಳಿದ್ದನ್ನು ಕೇಳಿದ ಮೇಲೆ ನಾನು ಬಹಳ ಯೋಚನೆ ಮಾಡಿದೆ. ಸನ್ಮಾನ್ಯ ಸ್ನೇಹಿತರೇ, ಭಾರತ ದೇಶದಲ್ಲಿ ಬೇಸಾಯ ಒಂದು ಜೀವನದ ಅವಿಭಾಜ್ಯ ಅಂಗ. It is a way of life. ಮುಂಗಾರು ಮಳೆ ಹುಯ್ಯಿತು ಎಂದಾಕ್ಷಣ ಹೆಗಲ ಮೇಲೆ ನೇಗಿಲು ಇಟ್ಟುಕೊಂಡು ಬುಟ್ಟಿಯಲ್ಲಿ ಬೀಜ ಇಟ್ಟುಕೊಂಡು ನಾವು ಬೇಸಾಯಕ್ಕೆ ಹೊರಡುತ್ತೇವೆ. ಬುಟ್ಟಿಯಲ್ಲಿರುವುದು ಯಾವ ಬೀಜ ಎಂದು ನಾವು ನೋಡುವುದಿಲ್ಲ. ಯಾವ ಬೆಳೆ ಹಾಕಬೇಕು ಎಂಬುದನ್ನೂ ಸಹಾ ನಾವು ನೋಡುವುದಿಲ್ಲ. Because it is just a way of life. But in Israel or any other country, Agriculture is a part of business. ನಾವು ಹೋಗುತ್ತೇವೆ, ನೇಗಿಲು ಎತ್ತಿ

ಊಳುತ್ತೇವೆ, ಹೊಲಕ್ಕೆ ಬಿತ್ತನೆ ಮಾಡುತ್ತೇವೆ. ಇತ್ತೀಚೆಗೆ ಕೋಲಾರ ಮತ್ತು ಈ ಕಡೆಗಿನ ಜಿಲ್ಲೆಯಲ್ಲಿ ಸ್ವಲ್ಪ ಬದಲಾವಣೆ ಆಗಿದೆ. ಬೆಳೆಯನ್ನು ಹಾಕುವಾಗ ಅದರ ಬೆಲೆಯನ್ನೂ ಸಹಾ ಸ್ವಲ್ಪ ಗಮನದಲ್ಲಿ ಇತ್ತೀಚೆಗೆ ಇಟ್ಟುಕೊಳ್ಳುತ್ತಿದ್ದಾರೆ. ಆದರೆ ನಮ್ಮಲ್ಲಿ ಇನ್ನೂ ಏನು ಬದಲಾವಣೆಯೂ ಸಹಾ ಆಗಿಲ್ಲ. ಮುಂಗಾರು ಮಳೆ ಬಿದ್ದ ತಕ್ಷಣ ನೇಗಿಲು ಎತ್ತಿಕೊಂಡು ಬೇಸಾಯಕ್ಕೆ ಹೊರಟು ಬಿಡುತ್ತಾರೆ. Because it is just a way of life. But in Israel or any other country, Agriculture is a part of business. ಅಲ್ಲಿಗೂ ಇಲ್ಲಿಗೂ ಎಷ್ಟೊಂದು ವ್ಯತ್ಯಾಸ ಇದೆ ಅಲ್ಲವೇ? ನಾನು ಜಪಾನ್‌ಗೂ ಹೋಗಿದ್ದೆ. ಆದರೆ ಇಸ್ರೇಲ್‌ಗೆ ಇನ್ನೂ ಹೋಗಿಲ್ಲ, ಏನಾದರೂ ಮಾಡಿ ಅಲ್ಲಿಗೆ ಹೋಗಬೇಕೆಂದರೆ ಏಕೋ ನಮ್ಮ ಸರ್ಕಾರದವರು ನನ್ನನ್ನು ಅಲ್ಲಿಗೆ ಕಳುಹಿಸಿಕೊಡುತ್ತಿಲ್ಲ. ಆ ದೇಶದಲ್ಲಿ ಬೇಸಾಯ ಒಂದು ವಾಪಾರವೇ ಆಗಿದೆ. ನಮ್ಮಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಕಡ್ಲೇಕಾಯಿ ವ್ಯಾಪಾರ ಮಾಡಿದಂತೆ ಅವರು ಬೇಸಾಯವನ್ನೂ ಕೂಡ ವ್ಯಾಪಾರ ಮಾಡುತ್ತಾರೆ. ಯಾವ ಬೀಜ ಹಾಕಬೇಕು? ಯಾವ ಗೊಬ್ಬರ ಹಾಕಬೇಕು? ಯಾವಾಗ ಯಾವ ಬೆಳೆ ಹಾಕಬೇಕು? ಎಂಬುದರ ಬಗ್ಗೆ ಅವರು ಆಲೋಚನೆ ಮಾಡುತ್ತಾರೆ. ಈ ದೇಶದಲ್ಲಿ ಅದರ ಬಗ್ಗೆ ಒಂದೂ ಯೋಚನೆ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆದಕ್ಕಾಗಿ ನಾನು ಆ ರೀತಿ ಹೇಳಿದ್ದು. ಆ ದೇಶದ ಪರಿಸ್ಥಿತಿಗೂ ಈ ದೇಶದ ಪರಿಸ್ಥಿತಿಗೂ ವ್ಯತ್ಯಾಸವನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಅಲ್ಲಿ ಸಲ್ಲುವುದು ಇಲ್ಲಿ ಸಲ್ಲುವುದಿಲ್ಲ, ಇಲ್ಲಿ ಸಲ್ಲುವುದು ಬೇರೆ ಕಡೆಗೆ ಸಲ್ಲುವುದಿಲ್ಲ. Take for example silk race. ನಾನು ಮತ್ತೆ ವಾಪಸ್ ರೇಷ್ಮೆ ಬಗೆಗಿನ ಚರ್ಚೆಗೆ ಬರುತ್ತೇನೆ. ಬೈವೋಲ್ಟೀಸ್ ಬಗ್ಗೆ ನಿಮಗೂ ಮತ್ತು ನನಗೂ ಗೊತ್ತಿದೆ. It is a very successful race during December and January ಇದನ್ನು ನೀವು ಸಹಾ ಒಪ್ಪಿಕೊಳ್ಳುತ್ತೀರಿ ಅಲ್ಲವೇ? ಅದು ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಬಹಳ ಚೆನ್ನಾಗಿ ಬರುತ್ತದೆ. ಒಕ್ಕಲೇರಿ ದೇವೇಗೌಡರು ಹೆಚ್ಚು ಬೆಳೆ ಬೆಳೆದಿದ್ದಕ್ಕಾಗಿ ದೊಡ್ಡ- ಬಹುಮಾನವನ್ನೇ ಪಡೆದಿದ್ದರು. ಈಗ ಒಕ್ಕಲೇರಿ ದೇವೇಗೌಡರು ಏನು ಆಗಿದ್ದಾರೆ? ಬೈವೋಲ್ಟೀಸ್ ತಳಿಗೆ ಏನು ಆಗಿದೆ? ಎಂಬುದನ್ನು ಕೇಳಿ ನೋಡೋಣ. ಇಂದಿನ ಸ್ಥಿತಿಗೆ ಏನು ಕಾರಣ? ಅದು ಚಳಿಗಾಲದಲ್ಲಿ ಬಹಳ ತುಂಬಾ ಚೆನ್ನಾಗಿ ಬರುತ್ತದೆ. ಆದರೆ ಅದು ಬೇರೆ ಕಾಲದಲ್ಲಿ ಬರುವುದಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕಾದರೆ ಈ ನಾಡಿನ ಬಡ ರೈತನ ಗುಡಿಸಲಿನಲ್ಲಿ ಉತ್ಪಾದವಾದಂತಹ ಬೆಳೆ ಬರುವಂತಹ ರೇಷ್ಮೆ ತಳಿಯನ್ನು ನಮಗೆ ವಿಜ್ಞಾನಿಗಳು ಒದಗಿಸಿಕೊಡಬೇಕಾಗಿದೆ. ಮಾನ್ಯ ಸ್ವಾಮಿ ಅವರ ಹೆಸರನ್ನು ನಾನು ಇವತ್ತು ಈ ಸದನದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಕೆವಿ- 2 ಮತ್ತು ನನ್ನೊಂದು ಎರಡೇ ಎರಡು ಬೈವೋಲ್ಟೀಸ್ ತಳಿಗಳನ್ನು ಕೊಟ್ಟಿದ್ದನ್ನು ಬಿಟ್ಟರೆ ಇವತ್ತಿನವರೆಗೂ ಕೂಡ they have not replaced the bivoltine race. It is suitable for the conditions of the farmers in India. ಟಿಪ್ಪುಸುಲ್ತಾನನ ಕಾಲದಲ್ಲಿ ಬಂದಂತಹ ತಳಿ ಇದಾಗಿದೆ. ಇವತ್ತಿನವರೆಗೂ ಕೂಡ ಮೈಸೂರು ರೇಸ್‌ನ ತಳಿಯನ್ನು ರಿಪ್ಲೇಸ್ ಮಾಡಲಿಕ್ಕೆ ನಮ್ಮಿಂದ ಆಗಿಲ್ಲ. Long breeding will weaken the race, ಎಂದು ವಿಜ್ಞಾನದಲ್ಲಿ ಹೇಳಲಾಗಿದೆ. 200 ವರ್ಷಗಳಿಂದಲೂ ಕೂಡ ನಾವು ಅದೇ ತಳಿಯನ್ನು ಬೆಳೆಯುತ್ತಿದ್ದೇವೆ.

4.40 ಪಿ.ಎಂ.

ನಮ್ಮ ಬಾಲಸುಬ್ರಹ್ಮಣ್ಯರವರು ಸತ್ತು ಬಿಟ್ಟರು ಏನಾದರೂ ಮಾಡಿ ಈ ರೇಸ್‌ನ್ನು ರಿಪ್ಲೇನ್ ಮಾಡಬೇಕೆಂದು He could not do it ನಮ್ಮ ರೈತರಿಗೆ ಏಕೆ ಗೋಸುಯ್ಯುಕೊಂಡಿದ್ದೀರಿ? ಡಬ್ಲ್ಯೂಟಿಒ ದಿಂದ ಹೊರಗಡೆ ಬರುವುದಕ್ಕೆ ಸಾಧ್ಯತೆ ಇಲಲ್ವೆಂದು ಪೊಸಿಷನ್‌ಗೆ ನಾನೇ ಅಂಟಿಕೊಂಡ ಮೇಲೆ ನನ್ನ ಅನಿಸಿಕೆ ಏನೆಂದರೆ, Re-start the negotiantions; up grade the technology, quality ಎಂದು ಹೇಳುವ ಸಂದರ್ಭದಲ್ಲಿ ಇದು ಮಾಡಬೇಕಾದರೆ, ಅದು ನನ್ನ ಕೈಯಲ್ಲಿ ಏನು ಮಾಡುವುದು? ಆ ದೇಶದಲ್ಲಿ ಯಾವ ಗುಣ ಮಟ್ಟದ ವಸ್ತುವನ್ನು ಬೆಳೆಯುವುದಕ್ಕೆ ಸಾಧ್ಯತೆ ಇದೆ, ಆ ವಾತಾವರಣ ನಮ್ಮಲ್ಲಿ ಇಲ್ಲ, ನಮಗೆ ಇರುವ ಕಷ್ಟ ನೀರು. ನಮ್ಮ ನೀರು ಇವತ್ತು ಹೋಗಿ 600 ಅಡಿಗೆ ತಲುಪಿದೆ ಇಸ್ರೇಲ್‌ನಲ್ಲಿ ನೀರಿನ ಸಮಸ್ಯೆ ಇಲ್ಲ. ನೀರಿನ ಸಮಸ್ಯೆ ಇದ್ದರೂ ಕೂಡ ಬೇರೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಬೇರೆ ದೇಶದಲ್ಲಿ ನೀರಿನ ಸಮಸ್ಯೆ ಇಲ್ಲ. ಆದ್ದರಿಂದ ಯಾವುದೇ ಒಂದು Produce , Particularly agricultural produce depends upon so many factors while you are thinking about upgradation of its quality. ಮೊದಲನೆಯದು ತಳಿ, ಎರಡನೆಯದು ವಾತಾವರಣ, ಮೂರನೆಯದು ನೀರು, ನಾಲ್ಕನೆಯದು ನಮ್ಮ ರೈತನ ಶ್ರಮ ಮತ್ತು ಶ್ರದ್ದೆ ಮತ್ತು ಪದ್ಧತಿ. ಮೂರನೆಯದು ನಾವು ಕಳೆದುಕೊಳ್ಳುತ್ತಿದ್ದೇವೆ. ವಿಧಾನಸೌಧದ ಸುತ್ತ ಓಡಾಡುವವರು ಇವರು ಯಾರೂ ನಮ್ಮ ರೈತರ ಪ್ರತಿನಿಧಿಗಳು ಅಲ್ಲ. ಯಾರು ಬೇಕಾದರೂ ಸಿಟ್ಟು ಮಾಡಿಕೊಳ್ಳಿ. ಇವರು ನಮ್ಮ ರಾಜಕೀಯದ ಪ್ರತಿನಿಧಿಗಳು ಅಷ್ಟೆ. ಹೊರತು ನಿಜವಾದ ರೈತ ಪ್ರತಿನಿಧಿಗಳು ಅಲ್ಲ. ಇವರನ್ನು ನೋಡಿ ನೀವು ಮಿಸ್‌ಲೀಡ್ ಆಗಬೇಡಿ. ನಿಜವಾದ ರೈತ ಪ್ಯಾಕೆಟ್ ಹಿಡಿದು ಕಾಲಿಗೆ ಚಪ್ಪಲಿ ಇಲ್ಲದೆ ಮೈಗೆ ಇಲ್ಲದೆ ನಮಗೆ ಬೈಯ್ದುಕೊಂಡು ನಿಂತಿರುತ್ತಾನೆ. ಅವನು ನಿಜವಾದ ನಮ್ಮ ಪ್ರತಿನಿಧಿ. ಇವರು ನಮ್ಮ ರಾಜಕೀಯ ಮಾಡಲಿಕ್ಕೆ ನಮ್ಮ ಪ್ರತಿನಿಧಿಗಳು ಅಷ್ಟೆ. ರೈತನ ವಿಷಯ ಬಂದಾಗ ಅವನ ಹಿತವನ್ನು ಕಾಪಾಡುವ ಸ್ಪರ್ಧೆ ಬಂದಾಗ ನಮ್ಮ ಮನಸ್ಸಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನ ಇರಬೇಕು. ಗುಣಮಟ್ಟ ಜಾಸ್ತಿ ಮಾಡಬೇಕಾದರೆ, ಉತ್ತಮವಾದ ತಳಿ ಬೇಕು, ಅದರ ಜೊತೆಗೆ ನಾವು ಇಷ್ಟೆಲ್ಲಾ ಹೇಳಿ ಬರೀ ಮಾಡಬೇಕಾದರೆ, ಉತ್ತಮದ ತಳಿ ಬೇಕು, ಅದರ ಜೊತೆಗೆ ನಾವು ಇಷ್ಟೆಲ್ಲಾ ಹೇಳಿ ಬರೀ ಸಮಸ್ಯೆಗಳು ತಲೆಗೆ ಹಚ್ಚಿ ಪರಿಹಾರ ಸೂಚಿಸದೆ ಹೋದೆ ನನಗೆ ಸಮಾಧಾನ ಆಗುವುದಿಲ್ಲ. ಏನನ್ನು ಮಾಡುವುದಕ್ಕೆ ಸಾಧ್ಯ? ನನ್ನ ಪ್ರಕಾರ 70 ಕೋಟಿ ನಾವು ರಿಲೀಸ್ ಮಾಡಿದ್ದೇವೆಂದು ಅಂತ ನಾವು ಹೇಳುವುದಾಗಲಿ, ಅಲ್ಲಿ 20 ಕೋಟಿ ರಿಲೀಸ್ ಮಾಡಿದ್ದೇವೆಂದು ನೀವು ಹೇಳುವುದಾಗಲಿ, ಈ ಇಬ್ಬರ ಗುದ್ದಾಟ ಬೇಡ. ನನ್ನ ಪ್ರಕಾರ ಯಾರಿಗಾದರೂ ರೈತರ ಬದುಕನ್ನು ಸುಖಿಯಾಗಿ ಮಾಡಬೇಕೆಂದು ಪ್ರಾಮಾಣಿಕವಾದ ಆಸೆ ಇದ್ದರೆ ಅದಕ್ಕೆ ರಾಷ್ಟ್ರೀಯ ಒಮ್ಮತ ಮಾಡಬೇಕಾಗುತ್ತದೆ. ಏನಾದರೂ ಮಾಡಿ ಕೃಷಿ ಉತ್ಪನ್ನಗಳಿಗೆ ಫ್ಲೋರ್ ಪ್ರೈಸ್ ಫಿಕ್ಸ್ ಮಾಡುವ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಕನಿಷ್ಠ ಬೆಲೆ ನಿಗದಿ ಮಾಡುವ ಒಂದು ಪದ್ಧತಿಯನ್ನು ತರಬೇಕಾಗುತ್ತದೆ. ಅದಕ್ಕೆ ಬೆಲೆ ಸ್ಥಿರೀಕರಣ ನೀತಿ ರೂಪಿಸಬೇಕಾಗುತ್ತದೆ. Price Stabilisation Fund ಅಪರಾಷ್ಟ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಎರಡೂ ಕಡೆ ಸ್ಥಾಪನೆ ಮಾಡಬೇಕಾಗುತ್ತದೆ. Contributions may be from the Central Government, may be from the State Government, may be from the farmers even. We have done it successfully in this State. ಬೆಲೆ ಸ್ಥಿರೀಕರಣ ನೀತಿ ಇವತ್ತು ರೇಷ್ಮೆ ಉದ್ಯಮದಲ್ಲಿ ನಾವು

ತಂದಿದ್ದೇವೆ. ಅದಕ್ಕೆ ಬರುವಂತಹ ಬಹುತೇಕ ಹಣ ರೈತರಿಂದ ಬರುತ್ತಿವೆ. ಅದೇ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಬರುವಂತಹ ಎಲ್ಲಾ ಹಣವನ್ನು ಬೆಲೆ ಸ್ಥಿರೀಕರಣದಲ್ಲಿ ಇಟ್ಟು ಕೇಂದ್ರ ಸರ್ಕಾರದ ದೇಣಿಗೆಹಾಕಿ, ರಾಜ್ಯ ಸರ್ಕಾರದ ದೇಣಿಗೆ ಹಾಕಿ Create a price stabilisation fund, fix the flooring price. ಇವೆರಡೂ ಆದ ಮೇಲೆ ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ಮತ್ತೆ ರೈತ ಅರ್ಜಿ ಹಿಡಿದುಕೊಂಡು ಬರುವುದು, ವಿಧಾನಸೌಧದಲ್ಲಿ ನಾವು ಆ ಪಕ್ಷ ಈ ಪಕ್ಷ ಬಿಟ್ಟು ಬಾವಿಗೆ ಬೀಳುವುದು, ಹೊಳೆಗೆ ಬೀಳುವುದು ಮಾಡುವುದು ಬೇಡ ಏನು ಮಾಡಬೇಕು, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಸ್ವಯಂಚಾಲಿತ ವ್ಯವಸ್ಥೆ. It should be automatic when the prices come down froma particular level. ಆ ಕನಿಷ್ಟ ಬೆಲೆಯನ್ನು ಏನು ನಾವು ನಿಗದಿ ಮಾಡಿರುತ್ತೇವೆ, ಬೆಲೆ ಅದಕ್ಕಿಂತ ಕೆಳಗೆ ಬಂದ ತಕ್ಷಣ automatically it should start purchasing the materials. ಈ ಒಂದು ಮೆಕ್ಯಾನಿಸಂ ರಾಜ್ಯದಲ್ಲಿ ತರದ ಇದ್ದರೆ ರೈತರು ಅಲ್ಲಿ ನಿಜವಾಗಿ ಕಣ್ಣೀರು ಹಾಕುತ್ತಾನೆ. ರೈತರ ಬಗ್ಗೆ ನಾವು ಮಾತನಾಡುವುದು ಇದು ಮೊಸಳೆಯ ಕಣ್ಣೀರು ಆಗುತ್ತದೆ. ಅದಕ್ಕಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. Fix the floor price, establish the price stabilisation fund and create a automatic mechanism to enter into the market wen the prices come down from a partiicular level. ಇದು ನನ್ನ ಪ್ರಕಾರ ಒಂದು ಅತ್ಯುತ್ತಮವಾದ ಕೆಲಸ ಅದು ಆಗಬೇಕೆಂದು ನನಗೆ ಅನ್ನಿಸುತ್ತದೆ. ಒಂದು ಬಹಳ ವಿಚಿತ್ರವಾದ ಸಂಗತಿ ಎಂದರೆ, ಎಲ್ಲಾ ತಾಲ್ಲೂಕು, ಜಿಲ್ಲಾ ರಾಜ್ಯಗಳಲ್ಲಿ ಎಲ್ಲ ಸಂದರ್ಭಗಳಲ್ಲೂ ರೈತನೇ, ನಿಕೃಷ್ಟ. ಸಾಹಿತ್ಯದ ಅರಿವು ಇರುವ ನಮ್ಮ ಸಂಸದೀಯ ವ್ಯವಹಾರ ಸಚಿವರು ಗಮನ ಹರಿಸಬೇಕು, ಈ ರಾಜ್ಯದಲ್ಲಿ ಬರೀ ಬೆಲೆ ಉತ್ಪನ್ನಕ್ಕೆ ಅಷ್ಟೇ ಅಲ್ಲ, ಈ ರಾಜ್ಯದ ರೈತ ಎಷ್ಟು ನಿಕೃಷ್ಟ ಎಂದರೆ , 2,00 ವರ್ಷದಲ್ಲಿ, ಇತ್ತೀಚಿನ ವರ್ಷಗಳನ್ನು ಬಿಟ್ಟರೆ ರೈತನ ಬಾಳು ಗ್ರಾಮೀಣ ಬದುಕು ನಿಮ್ಮ ಯಾವ ಸಾಹಿತ್ಯದ ವಸ್ತು ಆಗಲಿಲ್ಲ. ಯಾವ ನಿಮ್ಮ ರಾಮಾಯಣ, ಮಹಾಭಾರತದ ವಸ್ತು ಆಗಲಿಲ್ಲ, ನಮ್ಮ ಯಾವ ರೈತನೂ ಕೂಡ ಕಥಾನಾಯಕವಾಗಲಿಲ್ಲ. ಒಬ್ಬ ಅರ್ಜುನ, ಒಬ್ಬ ಕೌರವ, ಒಬ್ಬ ಗಾಂಢೀವಿ, ಒಬ್ಬ ಲವ, ಒಬ್ಬ ಕುಶ, ಒಬ್ಬ ರಾಮಕ, ಒಬ್ಬ ಲಕ್ಷ್ಮಣ, ಒಬ್ಬಳು ಶೂರ್ಪಣಖಿ, ಒಬ್ಬ ರಾವಣ ಇಂತಹ ನಿಕೃಷ್ಟವಾದ ಪರಿಸ್ಥಿತಿ ಬಂದ ರೈತನ ಬಗ್ಗೆ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ನಾವು ಯೋಚನೆ ಮಾಡುವ ಅವಶ್ಯಕತೆ ಖಂಡಿತವಾಗಿ ಇದೆ, ನಮ್ಮನ್ನು ಕೇವಲ ಜಾತಿಗೆ ಸೀಮಿತಿಗೊಳಿಸುವುದಕ್ಕಾಗುವುದಿಲ್ಲ. ಅದಕ್ಕೆ ಕೃಷಿಕ ಸಮಾಜ ಎಂದು ಹೇಳುವುದು. ಗಾಂಧೀಜಿಯವರು ಒಂದು ಕಡೆ Freedom at Midnight ನಲ್ಲಿ ಹೇಳುತ್ತಾರೆ, ಭಾರತ ದೇಶ ಎಲ್ಲಿ ಇದೆ ಎಂದುಡುಕು ಹುಡುಕಿ ಸಾಕಾಗಿ ಹೋಗುತ್ತಾರೆ. ಕೊನೆಗೆ ಅವರಿಗೆ ಭಾರತ ದೇಶ ಸಿಗುತ್ತದೆ ಎಲ್ಲಿ ಸಿಗುತ್ತದೆ. ಎಂದರೆ ಭಾರತ ದೇಶ ಭಾರತದ ಹಳ್ಳಿಗಳಲ್ಲಿ ಸಿಗುತ್ತದೆ. ವ್ಯಾಪಾರಿಗಳ ಹತ್ತಿರ ಹುಡುಕಿದ್ರು ಬಿರ್ಲಾನಾ ಗೆಸ್ಟ್ ಹೌಸ್‌ನಲ್ಲಿ ಹುಡುಕಿದರು ಎಲ್ಲೆಲ್ಲೋ ಹುಡುಕಿದರು ಸಿಗದೆ ಗಾಂಧೀಜಿಯವರಿಗೆ ಭಾರತ ದೇಶ ಸಿಕ್ಕಿದ್ದು ಹಳ್ಳಿಗಳಲ್ಲಿ. ಆ ಹಳ್ಳಿಯ ಬದುಕು ಗ್ರಾಮೀಣ ಬದುಕು ಅದು ಅತ್ಯಂತ ನಿಕೃಷ್ಟವಾದ ಬದುಕಾಗಿದೆ. ಅದನ್ನು ಸುಧಾರಿಸಬೇಕಾದುದು ನಮ್ಮೆಲ್ಲರ ಅವಶ್ಯಕತೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಬೆಲೆ ಕುಸಿತಕ್ಕೆ ಉತ್ಪನ್ನ ಜಾಸ್ತಿ ಆಗುವುದರ ಜೊತೆಗೆ ಇಷ್ಟೊಂದು ಆಹಾರ ವಸ್ತುಗಳು ಎಲ್ಲಾ ಬಿದ್ದಿದೆ ಅಲ್ಲಿ ಹಾಗಾದರೆ ಈ ದೇಶದಲ್ಲಿ ಎಲ್ಲ ಹೊಟ್ಟೆ ತುಂಬ ಉಂಡವರು ಇದ್ದಾರೇನು? ಇಲ್ಲ, Again I take a shelter form C.S.Seshadri

ಒಬ್ಬ ಆರ್ಥಿಕ ತಜ್ಞರು ಬರೆಯುತ್ತಾರೆ, ಈ ದೇಶದಲ್ಲಿರುವಂತಹ ಪರಿಸ್ಥಿತಿ ಸಂಪತ್ತಿನ ಸೃಷ್ಟಿ ಅಲ್ಲ. ಸಂಪತ್ತಿನ ಹಂಚಿಕೆ ನಿಜ. ಇಷ್ಟೆಲ್ಲ ಬೆಲೆ ಕುಸಿತವಾಗಿದೆ, ಬೇಕಾದಷ್ಟು ಬಿದ್ದಿದೆ. ಎಂದು ನಾವು ಭಾಷಣ ಮಾಡುತ್ತೇವೆ. ಇವತ್ತು ಬಸ್ ಸ್ಟ್ಯಾಂಡ್‌ನಲ್ಲಿ ತಿನ್ನುವುದಕ್ಕೆ ಅನ್ನ ಇಲ್ಲದೆ ಹಾಗೆಯೇ ಮಲಗಿಕೊಳ್ಳುವ ವ್ಯಕ್ತಿಯನ್ನು ನಾವು ಕಾಣಬಹುದು. ಭಿಕ್ಷುಕನನ್ನು ಕಾಣಬಹುದು. ಇವತ್ತು ಈ ಎಲ್ಲ ರೆಮಿಡಿಗಳ ಜೊತೆಗೆ ಸಾಮಾನ್ಯ ವ್ಯಕ್ತಿಯ ಕೊಂಡುಕೊಳ್ಳುವಿಕೆಯ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳು ಕೂಡ ನಮ್ಮ ರಾಜ್ಯ ಸರ್ಕಾರ ಹಮ್ಮಿಕೊಳ್ಳ ಬೇಕಾಗುತ್ತದೆ. ಅದು ಬಡವನಿಗೆ ದೊರೆಯುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. 'ನ್ಯಾಫೆಡ್' ಎಂದು ಒಂದು ಕಾರ್ಯಕ್ರಮವನ್ನು ಆಹಾರ ಸಚಿವರು ತಂದಿದ್ದಾರೆ. ಆದರೆ ನಾವು ಮೂಲತಹ ಸಾಮಾನ್ಯ ಜನರ ಕೊಂಡು ಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡುವದರ ಮೂಲಕ ಕೃಷಿ ಉತ್ಪನ್ನಗಳ ಬೆಲೆ ಹೆಚ್ಚು ಮಾಡುವುದಕ್ಕೆ ಸಾಧ್ಯತೆ ಇದೆ. ರೈತರಿಗೆ ಸಬ್ಸಿಡಿ ಕೊಡಿ ಎಮದು ಡಬ್ಲ್ಯೂಟಿ ಎ ದವರು ಇನ್‌ಸಿಸ್ಟ್ ಮಾಡುತ್ತಾರೆ. ರಾಜ್ಯ ಸರ್ಕಾರದಿಂದ ಸಬ್ಸಿಡಿ ಕೊಡಿ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ಸ್ನೇಹಿತರುಗಳಿಗೆ ಹೇಳಿದಾಗ ನಾವೆಲ್ಲಾ ಸಾಲ ತಂದು ಕೆಲಸವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಸಾಲ ಕೊಡುವವರು ಇಸ್‌ಸಿಟ ಮಾಡುತ್ತಾರೆ ನೀವು ಸಬ್ಸೀಡಿ ಕೊಡಬೇಡಿ ಎಂದು ನಾನು ತಿಳಿದುಕೊಂಡಿರುವ ಮಟ್ಟಿಗೆ ಇದೇ ಕಾರಣವಿರಬಹುದು. ಆದರೆ ಇದಕ್ಕೆ ಸರ್ಕಾರದವರು ಸರಿಯಾದಂಥ ಉತ್ತರವನ್ನು ಕೊಡುತ್ತಾರೆ. ನಬಾರ್ಡ್‌ನವರಿರಬಹುದು, ವಿಶ್ವಬ್ಯಾಕ್‌ನವರೇ ಇರಬಹುದು, ಇವರು ಸಬ್ಸೀಡಿ ಕೊಡುವ ಪದ್ಧತಿಗೆ ಪ್ರೋತ್ಸಾಹ ಕೊಡುವುದಿಲ್ಲ. ಆದುದರಿಂದ ಡಬ್ಲ್ಯೂ.ಟಿ.ಒ., ನವರು ಹೇಳುವಂಥ ಕಂಡೀಶನ್ ನಾವು ಪಾಲನೆ ಮಾಡುವುದಕ್ಕಾಗುವುದಿಲ್ಲ. ಇನ್ನು ಮಧ್ಯವರ್ತಿಗಳನ್ನು ನಾವು ಇಂದು ಎಲಿಮಿನೇಟ್ ಮಾಡಬೇಕಾದ ಅಗತ್ಯತೆ ಇದೆ. ಇದಲ್ಲದೇ ಅತಿವೃಷ್ಟಿ ಹಾಗೂ ಅನಾವೃಷ್ಟಿಗಳನ್ನು ತಡೆಯಲು ಬೇಕಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. We have to eliminate middlemen from this trade. 25 ಸಾವಿರ ಟನ್ ಮೆಕ್ಕೆ ಜೋಳವನ್ನು ಈ ರಾಜ್ಯದಿಂದ, ದೇಶದಿಂದ ರಫ್ತು ಮಾಡುವುದಕ್ಕೆ ಲೈಸೆನ್ಸ್ ಕೊಡಲಾಗಿದೆ. Imprt is liberalised, nationalised, globalised, what not? why export is restricted? ಆದರೆ ರಫ್ತು ಮಾಡುವುದಕ್ಕೆ ಇವತ್ತಿಗೂ ಕೂಡ ನಾವು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಬೇಕಾದ ಪರಿಸ್ಥಿತಿ ಇದೆ. ಈ ಗ ಆಮದನ್ನು ಮುಕ್ತವಾಗಿ ಮಾಡಿಕೊಳ್ಳಲು ಹೇಗೆ ಅವಕಾಶವಿದೆಯೋ ಇದೇ ರೀತಿಯಲ್ಲಿ ಮುಕ್ತ ರಫ್ತಿಗೂ ಕೇಂದ್ರ ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ಎನ್.ಡಿ.ಎ. ಸರ್ಕಾರದ ಮೇಲೆ ಒತ್ತಾಯವನ್ನ ನಮ್ಮ ಸ್ನೇಹಿತರುಗಳು ತರಬೇಕೆಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ಇಂದು ಸಾಮಾನ್ಯವಾಗಿ ಕೃಷಿ ಉತ್ಪನ್ನಗಳನ್ನು ದಿನ ನಿತ್ಯದ ಅಡಿಗೆಗೆ ಮಾತ್ರ ಉಪಯೋಗಿಸಲಾಗುತ್ತಿದೆ.

I request the State Government to estabish agro-based small scale industries. ಇದರಲ್ಲಿ ಹಣ್ಣು, ಉಪ್ಪಿನಕಾಯಿ ಮತ್ತಿತರ ಪದಾರ್ಥಗಳು ಬರುತ್ತವೆ. ಇಂಥ ಸಣ್ಣ ಸಣ್ಣ ಕೈಗಾರಿಕೆಗಳನ್ನು ಹೆಚ್ಚು ಮಾಡಲು ಅವಕಾಶ ಕೊಟ್ಟರೆ ಹೆಚ್ಚು ಕೃಷಿ ಉತ್ಪನ್ನಗಳು ಬಳಕೆಯಾಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇಂದು ಒಂದು ವೇಳೆ ರಫ್ತನ್ನು ಮುಕ್ತವಾಗಿ ಮಾಡಲು ಕೇಂದ್ರ ಸರ್ಕಾರ ಅನುಮತಿ ಕೊಟ್ಟರೂ ಕೂಡ ಏಕಾ ಏಕಿ ರಫ್ತು ಮಾಡಲು ಆಗುವುದಿಲ್ಲ. ಯಾವಾಗಲೂ

ರಫ್ತು ಮಾಡಬೇಕಾದರೆ ಪದಾರ್ಥಗಳ ಗುಣಮಟ್ಟ ಉತ್ತಮ ಮಟ್ಟದಲ್ಲಿರಬೇಕಾಗುತ್ತದೆ. ನಾನು ವಿದೇಶಕ್ಕೆ ಕಳುಹಿಸುವ ಪದಾರ್ಥಗಳ ಗುಣಮಟ್ಟ ಹೇಗಿರಬೇಕೆಂಬುದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಯಾವ ಹಣ್ಣೇ ಆಗಬಹುದು ಗಟ್ಟಿತನದ ಗುಣಮಟ್ಟ ಇರಬೇಕು. ಇಂದು ಒಳ್ಳೆಯ ಗುಣಮಟ್ಟದ ಒಂದು ವೆರೈಟಿ ಟಮೋಟೋ ಬಂದಿದೆ. ಅದನ್ನು ಗೋಡೆಗೆ ಹೊಡೆದರೆ ಅಷ್ಟೇ ರಭಸವಾಗಿ ಹಿಂದಕ್ಕೆ ಬಂದು ಹೊಡೆಯುತ್ತದೆ. ಇದೇ ರೀತಿ ಬಾದಾಮಿ ಮಾವಿನಹಣ್ಣು ಕೂಡ ಗಟ್ಟಿತನ ಪಡೆದುಕೊಂಡಿದೆ. ರಸಪುರಿ ಹಣ್ಣನ್ನು ಕೂಡ ಗಟ್ಟಿತನದ ಗುಣಮಟ್ಟಕ್ಕೆ ತರಬೇಕಾಗಿದೆ. ಹೊರದೇಶಕ್ಕೆ ಹೋಗಬೇಕಾದರೆ 7 ರಿಂದ 15 ದಿವಸಗಳೇ ಬೇಕಾಗುವುದರಿಂದ ಪದಾರ್ಥಗಳ ಗುಣಮಟ್ಟವನ್ನು ಉತ್ತಮವಾಗಿರುವಂತೆ ನೋಡಿ ಕೊಳ್ಳಬೇಕು. ರಫ್ತು ಮಾಡುವುದರಲ್ಲಿ ಎಲ್ಲವನ್ನೂ ಒಮ್ಮೆಗೇ ರಫ್ತು ಮಾಡುವುದಕ್ಕಾಗುವುದಿಲ್ಲ. ಪೆರಿಶಬಲ್ ಗೂಡ್ಸ್‌ಗಳಂಥ ಆಗಾಗ್ಗೆ ಕೆಡುವ ಪದಾರ್ಥಗಳೇನಿದೆ ಅಂಥವುಗಳನ್ನು ಸಂರಕ್ಷಿಸಲು ಶೈತ್ಯಾಗರಗಳ ಅವಶ್ಯಕತೆ ಇದೆ. ಈ ಶೈತ್ಯಾಗಾರಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಆಗಿಂದಾಗ್ಗೆ ನಡೆಯುತ್ತಲೇ ಬಂದಿದೆ. ನಾನು ಶ್ರಮಪಟ್ಟು 13 ಶೈತ್ಯಾಗಾರಗಳನ್ನು ಈ ರಾಜ್ಯದಲ್ಲಿ ಸ್ಥಾಪನೆ ಮಾಡಿದೆ. ಇವತ್ತೊತ್ತು ಹದಿಮೂರು ಕೆಲಸ ಮಾಡುತ್ತಿದೆ. ಆದುದರಿಂದ ಪದಾರ್ಥಗಳ ಗುಣಮಟ್ಟ ಕಾಪಾಡುವಲ್ಲಿ ಶೈತ್ಯಾಗಾರಗಳ ಅವಶ್ಯಕತೆ ಇದೆ. ಇಂದು ಕೃಷಿ ಉತ್ಪನ್ನ ವ್ಯಾಪಾರ ಸಂಸ್ಥೆಯಿಂದ ಆಗಿರುವ ಅನಿಷ್ಟ ಪದ್ಧತಿಗೆ ನಮ್ಮ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆಮದು ನೀತಿಯೇ ಕಾರಣವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಪರಿಹಾರವನ್ನು ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಕಳೆದ ವರ್ಷ ಎರಡು ಮೂರು ಅಘಾತಗಳು ಸರ್ಕಾರಕ್ಕೆ ಬಂದೊದಗಿದಾಗ ಅದನ್ನು ಹೇಗೆ ನಿಭಾಯಿಸಲಾಯಿತು ಎಂಬ ಬಗ್ಗೆ ಹೇಳಬಯಸುತ್ತೇನೆ. ಇದರಲ್ಲಿ ಮೊದಲನೆಯದಾಗಿ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಗ್ರಾಮೀಣ ಅಭ್ಯರ್ಥಿಗಳು ಸರ್ಕಾರಿ ಕೆಲಸಕ್ಕೆ ಸೇರುವಾಗ ಅವರಿಗೆ ಶೇಕಡ 15 ರಷ್ಟು ಕೃಪಾಂಕವನ್ನು ಸೇರಿಸುವ ಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಅದನ್ನು ಈಗ ನೆನೆಸಿಕೊಂಡು ಬಂಗಾರಪ್ಪನವರಿಗೆ ಕಂಗ್ರಾಜ್ಯುಲೇಟ್ ಮಾಡುತ್ತೇನೆ. ಅವರ ನಂತರ ಬಂದಂಥ ಸರ್ಕಾರಗಳು 5 ಪರ್ಸೆಂಟ್ ಕೃಪಾಂಕವನ್ನು ಏರಿಸುವುದು ಹಾಗೆಯೇ ಹೆಚ್ಚಿಸುವ ನೀತಿಯನ್ನು ಅನುಸರಿಸಿಕೊಂಡು ಬಂದವು. ಆದರೆ ಕಳೆದ ವರ್ಷ ಏನಾಯಿತೆಂದರೆ ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕವನ್ನು ಕೊಡುವುದೇ ಅಸಿಂಧು, ಇದು ಸಂವಿಧಾನಕ್ಕೆ ವಿರೋಧವಾದುದು ಎಂದು ಹೇಳಿ ಈ ನಾಡಿನ ಸರ್ವೋಚ್ಚ ನ್ಯಾಯಾಲಯ ಕಿತ್ತಹಾಕಿತು. ಇದು ಕರ್ನಾಟಕ ರಾಜ್ಯದ ಗ್ರಾಮೀಣ ಜನರ ಬದುಕಿನ ಮೇಲೆ ಬಂದೊದಗಿದ ಬರಸಿಡಲಾಯಿತು. ಇನ್ನು ಎರಡನೆಯ ಬರಸಿಡಿಲೆಂದರೆ ಅತ್ಯಂತ ಯಶಸ್ವಿಯಾಗಿ ಈ ನಾಡಿನಲ್ಲಿ ಕಾರ್ಯರೂಪಕ್ಕೆ ಬರುತ್ತಿದ್ದ ವಸತಿ ಯೋಜನೆಗಳ ಕಾರ್ಯರೂಪವು ಕೂಡ ಸಂವಿಧಾನಕ್ಕೆ ವಿರೋಧವಾದುದು ಎಂದು ಹೇಳಲಾಯಿತು. ನಾನು ಈ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರ ಕಲ್ಪವೃಕ್ಷ ಕಾಮಧೇನುವನ್ನು ಕೆಳಗೆ ಇಳಿಸಿದೆ ಎಂದು ವಾದವನ್ನು ಈಗ ಮಾಡುತ್ತಿಲ್ಲ. ಬರಸಿಡಿಲಿನಂತಿದ್ದ ಎರಡು ಸಮಸ್ಯೆಗಳನ್ನು ರಾಜ್ಯ ಸರ್ಕಾರ ಹೇಗೆ ನಿಭಾಯಿಸಿತು ಎಂಬುದು ನಿಮಗೂ ಗೊತ್ತೇ ಇರುವುದರಿಂದ ಸರ್ಕಾರಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಲೇಬೇಕು. ಕೋರ್ಟ್‌ನವರು ಕೊಟ್ಟ ಆರ್ಡರ್‌ನಿಂದ ಆಶ್ರಯ ಯೋಜನೆಯನ್ನು ಸರ್ಕಾರ ನಿಲ್ಲಿಸಿ ಕಾರಣ ಹೇಳಿಬಿಡಬಹುದಾಗಿತ್ತು. ಇದೇ ರೀತಿಯಲ್ಲಿ ನ್ಯಾಯಾಲಯ ಕೊಟ್ಟ ಆದೇಶದಿಂದಲೇ ಗ್ರಾಮೀಣ ಅಭ್ಯರ್ಥಿಗಳಿಗೆ ಕೊಡುತ್ತಿದ್ದ ಕೃಪಾಂಕವನ್ನು ನಿಲ್ಲಿಸಿ ಕಾರಣವನ್ನು ಹೇಳಬಹುದಾಗಿತ್ತು. ಆದರೆ ಆ ರೀತಿ ಮಾಡದೇ ಸನ್ಮಾನ್ಯ ಕೃಷ್ಣಾರವರು ವೈಯಕ್ತಿಕವಾಗಿ ಇವುಗಳ ಬಗ್ಗೆ ಆಸಕ್ತಿ ವಹಿಸಿ ಗ್ರಾಮೀಣ ಬದುಕಿನ ಮೇಲೆ ಬಂದೆರಗಿದ

ಬರಸಿಡಿಲುಗಳನ್ನು ನಿವಾರಣೆ ಮಾಡಿದ್ದಾರೆ. ನಾನು ಇದನ್ನು ಅತ್ಯಂತ ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ವಸತಿ ಯೋಜನೆಯ ಸಮಸ್ಯೆ ಬಗೆಹರಿಸುವ ಸಲುವಾಗಿ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಮಾಡಿ ವಸತಿ ಯೋಜನೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇನ್ನು ಎರಡನೆಯದಾಗಿ ಗ್ರಾಮೀಣ ಅಭ್ಯರ್ಥಿಗಳಿಗೇ ಒಟ್ಟು ಹುದ್ದೆಗಳ ಶೇಕಡ 25 ರಷ್ಟು ಹುದ್ದೆಗಳು ಮೀಸಲಿಡಬೇಕೆಂದು ನಿಯಮ ಮಾಡಿ ಗ್ರಾಮೀಣ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವೆರಡೂ ಆಘಾತಗಳು ರಾಜಕಾರಣಿಗಳಿಂದಾಗಲಿ, ಜನಸಾಮಾನ್ಯರಿಂದಾಗಲಿ ಆದದ್ದಲ್ಲ. ನಮ್ಮ ಮಹಾ ನ್ಯಾಯಾಲಯಗಳಿಂದ ಗ್ರಾಮೀಣ ಜನರ ಬದುಕಿನ ಮೇಲೆ ಬಂದಂಥ ಗದಾಪ್ರಹಾರ. ಇದನ್ನು ಅತ್ಯಂತ ಯಶಸ್ವಿಯಾಗಿ ರಾಜ್ಯ ಸರ್ಕಾರ ಬಗೆಹರಿಸಿದೆ.

ಇನ್ನು ನಮ್ಮ ರಾಜ್ಯದ ಎರಡು ಕಣ್ಣುಗಳಾದ ಕೃಷ್ಣಾ ಮತ್ತು ಕಾವೇರಿ ನದಿಗಳಿಂದ ಸಮೃದ್ಧವಾಗಿ ನೀರು ಹರಿದು ಭೂಮಿ ತೊಯ್ದು ಸಮೃದ್ಧವಾಗಿ ಬೆಳೆ ಬೆಳೆದು ರೈತನ ಬದುಕು ಹಸನಾಗುತ್ತದೆ ಎಂದು ನಾನು ಬಯಸಿದ್ದೆ. ಆದರೆ ಈ ಎರಡು ವಿಷಯಗಳಲ್ಲಿಯೂ ಕೂಡ ನಮಗೆ ವಿಶೇಷವಾದ ಪರಿಸ್ಥಿತಿ ಬಂದೊದಗಿ ಕೋರ್ಟಿನ ಕಟಕಟೆಯಲ್ಲಿ ನಾವು ನಿಂತು ನಿಭಾಯಿಸಬೇಕಾದ ಸಂದರ್ಭ ಬಂದೊದಗಿತು. 519 ಮೀಟರ್‌ಗೆ ನಿಲ್ಲಿಸಬೇಕೆಂದು ಒಂದು ಕೋರ್ಟ್ ಹೇಳಿದರೆ ಇನ್ನೊಂದು 516ಕ್ಕೆ ನಿಲ್ಲಿಸಬೇಕೆಂದು ಹೇಳುತ್ತದೆ. ಆಲಮಟ್ಟಿ ಅಣೆಕಟ್ಟಿಗೆ ಗೇಟ್ ಅನ್ನು ಅಳವಡಿಸುವಂಥ ಒಂದು ಪರಿಸ್ಥಿತಿಯನ್ನು ಅತ್ಯಂತ ಯಶಸ್ವಿಯಾಗಿ ಈ ಸರ್ಕಾರ ನಿರ್ವಹಿಸಿ ಅದಕ್ಕೆ ಒಂದು ಅಂತಿಮ ಸ್ವರೂಪವನ್ನು ಕೊಟ್ಟಿದೆ. ಇನ್ನು ಕಾವೇರಿ. ಕಾವೇರಿ ಕೊಳ್ಳದಲ್ಲೇ ರಾಜಕಾರಣಿಗಳು ಅನಿವಾರ್ಯವಾಗಿ ಕೆಲವು ಕೆಲಸಗಳನ್ನು ನಾವು ಮಾಡಲೇ ಬೇಕಾಯಿತು. ವಿರೋಧ ಪಕ್ಷದಲ್ಲೇ ಕುಳಿತಿದ್ದಾಗ ವಿರೋಧ ಮಾಡುವಂಥಾದ್ದು, ಆಡಳಿತ ಪಕ್ಷಕ್ಕೆ ಬಂದಾಗ ಹೊಗಳುವಂಥಾದ್ದು these are hard realities. ಕಾವೇರಿ ಕೊಳ್ಳದ ನೀರಿನ ಹಂಚಿಕೆ ಬಗ್ಗೆ ಕೊಟ್ಟಂಥಹ ಮಧ್ಯಂತರ ತೀರ್ಪನ್ನು ಈ ನಾಡಿನಲ್ಲಿ ಮಾಡಿದಾಗ ನಾನು ಅವತ್ತು ಕುಣಿಗಲ್‌ನಲ್ಲಿ ಸಭೆ ಮಾಡುವುದಕ್ಕೆ ಒಂದು ಜೊತೆ ಎತ್ತು ಮಾರಿದೆ. ಇವತ್ತು ಪ್ರಾಮಾಣಿಕವಾಗಿ ಹೇಳುತ್ತೇನೆ. to oppose the interim order passed by the Cauvery Tribunal we conducted so many ralies. ಮಧ್ಯದಲ್ಲಿ ಮಾಡಿದೆವು, ಮೈಸೂರಿನಲ್ಲಿ ಮಾಡಿದೆವು ಮತ್ತು ಬೆಂಗಳೂರಿನಲ್ಲಿ ಮಾಡಿದೆವು. ಇದರಿಂದ ಎರಡು ಭಾಗವಾಯಿತು. ಒಂದು ಮಾದೇಗೌಡರ ನೇತೃತ್ವದಲ್ಲಿ ಒಂದು ಹಾಗೂ ಇನ್ನೊಬ್ಬರ ನೇತೃತ್ವದಲ್ಲಿ ಇನ್ನೊಂದು ಹೀಗೆ ಎರಡು ಭಾಗವಾಯಿತು. ಕೊನೆಗೆ ಏನಾಯಿತು ಸ್ವಾಮಿ, ಯಾರು ಸೀರೆ, ಒಡವೆ ಕೊಟ್ಟು ಇಂಟರಿಂ ಆರ್ಡರ್ ಬರೆಸಿದ್ದಾರೆ ಎಂದು ಅಪವಾದ ಮಾಡಿದರೋ ಅದೇ ವ್ಯಕ್ತಿಗಳು ಹೋಗಿ ಆ ಒಪ್ಪಂದವನ್ನು ಒಪ್ಪಿಕೊಂಡು ಕಾರ್ಯರೂಪಕ್ಕೆ ತಂದರು. ನನ್ನ ಸ್ನೇಹಿತರಲ್ಲಿ ಮತ್ತೊಮ್ಮೆ ನಾನು ಕ್ಷಮೆ ಕೇಳುತ್ತಿದ್ದೇನೆ. ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ನಾನು ಅಂಕಿ ಅಂಶಗಳನ್ನು ಸದನದ ಗಮನಕ್ಕೆ ಕೊಡುವುದಕ್ಕೆ ಕಾಲ ಕೊಟ್ಟರೆ ತಮ್ಮ ಮುಂದೆ ಇಡುತ್ತೇನೆ. ದಳದ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಎಲ್ಲಾ ಸಂದರ್ಭದಲ್ಲಿ ನಮಗೆ ಅನ್ಯಾಯವಾಗಿದೆ. ಮಾನ್ಯ ಗುಜರಾಲ್ ಅವರು ಬಂದರು. ಆ ಇಂಟರಿಂ ರಿಪೋರ್ಟ್ ನೋಟಿಫಿಕೇಷನ್ ಇಶ್ಯೂ ಮಾಡಿದರು. ನಾವು ಮೊದಲಿನಿಂದ ಬೇಡ ಎಂದು ಹೇಳಿಕೊಂಡೆ ಬಂದಿದ್ದೆವು. ಇನ್ನು ನನಗೆ ಅತ್ಯಂತ ಮೆಚ್ಚುಗೆ ಇರುವಂತಹ ವಿ.ಪಿ.ಸಿಂಗ್ ಅವನ್ನು ಮಾನ್ಯ ಜೆ.ಹೆಚ್.ಪಟೇಲರನ್ನು ಎಷ್ಟು ಗುಣಕ್ಕೆ ಮೆಚ್ಚಿಕೊಳ್ಳುತ್ತೇನೋ ಅಷ್ಟು ಮೆಚ್ಚುತ್ತೇನೆ.

ಮಾನ್ಯ ಚಂದ್ರಶೇಖರ್ ಅವರು ಅಧಿಕಾರಕ್ಕಾಗಿ ತಮ್ಮ ನಾಯಕತ್ವವನ್ನು ಕಳೆದುಕೊಂಡರು. ಮಾನ್ಯ ವಿ.ಪಿ.ಸಿಂಗ್‌ರವರು ಅಧಿಕಾರವನ್ನು ಬಿಟ್ಟು ಈ ರಾಷ್ಟಕ್ಕೇ ನಾಯಕರಾದರು. ಯಾವುದಕ್ಕಾಗಿ ಸಾಮಾಜಿಕ ನ್ಯಾಯಕ್ಕಾಗಿ ಇರುವುದಕ್ಕೆ ಬಿಟ್ಟರೋ ಅವರನ್ನು. ಇವತ್ತು ಕಣ್ಣಲ್ಲಿ ನೀರಲ್ಲ ರಕ್ತ ಬರುತ್ತದೆ, ಅದನ್ನು ಈ ಸಂದರ್ಭದಲ್ಲಿ ನೆನೆಸಿಕೊಂಡರೆ, ಆ ಮನುಷ್ಯನಿಗೆ ಅವತ್ತು ನಾನು ಹೇಳಿದ್ದೆ, ಮನ್ನಣೆಯ ದಾಹ. ತಮಿಳುನಾಡಿನ ಮನ್ನಣೆಯ ದಾಹ. ತಮಿಳುನಾಡಿನ ಮನ್ನಣೆಯ ದಾಹ. ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ತಮಿಳುನಾಡನ್ನು ಮೆಚ್ಚಿಸುವುದಕ್ಕೆ ಅವತ್ತು ಕಾವೇರಿ ನದಿಯ ನೀರಿನ ಒಪ್ಪಂದಕ್ಕೆ ಕೋರ್ಟಿನ ಕಟಕಟೆಗೆ ತಾವು ಹೋದಿರಿ. ಈ ಎರಡೂ ವಿಷಯಗಳಲ್ಲಿ ಕೂಡ ಕರ್ನಾಟಕದ ಜನತೆಗೆ ಅನ್ಯಾಯವಾಗಿದೆ. ಅದನ್ನು ನಿಭಾಯಿಸುವುದಕ್ಕೆ ರಾಜ್ಯ ಸರ್ಕಾರ ಅತ್ಯಂತ ಯಶಸ್ವಿಯಾಗಿ ಕೆಲಸವನ್ನು ಮಾಡಿದೆ.

ಉಪಾಧ್ಯಕ್ಷರು: ಇನ್ನು ತಾವು ಮುಗಿಸಿ. ಈಗಾಗಲೇ ಸಾಕಷ್ಟು ಸಮಯ ಕೊಟ್ಟಿದೆ. ಬೇಕಾದರೆ ತಾವು ನಾಳೆ ಕಂಟಿನ್ಯೂ ಮಾಡಿ.

ಶ್ರೀ ವೈ.ಕೆ. ರಾಮಯ್ಯ: ತಾವು ಸಮಯ ಕೊಟ್ಟರೆ ಇನ್ನು ಹತ್ತು ಹದಿನೈದು ನಿಮಿಷದಲ್ಲಿ ಹೇಳುತ್ತೇನೆ. ತಾವು ನಾಳೆ ಕಂಟಿನ್ಯೂ ಮಾಡಿ ಎಂದರೆ ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಈಗ ನಿಯಮ 63 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಾಳೆ ಮಾನ್ಯ ರಾಮಯ್ಯನವರೆ ಕಂಟಿನ್ಯೂ ಮಾಡುತ್ತಾರಾ?

ಉಪಾಧ್ಯಕ್ಷರು: ಇನ್ನು ಐವತ್ತು ನಿಮಿಷ ಮಾತನಾಡುವುದು ಇದೆ ಎಂದಿದ್ದಾರೆ. ಆದುದರಿಂದ ನಾಳೆ ಮಾತನಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇನ್ನು ಅವರು ಮಾತನಾಡುವುದು ಯದು ಹತ್ತು ನಿಮಿಷ ಇದೆ ಎಂದರೆ ಮುಗಿಸಿ ಬಿಡುವುದು ಒಳ್ಳೆಯದು. ಅವರು 15 ದಿವಸದಿಂದ ಕಾದು ಸುಸ್ತಾಗಿದ್ದಾರೆ.

ಉಪಾಧ್ಯಕ್ಷರು: ಆದರೆ ಅಲ್ಪಕಾಲಾವಧಿ ವಿಷಯ ನಿಂತುಬಿಡುತ್ತದೆ. ಮಾನ್ಯ ಸದಸ್ಯರುಗಳು ಟಾಲರೇಟ್ ಮಾಡುವುದಾದರೆ ಇನನೊಂದೈದು ನಿಮಿಷ ಮಾತನಾಡಲಿ. ಮಾನ್ಯ ರಾಮಯ್ಯನವರೆ ಮಾನ್ಯ ಸದಸ್ಯರುಗಳು ತಾವು ತಮ್ಮ ಬಾಷಣವನ್ನು ಮುಗಿಸಿಬಿಡಿ ಎಂದು ಹೇಳುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ: ತಾವು ಹೇಗೆ ಅಪ್ಪಣೆ ಕೊಡುತ್ತೀರೋ ಹಾಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಾನು ಇದು ಮೊದಲನೆ ಸಾರಿ ಆಡಳಿತ ಪಕ್ಷದವರು ಇಷ್ಟೆಲ್ಲಾ ಮಾತನಾಡುತ್ತಿರುವುದನ್ನು ನೋಡುತ್ತಿರುವುದು. ಅವರು ಕೆಲಸ ಮಾಡಿ ತೋರಿಸಬೇಕು. ಮಾತನಾಡಿ ತೋರಿಸುವುದಿಲ್ಲ ಅಧ್ಯಕ್ಷರೆ,

ಉಪಾಧ್ಯಕ್ಷರೆ: ಮಾತನಾಡುವುದು ವಿರೋಧ ಪಕ್ಷದ ಸ್ವತ್ತ?

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಸ್ನೇಹಿತರ ಔದಾರ್ಯಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಾನು ತಮ್ಮಲ್ಲಿ ಪಾಪ್ಯುಲೆಸ್ಟ್ ಪ್ರೋಗ್ರಾಂ ಬಗ್ಗೆ ಮಾತನಾಡುವಾಗ ಮತ್ತೊಂದು ವಿಷಯವನ್ನು ನಾನು ನಮೂದಿಸಬೇಕಾಗಿತ್ತು. ಅದು ಜನ ಮೆಚ್ಚುಗೆಯ ಕಾರ್ಯಕ್ರಮಗಳು. ಓಟಿನ ಚೀಟಿಗಾಗಿ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಪಕ್ಷಗಳ ಮಧ್ಯದಲ್ಲಿ ರಾಜ್ಯಗಳ ಮಧ್ಯದಲ್ಲಿ, ದೇಶಗಳ ಮಧ್ಯದಲ್ಲಿ ಸ್ಪರ್ಧೆ ನಡೆಯುತ್ತಿದೆ ಎಂದು ಹೇಳುವಾಗ ಇದರಿಂದ ಆಗುವಂತಹ ದುಷ್ಪರಿಣಾಮಗಳನು ನಾನು ಹೇಳಲಿಲ್ಲ. ಇದು ತಾತ್ಕಾಲಿಕವಾದಂತಹ ಪರಿಹಾರವನ್ನು ಕೊಡಬಹುದು. ಆದರೆ ದೀರ್ಘಕಾಲಕವಾದಂತಹ ಅಭಿವೃದ್ಧಿಗೆ ಅತ್ಯಂತ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಅದಕ್ಕೆ ಈ ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಾಗ ತಾತ್ಕಾಲಿಕವಾದಂತಹ ಪರಿಹಾರವನ್ನು ಕೊಡುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಚಿಂತನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಸೇರಿದಂತೆ ಈ ಸರ್ಕಾರ ಹಮ್ಮಿಕೊಂಡಿದೆ. ಮೊದಲನೆಯದಾಗಿ ಕೆರೆಗಳು, ಗ್ರಾಮೀಣ ಬದುಕಿನ ಜೀವನಾಡಿ ಕೆರೆ, ಕೆರೆ ಪರಿಸ್ಥಿತಿ ಹೆಗಿದೆ? ಹೂಳು ತುಂಬಿದೆ. ಕೋಡಿ ಕಿತ್ತು ಹೋಗಿದೆ. ತೂಬು ಮುಚ್ಚಿಹೋಗಿದೆ. ಅವುಗಳು ಅತ್ಯಂತ ಹೀನಸ್ಥಿತಿಯಲ್ಲಿ ಇದೆ. ಇವುಗಳನ್ನು ಪುನರ್ಜೀವನಗೊಳಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಅದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎನ್ನುವುದಕ್ಕೆ ಇಲ್ಲಿ ಒಂದು ಪಟ್ಟಿ ಇದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಇದಕ್ಕೆ ಕಾಲಾವಕಾಶ ಇಲ್ಲದೆ ಇರುವುದರಿಂದ ನಾನು ಹೇಳುವುದಿಲ್ಲ. ಇದು ಅತ್ಯಂತ ಅನಿವಾರ್ಯ. ನಾನು ಆಗಲೇ ಹೇಳಿದ್ದೇನ, ನೀರಿನ ಲಭ್ಯತೆ ಕಡಿಮೆಯಾಗುತ್ತಿದೆ. ಯಾವುದೇ ಕೃಷಿ ಪ್ರಧಾನವಾದ ರಾಜ್ಯದಲ್ಲಿ ರಾಜ್ಯ ಆಳುವಂತಹವರಿಗೆ ನಾನು ಆಗಲೇ ಹೇಳಿದೆ ಒಬ್ಬ ಉತ್ತಮ ಆಡಳಿತಗಾರ, ಒಬ್ಬ ಉತ್ತಮ ಕನಸುಗಾರ ಕೂಡ ಆಗಿರಬೇಕು ಎಂದು. ನೀರಿನ ಲಭ್ಯತೆ ಕಡಿಮೆಯಾಗಿರುವಂತಹ ಈ ಸಂದರ್ಭದಲ್ಲಿ ಕೃಷಿ ಪ್ರಧಾನವಾದಂತಹ ರಾಷ್ಟ್ರಗಳು ಎರಡು ಕೆಲಸಗಳನ್ನು ಮಾಡಲೇಬೇಕಾಗಿದೆ. ಮೊದಲನೆ ಕೆಲಸ ಭೂಮಿ ಮೇಲೆ ಬೀಳುವಂತಹ ಪ್ರತಿ ಹನಿ ನೀರು ಕೂಡಿಟ್ಟುಕೊಳ್ಳುವಂತಹ ಕೆಲಸ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ನಾನು ಮಧ್ಯದಲ್ಲಿ ನಿಮಗೆ ಡಿಸ್ಟರ್ಬ್ ಮಾಡಬೇಕೆಂದು ಎದ್ದು ನಿಂತುಕೊಳ್ಳಲಿಲ್ಲ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 18 ತಿಂಗಳಾಯಿತು. ಒಂದು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದ ರೈತರಿಗೆ ಎಲ್ಲಾ ತಾಲ್ಲೂಕುಗಳಲ್ಲಿ ಮಾಯಾಬಜಾರ್‌ಗಳನ್ನು ಮಾಡುತ್ತೇವೆ ಎಂದರು. ಅದನ್ನು ಈಗ ಮಾಡಿದ್ದಾರಾ? ರೈತರು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದಾರೆ. ಅಲ್ಲಿ ಒಬ್ಬ ಕನಸುಗಾರ ಆಗಿರಬೇಕು. ಇಲ್ಲ ಎಂದು ಹೇಳುವುದಿಲ್ಲ. ನೀವು ಪ್ರಾರಂಭದ ಭಾಷಣದಲ್ಲಿ ಏನು ಹೇಳಿದ್ದು, 1999 ರ ನವೆಂಬರ್‌ನಲ್ಲಿ ಏನು ಹೇಳಿದ್ದೀರಿ? ಇನ್ನು ಒಂದು ವರ್ಷದ ಒಳಗಡೆ 20 ಸಾವಿರ ಕೆರೆಗಳನ್ನು ಮಣ್ಣು ಎತ್ತಿಸಿಬಿಡುತ್ತೇವೆ. ಐದು ಸಾವಿರ ಕೆರೆಗಳನ್ನು ಮಣ್ಣು ಎತ್ತಿಸಿಬಿಡುತ್ತೇವೆ. ಹೋಬಳಿಗಳಿಗೆ ಒಂದೊಂದು ಕೆರೆಗಳನ್ನು ಎತ್ತಿಸಿಬಿಡುತ್ತೇವೆ. ಹೀಗೆಲ್ಲಾ ಪ್ರಚಾರವನ್ನು ತೆಗೆದುಕೊಂಡಿದ್ದೀರಿ. ನಿಮಗೆ ನಾಚಿಕೆಯಾಗಬೇಕು. ಒಂದು ಕೆರೆ ನಿಮಗೆ ಮಾಡುವುದಕ್ಕೆ ಆಗಿಲ್ಲ. ಒಡ್ಡು ಮಾಡುವುದಕ್ಕೆ ಆಗಿಲ್ಲ. ಒಡ್ಡಿನಲ್ಲೆ ಏನು ಅನ್ಯಾಯ ನಡೆಯುತ್ತಿದೆ ಎಂದು ಗೊತ್ತಿದೆ. ವರ್ಲ್ಡ್ ಬ್ಯಾಂಕ್‌ನವರನ್ನು ಸರಿಯಾಗಿ ನೀವು ಪ್ಲೇಸ್ ಮಾಡಲಿಕಾಗಲಿಲ್ಲ ಆದರೆ ಕನಸುಗಾರ ಆಗಿರಬೇಕು ಎಂದರೆ ಇದಕ್ಕೆ ಏನು ಹೇಳಬೇಕು? ಇದುವರೆಗೆ

ಏನು ಮಾತನಾಡಿದಿರಿ? ಜನತಾ ದಳದ ಸರ್ಕಾರ ಕೇಂದ್ರದಲ್ಲಿ ಬಂದಾಗ ಅನ್ಯಾಯ ಆಯಿತು ವಿ.ಪಿ.ಸಿಂಗ್ ಬಹಳ ದೊಡ್ಡ ಮನುಷ್ಯ, ಅವರಿಂದ ಅನ್ಯಾಯವಾಯಿತು. ಮತ್ತೊಬ್ಬರಿಗೆ ಅನ್ಯಾಯವಾಯಿತು ಎಂದರೆ ಈಗ ನ್ಯಾಯ ಒದಗಿಸಿರಿ. ನೀವು ಇದ್ದೀರಲ್ಲ ಪಾರ್ಟಿಯವರು, ಜಿಲ್ಲೆಯಲ್ಲಿ 45 ವರ್ಷ ಆಳಿದಿರಿ.

ಶ್ರೀ ವೈ.ಕೆ. ರಾಮಯ್ಯ: ನಾನು ಸ್ವಲ್ಪ ಹೊತ್ತಿನ ಮುಂಚೆ ಹೇಳಿದ್ದೇನೆ. ಒಂದು ವರ್ಷದ ಆಡಳಿತದಲ್ಲಿ ಕಾಮಧೇನುವನ್ನು ಈ ನಾಡಿಗೆ ಇಳಿಸುವುದಕ್ಕೆ ಆಗಿಲ್ಲ. ಕಲ್ಪವೃಕ್ಷವನ್ನು ಈ ನಾಡಿಗೆ ಇಳಿಸುವುದಕ್ಕೆ ಆಗಿಲ್ಲ ಎಂದು. ಈ ಹಂತದಲ್ಲಿ ನನ್ನ ಸ್ನೇಹಿತರಾದ ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಸುಮ್ಮನೆ ಧ್ವನಿಯನ್ನು ಎತ್ತರಿಸುವುದರಿಂದ ಯಾವ ಪ್ರಯೋಜನ ಕೂಡ ಆಗುವುದಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಮೊದಲನೆ ಸೆಂಟೆನ್ಸ್ ನನ್ನ ಕೇಳಿಸಿಕೊಳ್ಳಲಿಲ್ಲವೆಂದು ಕಾಣಿಸುತ್ತದೆ ಇವರು. ಎಲ್ಲವನ್ನು ಮಾಡಿ ಮುಗಿಸಿದ್ದೇವೆ ಎನ್ನುವ ಹುಂಬತನ ನಮಗೆ ಇಲ್ಲ. ನಾವು ಹೇಳಿದ ಎಲ್ಲಾ ಕೆಲಸವನ್ನು ಮಾಡಿದ್ದೇವೆ ಎನ್ನುವ ಹಂಬತನ ಇಲ್ಲ. ಮುಂದೆ ಮಾಡುತ್ತೇವೆ ಎಂದು ಹೇಳುವ ಎಲ್ಲಾ ಕಾರ್ಯಕ್ರಮವನ್ನು ಮಾಡೇ ಮಾಡುತ್ತೇವೆ ಎಂದು ಹೇಳುವ ದಡ್ಡತನ ನಮಗೆ ಇಲ್ಲ. ಏಕೆ ಇಲ್ಲ. ನನ್ನ ಮತ್ತೊಬ್ಬರು ಸ್ನೇಹಿತರು ಹಣಕಾಸಿನ ಸಚಿವರು ಮಂಡಿಸಿದಂತಹ 1996-97 ಆಯವ್ಯಯವನ್ನು ತಂದಿದ್ದೇನೆ. ನನಗೆ ಕಾಲಾವಕಾಶ ಕೊಡಲಿ. ಕಳೆದ ಐದು ವರ್ಷಗಳಲ್ಲಿ ಆಯವ್ಯಯದಲ್ಲಿ ಕೊಟ್ಟಿರುವಂತಹ ಎಲ್ಲಾ ಆಶ್ವಾಸನೆಗಳನ್ನು ಸರ್ಕಾರ ಈಡೇರಿಸಿದೆಯಾ ಎಂದು ಸವಾಲನ್ನು ನಾನು ಕೇಳುತ್ತೇನೆ. ಅದು ಸಾಧ್ಯವಿದ್ದರೆ ನಿಮಗೆ, ನಮಗೆ ಅದು ಸಾಧ್ಯವಿದೆ. ಅವರಿಗೆ ಸಾಧ್ಯವಿಲ್ಲದೆ ಇದ್ದರೆ ನಮಗೂ ಸಾಧ್ಯವಿಲ್ಲ. ಕೆರೆಗಳನ್ನು ಹೂಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಜಿನ. ಅದಕ್ಕೆ ಹಣಕಾಸು ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದೆ ಈಗಾಗಲೆ ಕೆರೆಗಳಲ್ಲಿ ನೀರು ತುಂಬಿದೆ. ನನ್ನ ಕ್ಷೇತ್ರದಲ್ಲಿ ಸೆಲೆಕ್ಟ್ ಮಾಡುವಂತಹ ಯಾವ ಕೆರೆಗಳು ಹೂಳೆತ್ತುವುದಕ್ಕೆ ಸಾಧ್ಯವಿಲ್ಲ.

5.10 ಪಿ.ಎಂ.

ನಾವೇನು ಹಣವನ್ನು ಒದಗಿಸಿದ್ದೇವೆ. ಹಿಂದೆ ಆಡಳಿತ ನಡೆಸಿದಂತಹ ಎಲ್ಲಾ ಸರ್ಕಾರಗಳು ಕೊಟ್ಟಿರುವಂತಹ ಆಶ್ವಾಸನೆಗಳನ್ನು ಸಂಪೂರ್ಣವಾಗಿ ನೆರವೇರಿಸದಿದ್ದರೆ, ಈ ಸರ್ಕಾರ ಕೂಡ ತಾನು ಕೊಟ್ಟಿದಂತಹ ಆಶ್ವಾಸನೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯತೆಗಳಿರುವುದಿಲ್ಲವೆನ್ನುವಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆದುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಇಚ್ಛೆ ಇಲ್ಲ. ಇನ್ನು ಕೆರೆಗಳ ಹೂಳು ಎತ್ತುವಂತಹ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ರಾಮಯ್ಯನವರೇ, ಅದಕ್ಕೆ ದುಡ್ಡು ಎಲ್ಲಿದೆ? ಅದನ್ನು ತಾವು ಯಾವ ಊರಿನಲ್ಲಿ ಮಾಡಿದ್ದೀರಿ, ಅದಕ್ಕೆ ಟೆಂಡರ್ ಆದರೂ ಕರೆಯಿರಿ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಒಂದು ವಿಷಯವನ್ನು ಹೇಳಿದ ಹಾಗೆ ಯಾವುದೇ ಕೃಷಿ ಪ್ರಭಾವವಾದಂತಹ ರಾಷ್ಟ್ರದಲ್ಲಿ ಎರಡು ವಿಷಯಗಳ ಬಗ್ಗೆ ಗಮನ ಕೊಡಬೇಕಾಗುತ್ತದೆ. ಮೊದಲನೆಯದಾಗಿ ಮಳೆ ನೀರನ್ನು ಶೇಖರಣೆ ಮಾಡಿ ಇಟ್ಟುಕೊಳ್ಳುವಂಥಾದ್ದು, ಎರಡನೆಯದಾಗಿ ಭೂಮಿಯ ಮಣ್ಣನ್ನು ಅಲುಗದಂತೆ ನೋಡಿಕೊಳ್ಳುವಂಥಾದ್ದು. Soil conservation, preservation of land is a must in the country. ಇದು ನನ್ನ ಹಾಗೂ

ತಜ್ಞರ ಪ್ರಕಾರ ಸರಿ ಎನಿಸಿದೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ನಾವು ಕೆರೆಗಳ ಹೂಳು ಎತ್ತುವುದರ ಮುಖಾಂತರ ಜಲಸಂವರ್ಧನೆ ಮಾಡಿ ಅದನ್ನು ಶೇಖರಣೆ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡರೆ, ಮತ್ತೊಂದು ಕಡೆ ಭೂ ಸಂರಕ್ಷಣೆ ಮಾಡುವುದಕ್ಕೆ ಕರ್ನಾಟಕ ರಾಜ್ಯದಲ್ಲಿ, ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಒಂದು ಪ್ರತ್ಯೇಕವಾದ ಡೈರೆಕ್ಟರೇಟನ್ನು ಸೃಷ್ಟಿ ಮಾಡಲಾಗಿದೆ. ನಾನು ಆಗಲೇ ಹೇಳಿದ ಹಾಗೆ ನಮಗೆ ಎಲ್ಲವನ್ನು ಮಾಡಿದ್ದೇವೆಂಬ ಹುಂಬತನವಿಲ್ಲವೆಂಬ ಮಾತನ್ನು ಹೇಳಿದ್ದೇನೆ. ಈ ಒಂದು ವರ್ಷದ ಹಿಂದೆ ಇದ್ದಂತಹ ರಸ್ತೆಗಳನ್ನು ಇವತ್ತಿನ ರಸ್ತೆಗಳಿಗೆ ಹೋಲಿಸಿದರೆ ಹೆಚ್ಚಿನ ಅಭಿವೃದ್ಧಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಇದು ಬೇರೆಯವರಿಗೆ ಆಗಿದ್ದೋ, ಇಲ್ಲವೋ, ನನಗೆ ಗೊತ್ತಿಲ್ಲ. ಯಾವ ಸರ್ಕಾರವೂ ರಸ್ತೆ ಅಭಿವೃದ್ಧಿಗೆ ಎಂದು ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರಲಿಲ್ಲ

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ರಾಮಯ್ಯನವರೇ, ತಾವು ಈ ಸದನವನ್ನು ಬೇರೆ ದಾರಿಗೆ ಎಳೆಯಬೇಡಿ, ಒಂದು ನಿಮಿಷ ತಾವು ಕುಳಿತುಕೊಂಡರೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಪ್ರತಿ ಕ್ಷೇತ್ರಕ್ಕೂ ರಸ್ತೆ ಅಭಿವೃದ್ಧಿಗೆ ಎಂದು ಈ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದೆ. ಈ ಹಣವೂ ಬಿಡುಗಡೆಯಾಗಿದೆ, ಖರ್ಚು ಆಗಿದೆ. ನನ್ನ ಕ್ಷೇತ್ರದಲ್ಲಿ ಆಗಿದೆ, ಇದರ ಬಗ್ಗೆ ಪಟ್ಟಿಯನ್ನು ಬೇಕಾದರೆ ಕೊಡುತ್ತೇನೆ, ಮತ್ತೆ ಅದು ಯಾವ ಹಂತದಲ್ಲಿದೆ ಎಂಬ ಮಾಹಿತಿಯನ್ನು ಕೊಡಲಾ? ಇಷ್ಟು ಹಣವನ್ನು ಯಾವ ಸರ್ಕಾರಗಳು ಕೊಟ್ಟಿರಲಿಲ್ಲ. ಪ್ಯಾಕೇಜ್ ಪ್ರೋಗ್ರಾಂ ಅನ್ನು ಕೈಗೆತ್ತಿಕೊಂಡಿದ್ದಾರೆ, ಮೂರುವರ್ಷಕ್ಕೆ ರಸ್ತೆಗಳನ್ನು ಮೇನ್‌ಟೈನ್ ಮಾಡುವಂಥಾದ್ದಕ್ಕೆ ಟೆಂಡರ್‌ಗಳನ್ನು ಕರೆಯಲಾಗಿದೆ. ನಾನು ಆಗಲೇ ಹೇಳಿದಂತೆ ನಾವು ಎಲ್ಲವನ್ನು ಮಾಡಿದ್ದೇವೆಂಬ ಹುಂಬತನವಿಲ್ಲವೆಂಬ ಮಾತನ್ನು ಹೇಳಿದ್ದೇನೆ. ಆದರೂ ಈ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಒಂದು ವರ್ಷದಲ್ಲಿ ತೃಪ್ತಿಕರವಾಗಿ ರಸ್ತೆಗಳ ಅಭಿವೃದ್ಧಿ ಮಾಡುವಂತಹ ಕೆಲಸವನ್ನು ನಾವು ಮಾಡಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಮಾನ್ಯ ರಾಮಯ್ಯನವರು ರಸ್ತೆಗಳ ಅಭಿವೃದ್ಧಿಗೆ ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಈ ಯೋಜನೆಯ ಕ್ರೆಡಿಟನ್ನು ಇವರ ಸರ್ಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ನಾವು 1999-2000 ರ ಬಜೆಟ್‌ನಲ್ಲಿ ಇ.ಎ. ಎಸ್, ಸ್ಟ್ಯಾಂಪ್ ಡ್ಯೂಟಿ. ಹಾಗೂ ತಾಲ್ಲೂಕು ಪಂಚಾಯತ್‌ಗೆ ಇಟ್ಟಿದಂತಹ ಹಣವನ್ನು ಖರ್ಚು ಮಾಡಬೇಕೆಂದು ಪಾಸ್ ಮಾಡಿದ್ದೆವು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಹಣವನ್ನು ಮರ್ಜ್ ಮಾಡಿ ಈ ತಾಲ್ಲೂಕು ಪಂಚಾಯತ್‌ಗೆ ಖರ್ಚು ಆಗಬೇಕಾಗಿದ್ದಂತಹ ಹಣ, ಸ್ಟ್ಯಾಂಪ್ ಡ್ಯೂಟಿಗೆ ಖರ್ಚು ಆಗಬೇಕಾಗಿದ್ದಂತಹ ಹಣ ಮತ್ತು ಈ ಇ.ಎ.ಎಸ್. ಹಣ ಇದೆಲ್ಲವನ್ನು ಸೇರಿಸಿ ಒಂದು ಕೋಟಿ ರೂಪಾಯಿಗಳನನು ಮಾಡಿರುವಂಥಾದ್ದು. ಅದು ನಮ್ಮ ಸರ್ಕಾರದ ಹಣವೇ ಹೊರತು ನಿಮ್ಮ ಬಜೆಟ್‌ನಲ್ಲಿ ಪಾಸ್ ಮಾಡಿದಂತಹ ಹಣವಲ್ಲ. ಆದುದರಿಂದ ಇದರಲ್ಲಿ ನೀವು ಕ್ರೆಡಿಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ಇದಕ್ಕೆ ಬಜೆಟ್‌ನಲ್ಲಿ ಹಣವನ್ನು ಪಾಸ್ ಮಾಡಿದ್ದರೆ ಹೇಳಿ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ರಸ್ತೆಗಳ ಅಭಿವೃದ್ಧಿಗೆಂದು ಒಂದು ಕೋಟಿ ರೂಪಾಯಿಗಳನ್ನು ಎಲ್ಲಿಂದ ಒದಗಿಸಿದೆ ಎಂಬುದು ನನಗೆ ಗೊತ್ತಿಲ್ಲ. ಅದು ನನಗೆ ಬೇಕಾಗಿಯೂ ಇಲ್ಲ. ಆದರೆ ನನ್ನ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಯವುದೋ ಮೂಲದಿಂದ ಒದಗಿಸಿಕೊಟ್ಟಿದ್ದು ರಸ್ತೆಗಳ ಅಭಿವೃದ್ಧಿಯನ್ನು ಮಾಡಿದ್ದಾರೆ, ಇಷ್ಟು ಮಾತ್ರ ನಿಜವೆಂದು ಹೇಳುತ್ತೇನೆ. I don't know from which source the money is provided. ಅವರು ಹಣವನ್ನು ಸಲಾವಾಗಿ ತಂದ್ದಾರೆ? ಯಾವ ಯೋಜನೆಯಿಂದ ತಂದಿದ್ದಾರೆ. ಅದು ನನಗೆ ಗೊತ್ತಿಲ್ಲ, ಅದರ ಅವಶ್ಯಕತೆಯೂ ನನಗೆ ಇಲ್ಲ. ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಯವನ್ನು ಕೇಳಿ. ನನ್ನ ಕ್ಷೇತ್ರದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿ ರಸ್ತೆಗಳ ಅಭಿವೃದ್ಧಿ ಮಾಡಿದ್ದಾರೆ, ಅಷ್ಟು ಮಾತ್ರ ನನಗೆ ಗೊತ್ತಿದೆ, ಉಳಿದಿದ್ದಕ್ಕೆ ಮಾನ್ಯ ಮಂತ್ರಿಯವರಿದ್ದಾರೆ, ಅವರು ತಮಗೆ ಉತ್ತರವನ್ನು ಕೊಡುತ್ತಾರೆ. ಇನ್ನು ಬೆಂಗಳೂರಿನಲ್ಲಿ ಆಗಬೇಕಾದಂತಹ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಮಾನ್ಯ ಪ್ರಧಾನಮಂತ್ರಿಯವರು ಅಲ್ಲಿಗೆ ಬಂದು ಈ ನಿಲ್ದಾಣಕ್ಕೆ ಶಂಕು ಸ್ಥಾಪನೆಯನ್ನು ಮಾಡಿ ಅದರ ಕೆಲಸವನ್ನು ಚಾಲು ಮಾಡಿದ್ದಾರೆ. ಇದು ಕೇವಲ ಚರ್ಚೆಯಲ್ಲೆ ಇತ್ತು, ಈ ಕೆಲಸವನ್ನು ಮಾನ್ಯ ಪ್ರಧಾನಮಂತ್ರಿಯವರು ಮಾಡಿ ಅದನ್ನು ಯಶಸ್ವಿಯಾಗಿ ಮಾಡಿಕೊಟ್ಟಂತಹ ಕೀರ್ತಿ ಈ ಸರ್ಕಾರಕ್ಕೆ ಸೇರುತ್ತದೆ. ಇದಕ್ಕಾಗಿ ಬೆಂಗಳೂರಿಗೆ ಬಂದು ಈ ಕೆಲಸವನ್ನು ನೆರವೇರಿಸಕೊಟ್ಟಂತಹ ಮಾನ್ಯ ಪ್ರಧಾನಮಂತ್ರಿಯವರನ್ನು ಅಭಿನಂದಿಸುತ್ತೇನೆ.

ಇನ್ನು ಈ ರಾಜ್ಯದ ರೈಲ್ವೆಯ ಬಗ್ಗೆ ಹೇಳುವುದಾದರೆ ಇದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ 52 ನೇ ಪ್ಯಾರಾದಲ್ಲಿ ಇದೆ. ಇದೇ ರಾಜ್ಯದ ಶ್ರೀ ಜಾಫರ್ ಷರೀಫ್‌ರವರು, ಶ್ರೀ ಕೆಂಗಲ್ ಹನುಮಂತಯ್ಯನವು ಈ ರಾಜ್ಯದಿಂದ ಹೋಗಿ ಭ ಆರತದ ರೈಲ್ವೆ ಮಂತ್ರಿಗಳಾಗಿದ್ದಾಗ ಈ ಕ್ಷೇತ್ರದಲ್ಲಿ ಆದಂತಹ ಅದ್ಭುತ ಸಾಧನೆಯನ್ನು ಕಂಡು ನಾನು ಇದನ್ನು ಪಕ್ಷಾತೀತವಾಗಿ ಮೆಚ್ಚಿಕೊಂಡವನು. ಆದರೆ ಕಳೆದ ವರ್ಷದ, ಈ ವರ್ಷದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯಕ್ಕೆ ರೈಲ್ವೆ ವಿಷಯದಲ್ಲಿ ದೊಡ್ಡ ಅನ್ಯಾಯವಾಗಿದೆ, ಎನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ. ಇಲ್ಲಿ ನಮ್ಮ ಹಿರಿಯ ಸ್ನೇಹಿತರುಗಳು ಬಹಳ ಸಂತೋಷ ಪಡುತ್ತಾರೆ, ಆದೇನೆಂದರೆ ಅಂದಿನ ಪ್ರಧಾನಮಂತ್ರಿಯಾಗಿದ್ದ ಗೌರವಾನ್ವಿತ ಶ್ರೀ ಹೆಚ್. ಡಿ. ದೇವೇಗೌಡರು ಹಾಸನದಿಂದ ಬೆಂಗಳೂರಿಗೆ ನನ್ನ ಊರಿನ ಮುಖಾಂತರ ರೈಲ್ವೆಯಾಗಬೇಕೆಂಬ ಪುಣ್ಯದ ಕೆಲಸವನ್ನು ಮಾಡಿದ್ದಾರೆ. ಅವರು ಉತ್ತಮವಾದಮತಹ ಕೆಲಸವನ್ನು ಮಾಡಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಇವತ್ತು ಆ ಕೆಲಸ ನಿಂತು ಹೋಗಿದೆ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ನಮಗೆ ಹಣವನ್ನು ಮಂಜೂರು ಮಾಡಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಆ ಕೆಲಸವನ್ನು ಪೂರ್ತಿ ಮಾಡುವುದಕ್ಕೆ ಕಳೆದ ವರ್ಷ ಸರ್ಕಾರ ಕೇವಲ ಒಂಭತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈ ವರ್ಷ ಹಣವನ್ನು ಕೊಡದೇ ಅನ್ಯಾಯವನ್ನು ಮಾಡಿದೆ, ಈ ಅನ್ಯಾಯವನ್ನು ಸರಿಮಾಡುವುದಕ್ಕೆ ರಾಜ್ಯ ಸರ್ಕಾರ.

ಶ್ರೀ ಡಿ. ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇವತು ಓಡುತ್ತಿರುವಂತಹ ಜೈಲನ್ನು ನಿಲ್ಲಿಸಿದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ತಾಳ, ತಂತಿ, ಇಲ್ಲ. ಹರಿಕಥೆ ಹೇಳಿದ ಹಾಗೆ ಹೇಳುತ್ತಾ ಇದ್ದಾರೆ. ನಾವು ನಿನ್ನೆಯಿಂದ ಕೇಳಿದ್ದನ್ನೇ ಕೇಳುತ್ತಿದ್ದೇವೆ. ನಾವು ಮಾಡಬೇಕಾದ ಕೆಲಸವನ್ನು ಬಿಟ್ಟು ಎಲ್ಲವನ್ನು ಕೇಳುತ್ತಾ ಇರಬೇಕಾ! ಅವರು ಮಾಡುವ ಕೆಲಸವನ್ನು ನಾವು ನೋಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ: ಮಾನ್ಯ ವಿಶ್ವೇಶ್ವರ ಹೆಗಡೆಯವರೆ. ಒಂದು ರೈಲನ್ನು ಬೆಂಗಳೂರಿನಿಂದ ಮಂಗಳೂರಿಗೆ ಸಕಲೇಶಪುರ, ಹಾಸನದ ಮಾರ್ಗವಾಗಿ ಹೋಗುತ್ತಿತ್ತು. ಅದನ್ನು ನಿಲ್ಲಿಸಿದರು. ಇದನ್ನು ಏಕೆ ನಿಲ್ಲಿಸಿದರೆಂದರೆ ಈ ಮಾರ್ಗವನ್ನು ಬ್ರಾಡ್‌ಗೇಟ್ ಮಾಡುತ್ತೇವೆಂದು ನಿಲ್ಲಿಸಿದರು. ನಮಗೆ ಮೊದಲೇ ಇದ್ದದ್ದು ಸಾಕಾಗಿತ್ತು. ಈಗ ಏನಾಗಿದೆ ಎಂದರೆ ರೈಲು ಇಲ್ಲ, ಬ್ರಾಡ್‌ಗೇಜ್ ಇಲ್ಲ, ಇಂತಹ ತೀರ್ಮಾಣವಾಗಿದೆ.

ಶ್ರೀ ವೈ. ಕೆ. ರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣದಲ್ಲಿರುವಂಥಾದ್ದು ಬೇರೆ ಯಾವುದು ಹೇಳುತ್ತಾ ಇಲ್ಲ, ಇದರಲ್ಲಿ 52 ನೇ ಪ್ಯಾರ್‌ಹೆಸ್ ಈ ರೀತಿ ಇದೆ; ರಾಜ್ಯದಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳ ಅನುಷ್ಠಾನವನ್ನು ವಿಶೇಷ ಕಾರ್ಯವಿಧಾನದ ಮುಲಕ ತ್ವರಿತಗೊಳಿಸುವ ಉದ್ದೇಶಕ್ಕಾಗಿ ಕರ್ನಾಟಕವು ಭಾರತೀಯ ರೈಲ್ವೆ ಇಲಾಖೆಯೊಂದಿಗೆ ಒಡಂಬಡಿಕೆ ಪತ್ರ ಮಾಡಿಕೊಂಡ ಪ್ರಪ್ರಥಮ ರಾಜ್ಯ ಎಂಬುದು ಸದಸ್ಯರಿಗೆ ತಿಳಿದೇ ಇದೆ. ನಾನು ಇದನ್ನು ಏಕೆ ಹೇಳುತ್ತಿದ್ದೆನೆಂದರೆ ನನ್ನ ಸ್ನೇಹಿತರು ಹೇಳಿದಹಾಗೆ ಪಿಟೀಲು ಬಾರಿಸಲಾ? ಹೇಳಿ, ನೀವು ನಿನ್ನೆ ಮಾತನಾಡುವಾಗ ನಾನು ಸುಮ್ಮನೆ ಕುಳಿತ್ತಿದ್ದೆ. ಆಡಳಿತ ಪಕ್ಷದವರು ಹೇಳಿದ ಹಾಗೆ ಕೆಲಸ ಮಾಡುವುದಕ್ಕೆಂದು ವಿರೋಧಪಕ್ಷದವರನ್ನು ಜನರು ಕಳುಹಿಸಿದ್ದಾರ? ಇಲ್ಲಿ ನಾನು ಏನು ಹೇಳಬೇಕೆಂದು ಜನರು ಹೇಳಿ ಕಳುಹಿಸ್ಸಿದ್ದಾರೆ. ನಾನು ಏನು ಹೇಳಬೇಕೆಂದು ಮಾನ್ಯ ರಾಜ್ಯಪಾಲರು ಅವರ ಭಾಷಣದಲಿ ಹೇಳಿದ್ದಾರೆ, ಅದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಹೆಚ್. ಡಿ. ದೇವೇಗೌಡರು ಈ ರೈಲ್ವೆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕಾರಣಕರ್ತರಾಗಿದ್ದಾರೆ. ಅದನ್ನು ನಾನು ಸ್ಮರಿಸುತ್ತೇವೆ. ನನಗೆ ಅಷ್ಟು ಔದಾರ್ಯ, ಮನುಷ್ಯತ್ವ ಇದೆ, ಈ ಕೆಲಸವನ್ನು ಮುಂದುವರೆಸಿ ಸಂಪೂರ್ಣಗೊಳಿಸುವುದಕ್ಕೆ ಸರ್ಕಾರ ಕಾರ್ಯರೂಪಕ್ಕೆ ತರುತ್ತಿಲ್ಲ. ಅದಕ್ಕಾಗಿ ನಾನು ನಿಂದಿಸುತ್ತಿದ್ದೇನೆ. ಸರ್ಕಾರ ಕೈ ಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈ ರೈಲ್ವೆ ಯೋಜನೆಯನು ಕಾರ್ಯರೂಪಕ್ಕೆ ತರುವುದಕ್ಕೆ ರಾಜ್ಯ ಸರ್ಕಾರ ಹೊಸದಾಗಿ ಒಂದು ನಿಗಮವನ್ನು ಯಾರಾದರೂ ಮೆಚ್ಚುವಂಥಾದ್ದು ಅಲ್ಲವೇ? ಕೇಂದ್ರಸರ್ಕಾರದವರಿಂದ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವಂಥಾದ್ದಕ್ಕೆ ರಾಜ್ಯ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮವನ್ನು ಮೆಚ್ಚುಗೆ ಸೂಚಿಸುವಂತಹ ಕಾರ್ಯಕ್ರಮವೆಂದು ನಾನು ಹೇಳುವುದಕ್ಕಿಚ್ಚಿಸುತ್ತೇನೆ. ಇದು ಅತ್ಯಂತ ಮೆಚ್ಚುಗೆಯನ್ನು ಸೂಚಿಸುತಕ್ಕಂಥ ಕಾರ್ಯಕ್ರಮವೆಂದು ಹೇಳುವುದಕ್ಕೆ ನಾನು ಇಚ್ಚೆಪಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಸ್ವಾಮಿ ತಾವು ಹೇಳಿರುವುದು ಸತ್ಯಾಂಶ, ಕರ್ನಾಟಕ ರಾಜ್ಯಕ್ಕೆ ಈವರ್ಷದ ರೈಲ್ವೆ ಆಯವ್ಯಯದಲ್ಲಿ ಅನ್ಯಾಯವಾಗಿದೆ, ಅದರಲ್ಲಿ ಸಂಶಯವಿಲ್ಲ, ಅದಕ್ಕೋಸ್ಕರ ಈ ತಿಂಗಳ 15 ನೇ ತಾರೀಖು ಮಧ್ಯಾಹ್ನ ನಮ್ಮ ನಾಯಕರಾದ ಶ್ರೀಮಾನ್ ರಾಮಲಕ್ಷ್ಣ ಹೆಗ್ಡೆಯವರು, ಕರ್ನಾಟಕದ ನಮ್ಮ ಪಕ್ಷದ ಹಾಗೂ ಜನಗಳ ಪರವಾಗಿ ಪ್ರಧಾನಮಂತ್ರಿಗಳನ್ನು ಬೇಟಿ ಮಾಡಿ ರಾಜ್ಯಕ್ಕೆ ಈ ವರ್ಷದ ರೈಲ್ವೆ ಆಯವ್ಯಯದಲ್ಲಾಗಿರುವ ಅನ್ಯಾಯವನ್ನು ಸರಿ ಮಾಡಿ ನ್ಯಾಯ

ಒದಗಿಸಿಕೊಡಬೇಕೆಂದು ಒತ್ತಾಯ ಮಾಡುವವರಿದ್ದಾರೆಂಬುದು ಒಂದು ಭಾಗ. ಅದಕ್ಕಿಂತ ಹೆಚ್ಚಾಗಿ, ನಿಮ್ಮ ಪಕ್ಷದ ಲೋಕಸಭೆ ಸದಸ್ಯರು ಯಾರಿದ್ದಾರೆ ಅವರೇನು ಮಾಡುತ್ತಿದ್ದಾರೆ? ಅಲ್ಲಿ ಕಟ್ ಮೋಷನ್ ಅನ್ನು ಬಿಜೆಡಿಯವರು ಮೂವ್ ಮಾಡುತ್ತಿದ್ದಾರೆ, ಕರ್ನಾಟಕದ ಲೋಕಸಭಾ ಸದಸ್ಯರ್ಯಾದರು ಒಬ್ಬರು ಈ ಬಗ್ಗೆ ಉಸಿರು ಎತ್ತಿದ್ದಾರಾ ಸ್ವಾಮಿ? ಉತ್ತರ ಕರ್ನಾಟಕದಲ್ಲಿ ರೈಲ್ವೆ ಆಯವ್ಯದಲ್ಲಿ ಬಹಳ ಅನ್ಯಾಯವಾಗಿದೆ, ದಕ್ಷಿಣ ಕರ್ನಾಟಕಕ್ಕೂ ಕೂಡ ಬಹಳ ಅನ್ಯಾಯವಾಗಿದೆ ಯಾರಾದರೂ ಇದುವರೆವಿಗೂ ಉಸಿರು ಎತ್ತಿದ್ದಾರಾ? ಏತಕ್ಕೆ ಒಂದು ಸರ್ವಪಕ್ಷವು ಸಭೆಯನ್ನು ಕರೆದು ಈ ರೀತಿಯಾಗಿರುವುದು ಖಂಡನೀಯ, ಪ್ರಧಾನಿಗಳನ್ನು ಭೇಟಿ ಮಾಡಬೇಕೆಂದು ನಿಯೋಗ ಹೋಗಬಾರದು? ನಾವು ಇವತ್ತು ಲಕ್ಷ ಹಾಕಿದರೆ ರೈಲ್ವೆ ಆಯವ್ಯಯದಲ್ಲಿ ಕರ್ನಾಟಕಕ್ಕೆ ಬಂದಿರುವುದು ಕೇವಲ ನೂರ ನಲವತ್ತು ಕೋಟಿ ರೂಪಾಯಿಗಳು ಮಾತ್ರ, ಪಶ್ಚಿಮ ಬಂಗಾಳಕ್ಕೆ 1450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇದು ಸರಿಯಾದ ಕ್ರಮವಲ್ಲ. ಇವತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನಡುವಿರುವ ಸಂಬಂಧದ ಹಿನ್ನೆಲೆಯಲ್ಲಿ ಈ ಸಂಬಂಧ ಕೆಡತಕ್ಕಂಥ ಒಂದು ಕ್ರಮ. ಇದನ್ನು ನಾವು ಕೂಡ ತಮ್ಮ ಜೊತೆಯಲ್ಲಿ ಖಂಡಿಸುತ್ತೇನೆ. ಕಳೆದ ಸಾರಿ ಆಯವ್ಯಯದಲ್ಲಿ ಮುಖ್ಯಮಂತ್ರಿಗಳ ನಮಗೆ ಇನ್ನೊಂದು ರೈಲ್ವೆ ಆಯಾ ಬಜಾಟ್ ತೋರಿಸಿದರು. ಅವರು ರಾಜ್ಯದಲ್ಲಿ ಒಂದು ರೈಲ್ವೆ ಮಂಡಳಿಯನ್ನು ಮಾಡುತ್ತೇನೆ ಹೇಳಿದರು, ಆಯವ್ಯಯದಲ್ಲಿ ಹಣವಿಲ್ಲ, ಕಳೆದ ಸಾರಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಈ ಬಾಬ್ತಿಗೆ ಇಟ್ಟಿದ್ದೀರಿ? 100 ಕೋಟಿ ಕೊಟ್ಟಿದ್ದೀರಾ, 50 ಕೋಟಿ ಕೊಟ್ಟಿದ್ದೀರಾ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಾ ಈ ಅಂಕಿ ಅಂಶಗಳನ್ನು ಕೂಡ ಹೇಳಬೇಕಾಗುತ್ತದೆ, ಬರಿ ಹೊಗಳುವುದು ಮಾತ್ರವಲ್ಲ.

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೆ, ಕಳೆದ ವರ್ಷ ಹಾಗೂ ಈ ವರ್ಷ ಭಾರತ ಸರ್ಕಾರ ವಿಶೇಷವಾಗಿ ರೈಲ್ವೆ ಆಯವ್ಯಯದಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳಿದ ನನ್ನ ಧ್ವನಿಗೆ ಧ್ವನಿಗೂಡಿಸಿದ ವಿರೋಧಪಕ್ಷದ ಸ್ನೇಹಿತರಿಗೆ ಅತ್ಯಂತ ಧನ್ಯವಾದಗಳು. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಅಷ್ಟೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಹೊರತು ಮತ್ತೇನನ್ನು ಹೇಳಲು ಬಯಸುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಿಮಗೆ ಕೇಂದ್ರ ಸರ್ಕಾರದೊಡನೆ ಕನ್‌ಫ್ರಾಂಟ್ ಮಾಡಬೇಕೆಂದಿದ್ದರೆ, ಬೆಳಗಾಂನಲ್ಲಿ ಬಂದು ಒಂದು ಹೇಳಿಕೆಯನ್ನು ಕೊಟ್ಟರು, ಒಂದು ಖಂಡನಾ ನಿರ್ಣಯವನ್ನು ಈ ಸಭೆಯಲ್ಲಿ ಮಾಡಿ ಎಂದು ಹೇಳಿದೆವು ಏತಕ್ಕೆ ಮಾಡಲಿಲ್ಲ? XXX ಉತ್ತರವನ್ನು ಕೊಟ್ಟಾಗ ನಷ್ಟ ಮುಖ್ಯಮಂತ್ರಿಗಳ ಅದರ ಬಗ್ಗೆ ಏನನ್ನು ಹೇಳಲಿಲ್ಲ.

(ಗೊಂದಲ)

ಉಪಾಧ್ಯಕ್ಷರೆ: ಉಡಾಫ್ ಎನ್ನುವ ಪದವನ್ನು ನಡವಳಿಕೆಯಿಂದ ತೆಗೆದು ಹಾಕಬೇಕು.

(ಗೊಂದಲ)

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಕೇಂದ್ರ ರೈಲ್ವೆ ಆಯವ್ಯಯದಲ್ಲಿ ಕರ್ನಾಟಕ ರಾಜ್ಯಕ್ಕಾಗಿರುವ ಅನ್ಯಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಖಂಡಿಸಿದ್ದಾರೆ. ನಾವು ಆ ಪಕ್ಷದವರು ಹಾಗೂ ಎಲ್ಲಾ ಸಂಸದೀಯ ಸದಸ್ಯರು ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ, ಅದರಲ್ಲಿ ಯಾವ ಸಂಶಯವಿಲ್ಲ. ಪದೇ ಪದೇ ಮುಖ್ಯಮಂತ್ರಿಗಳು ಮಾತನಾಡಿದರೆಂದು ಹೇಳಿದರೆ ಏನು ಅರ್ಥ?

ಶ್ರೀ ಪಿ. ಜಿ. ಆರ್. ಸಿಂಧ್ಯಾ: ಅದು ಅಸಂಸದೀಯ ಪದವೇನು? ನೀವು ವಿರೋಧಪಕ್ಷದಲ್ಲಿದ್ದಾಗ ಮಾತನಾಡಿಲ್ಲವೇ? ನಾನು ನೂರು ಸಾರಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಜೋರಾಗಿ ಮಾತನಾಡಲು ಬರುತ್ತದೆಂದು XXX ಎಂದು ಹೇಳಿದರೆ ಹೇಗೆ? ಪ್ರತಿಯೊಂದು ಹಂತದಲ್ಲೂ ಮಾನ್ಯ ಮುಖ್ಯಮಂತ್ರಿಗಳು, ಪಕ್ಷಾತೀತವಾಗಿ ಎಲ್ಲಾ ಸಂಸತ್ ಸದಸ್ಯರನ್ನು ಕರ್ನಾಟಕದ ಭವನದಲ್ಲಿ ಸಭೆಗೆ ಕರೆಯಿಸಿ ನಮ್ಮ ರಾಜ್ಯಕ್ಕೆ ಏನಾಗಬೇಕೆಂಬುದನ್ನು ಹೇಳಿ, ಒಂದು ಬ್ರೋಚರ್ ಮಾಡಿ ಅವರಿಗೆ ಕೊಟ್ಟು ರಾಜ್ಯದ ಈ ಎಲ್ಲಾ ಯೋಜನೆಗಳು ಕೇಂದ್ರದಲ್ಲಿ ಪೆಂಡಿಂಗ್ ಇದೆ, ನೀವು ಈ ಬಗ್ಗೆ ರಾಮಕೃಷ್ಣ ಹೆಗ್ಡೆಯವರು ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಒತ್ತಾಯ ಮಾಡುತ್ತಾರೆಂದು ಹೇಳುತ್ತಾರೆ. ಅವರು ಕೇಂದ್ರದ ಕೈಗಾರಿಕೆ ಹಾಗೂ ವಾಣಿಜ್ಯ ಮಂತ್ರಿಗಳಾಗಿದ್ದಾಗ ಮಾಡಬಹುದಿತ್ತಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ತಾವು ಈ ಕಡೆ ಕುಳಿತಾಗ ಮಾತನಾಡಬೇಕಾಗಿತ್ತು. ಆಗ ನೀವೇಕೆ ಸುಮ್ಮನಿದ್ದೀರಿ, ನೀವು ಮಾತನಾಡುತ್ತೀರೆಂದು ನಾವು ಮಾತನಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾತನಾಡುವಾಗ ಮಾತನಾಡಿದ್ದೇವೆ, ಅದರ ಬಗ್ಗೆ ಸಂಶಯಬೇಡ, ಆದರೆ ಎದ್ದ ತಕ್ಷಣವೇ ಉಡಾಫೆ ಮಾತು ಎಂದರೆ ಹೇಗೆ? ನಮ್ಮ ಮೂರ್‍ನಾಲ್ಕು ಯೋಜನೆಗಳಿಗೆ ಕೇಂದ್ರ ರೈಲ್ವೆ ಮಂತ್ರಿಗಳೇನು ಒಪ್ಪಿಕೊಂಡಿದ್ದಾರೆ ಅಥವಾ ಎಂಒಯುಗೆ ಏನು ಸಹಿ ಹಾಕಲಾಗಿದೆ ಅದಕ್ಕೆ ಹಣವನ್ನು ಈ ಆಯವ್ಯಯದಲ್ಲಿ ಒದಗಿಸುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಹಣ ಎಲ್ಲಿದೆ ಎಂದರೆ, ಕೈಯಲ್ಲಿ ಹಿಡಿದುಕೊಂಡು ಕೊಡಲಾಗುತ್ತದೆಯೇ? ಕೇಂದ್ರ ಸರ್ಕಾರದ ಆಯವ್ಯಯ ಬಂದಿದೆ ನಮ್ಮ ಆಯವ್ಯಯ ಈ ತಿಂಗಳ 26 ನೇ ತಾರೀಖು ಬರುತ್ತದೆ, ಮುಂಚೆ ತಮ್ಮ ಬಾಯಿಂದ ಇಂತಹ ಮಾತು ಬರಬಾರದು, ಮುಖ್ಯಮಂತ್ರಿಗಳು ಇದ್ದಾಗ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ: ನಮಗೇನು ಭಯವೇ? ನಾವು ಅವರ ಮಲಾದೆಯಲ್ಲಿದೇವೆಯೇ? ವಿದ್ಯುತ್ ಬಗ್ಗೆ ಮಾತನಾಡಬೇಕೆಂದು ನಿನ್ನೆಯಿಂದ ಕಾಯುತ್ತಿದ್ದೇವೆ, ಅವರು ಬರುವುದಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರಸ್ತುತ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರವನ್ನು ಕೊಟ್ಟಷ್ಟು ಹಿಂದೆ 5 ವರ್ಷದಲ್ಲಿ ಯಾವ ಮುಖ್ಯಮಂತ್ರಿಯು ಕೊಟ್ಟಿಲ್ಲ? ನಾನು ಅದನ್ನು ಹೇಳಬೇಕಾಗಿಲ್ಲ. ಮುಖ್ಯಮಂತ್ರಿಗಳು ಬರುತ್ತಾರೆ, ಆಗ ಪ್ರಸ್ತಾಪ ಮಾಡಿ, ಆದರೆ ಏನೂ ಇಲ್ಲ ಎನ್ನುವ ಪದಗಳನ್ನು ಬಳಸುವುದು ಸರಿಯಲ್ಲ ಕಡತದಿಂದ ತೆಗೆದು ಹಾಕಬೇಕು.

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ಜೆ.ಟಿ.ಪಾಟೀಲ್ : ಮಾನ್ಯ ಸಿಂಧ್ಯಾರವರೆ, ರಾಜ್ಯಸಭಾ ಸದಸ್ಯರಾಗಿ ಇಲ್ಲಿಯವರೆಗೆ ಏನು ಮಾಡಿದ್ದಾರೆಂಬುದನ್ನು ಹೇಳಿ.

ಶ್ರೀ ವಿಶ್ವೇಶ್ವರಯ ಹೆಗ್ಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, XXX ಮಾತನಾಡುತ್ತಿದ್ದಾರೆ, ಅದಕ್ಕಾಗಿ ಈ ರೀತಿಯಾಗಿ ಮಾತನಾಡುತ್ತಾ ಹೋದರೆ ಅದು ಆಗುವುದಿಲ್ಲ ಹೋಗುವುದಿಲ್ಲ , ಏನು ಉಪಯೋಗವಿಲ್ಲ, ಸರ್ಕಾರದ ಕೈಯಲ್ಲಿ ಕೆಲಸ ಮಾಡಿಸಿ ತೋರಿಸುವುದಕ್ಕಾಗುವುದಿಲ್ಲ, ಬರೀ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು : ಮಾನ್ಯ ಉಪಾಧ್ಯಕ್ಷರೆ, ಲೋಕಸಭೆ ಸದಸ್ಯರ ವಿಚಾರದಲ್ಲಿ ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿರುವುದು ಕನ್‌ಫ್ರಂಟೇಶನ್‌ಗೆ ಅವಕಾಶ ಮಾಡಿಕೊಡುತ್ತದೆ. ಅವರೇನು ಮಾಡಿದ್ದಾರೆಂದು ಅವರ ಕಾಂಡಕ್ಟ್ ಬಗ್ಗೆ ಏನು ಹೇಳಿದ್ದಾರೆ ಅದನ್ನು ಕೂಡ ಕಡತದಿಂದ ತೆಗೆದು ಹಾಕಬೇಕು. ದೇಶದ ಗೌರವಾನ್ವಿತ ಮಂತ್ರಿಗಳು, ಮಂತ್ರಿಗಳೇದು ಹೇಳಲಿ, ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ನಡವಳಿಕೆಯ ದೃಷ್ಟಿಯಿಂದ ಸರಿಯಲ್ಲ, ರೆಸಲ್ಯೂಶನ್ ಆದರೂ ಮಾಡಲಿ ಏನಾದರೂ ಮಾಡಲಿ. ನಾನು ಸಂಸದೀಯ ಮಂತ್ರಿಯಾಗಿ ಹೇಳುವುದೇನೆಂದರೆ, XXXಎಂಬುದು ಸಂಸದೀಯ ಪದ ಎಂದರೆ ನನ್ನದೇನು ಅಭ್ಯಂತರವಿಲ್ಲ. ಸಂಸದೀಯ ನಡವಳಿಕೆಯಲ್ಲಿ ಇವನ್ನೆಲ್ಲಾ ಹೊಸದಾಗಿ ಸೇರಿಸುತ್ತಾ ಹೋದರೆ, ಉಳಿಯುವುದು ಇಲ್ಲ.

ಉಪಾಧ್ಯಕ್ಷರು: ಕಡತವನ್ನು ತರಿಸಿ, ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಡತದಿಂದ ತೆಗೆಸುವುದಕ್ಕಿಂತ ಮುಂಚೆ ಕಾನೂನು ಪುಸ್ತಕದಲ್ಲಿ ನನ್ನ ಮಾತನ್ನು ಆಲಿಸಬೇಕೆಂದು ಇರುವುದರಿಂದ ತಮ್ಮ ಕಿವಿಗೆ ಕೇಳಿಸಲೆಂದು ಹೇಳುವುದೇನೆಂದರೆ, ಎನ್ನುವುದು ಅಸಂಸದೀಯ ಪದವಲ್ಲ, ಎರಡನೇಯದಾಗಿ ಕೇಂದ್ರ ಸರ್ಕಾರದ ಮಂತ್ರಿಗಳ ಹೆಸರನ್ನು ಹೇಳಲಿಲ್ಲ; ಮಾತು ಎಂದು ಹೇಳಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇದು ಸದನದ ಒಬ್ಬ ಸದಸ್ಯರ ಉದ್ಧಟತನ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವೆಲ್ಲಾ ಕೇಳಿಸಿಕೊಂಡಿದ್ದೇವೆ, ಮಾತು ಎನ್ನುವುದನ್ನು ಪುನರುಚ್ಚರಿಸಿದ್ದೇನೆ, ಅದು ಅಸಂಸದೀಯ ಪದವಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಎರಡನೆಯದಾಗಿ, ಕೇಂದ್ರದ ಮಂತ್ರಿಗಳ ಹೆಸರು ಹೇಳಬಾರದು ಎಂದು ಹೇಳಿದ್ದಾರೆ. ನಾನು ಹೆಸರನ್ನು ಹೇಳುವುದಿಲ್ಲ. ಅದನ್ನು ಎಕ್ಸ್‌ಪಂಜ್ ಮಾಡಬಹುದು. ಈಗ ಕೇಂದ್ರದ ಮಂತ್ರಿಗಳಾಗಿರತಕ್ಕಂಥವರು, ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದರು. ಅವರು ಹೇಳಿರತಕ್ಕಂಥಾದ್ದು ಖಂಡನೀಯ. ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ನೀವು ಅದನ್ನು ಎಕ್ಸ್‌ಪಂಜ್ ಮಾಡಿ.

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ಹೆಚ್. ಸಿ. ಶ್ರೀ ಕಂಠಯ್ಯ : ಸಿಂಧ್ಯಾರವರಿಗೆ ಏಕೆ ಇಷ್ಟು ಸಿಟ್ಟು ಬಂದಿದೆ ಎಂದರೆ, ನಿನ್ನೆ ನಡೆದ ವರ್ಲ್ಡ್ ಕಾನ್ಫರೆನ್ಸ್‌ನಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳೂ ಸಿಂಪ್ಲಿ ಮಾರ್ವೆಲಸ್ ಎಂದು ಹೇಳಿದರಲ್ಲ, ಅವರಿಗೆ ಅದನ್ನು ಕೇಳಿ ತಡೆಯಲು ಆಗುತ್ತಿಲ್ಲ. ಇನ್ನೊಬ್ಬರು ಸೂಪರ್‌ಮ್ಯಾನ್ ಎಂದು ಹೇಳಿದರು. ಅವರೆಡೂ ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಓದಿಬಿಟ್ಟು ಅವರಿಗೆ, ಏನು ಮಾಡುವುದು ಎಂದು ಕುದಿಯುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಕರ್ನಾಟಕದ ಮುಖ್ಯಮಂತ್ರಿಗಳನ್ನು ಸೂಪರ್‌ಮ್ಯಾನ್ ಎಂದು ಕರೆಯುವುದರಲ್ಲಿ ಖಂಡಿತವಾಗಿ ತಕರಾರಿಲ್ಲ. ಏಕೆಂದರೆ, ಸೂಪರ್ ಎನ್ನುವ ಶಬ್ದವನ್ನು ಉಪಯೋಗಿಸಿದವರೇ ನಮ್ಮ ಮುಖ್ಯಮಂತ್ರಿಗಳು. ರೈತರಿಗೆಲ್ಲಾ ಮಾಯಾಬಜಾರ್‌ಗಳಾಗಿವೆ. ರೈಲ್ವೆ ಬಜಾರ್‌ಗಳಾಗಿವೆ. ಮಯಾಬಜಾರ್ ಎಂದು ಪತ್ರಿಕೆಗಳಲ್ಲಿ ಬಂದಿದೆ. ಮೂರನೆಯದಾಗಿ, ಲೋಕಸಭಾ ಸದಸ್ಯರಿಗೆ ಸಂಬಂಧಪಟ್ಟಹಾಗೆ ಮಾತನಾಡಬಾರದು ಎಂದು ಹೇಳಿದರು. ಅವರಿಗೆ ಕೊಟ್ಟಿರುವ ಕಾರುಗಳ ಬಗ್ಗೆ, ಅವರು ಸಂಸದರ ನಿಧಿಗಳನ್ನು ಅವರವರ ಕ್ಷೇತ್ರಗಳಲ್ಲಿ ಯಾವ ರೀತಿ ಹಂಚುತ್ತಿದ್ದಾರೆ ಎನ್ನುವುದರ ಬಗ್ಗೆಯಲ್ಲಾ ಈ ಸದನದಲ್ಲಿ ಚರ್ಚೆಯಾಯಿತು. ರೈಲ್ವೆ ಬಜೆಟ್ ಬಗ್ಗೆ ಇವರು ಧರಣಿ ಮಾಡಲಿಲ್ಲ, ಅದನ್ನು ಕೇಳಲಿಲ್ಲ ಎಂದು ಹೇಳಿರುವುದನ್ನು ಎಕ್ಸ್‌ಪಂಜ್ ಮಾಡಬೇಕು ಎಂದು ಹೇಳಿದರೆ, ಅವರು ಅದನ್ನು ಹೇಳಿದರು ಎಂದು ನೀವು ಎಕ್ಸ್‌ಪಂಜ್ ಮಾಡಬೇಡಿ.

ಉಪಾಧ್ಯಕ್ಷರು : ರಾಮಯ್ಯನವರೇ ಬೇಗ ಮುಗಿಸಿಬಿಡಿ.

ಶ್ರೀ ವೈ. ಕೆ. ರಾಮಯ್ಯ: ತಮ್ಮ ಸ್ಥಾನಕ್ಕೆ ನಾನು ಹೆಚ್ಚಿನ ಗೌರವವನ್ನು ತೋರುತ್ತೇನೆ. ನಾನು ಇಲ್ಲಿ ಕುಳಿತಿದ್ದಂಥ ಸಂದರ್ಭದಲ್ಲಿ ಆ ಕಡೆಯ ಯಾವುದೇ ಒಬ್ಬ ಸದಸ್ಯರು ಮತನಾಡುವಾಗ ನಾನು ಮಧ್ಯೆ ಎದ್ದು ನಿಲ್ಲುವುದಿಲ್ಲ. I, Swear, you can verify the records. ಆದರೆ, ಆ ಕಡೆ ಇರುವಂಥ ನನ್ನ ಸ್ನೇಹಿತರು, ರಾಮಯ್ಯನವರು ಅನಾವಶ್ಯಕವಾಗಿ, ಚಟಕ್ಕಾಗಿ, ಬೇಕು ಎಂದೇ, XXX ಮಾಡುತ್ತಿದ್ದಾರೆ ಎನ್ನುವ ಮಾತನ್ನು ಆಡಿದ್ದಾರೆ. ಆ ಮಾತನ್ನು ಕಡತದಿಂದ ತೆಗೆದು ಹಾಕದಿದ್ದರೆ ನಾನು ನನ್ನ ಭಾಷಣವನ್ನು ಮುಂದುವರೆಸಲು ಸಿದ್ಧವಿಲ್ಲ. ನಾನು ಈ ಸದನಕ್ಕೆ ಬಂದು 20 ವರ್ಷಗಳಾಗಿವೆ. ನಾನು ನಿಮ್ಮಂಥ ಬಹಳ ಜನರನ್ನು ನೋಡಿದ್ದೇನೆ. ಇವೆಲ್ಲಾ ನನ್ನ ಹತ್ತಿರ ನಡೆಯುವುದಿಲ್ಲ. I am telling, there are all not possible with me.

SRI P.G.R SINDHYA : You can't warn a Member like that.

SRI Y.K. RAMAIAH : Yes, I will do it. I am thinking the chair. ನನ್ನ ನಡತೆಯ ಬಗ್ಗೆ, ನನ್ನ ವ್ಯಕ್ತಿತ್ವದ ಬಗ್ಗೆ ನನ್ನ ಮಾತನ ಬಗ್ಗೆ ಅವರು ಹೇಳಿದ್ದಾರೆ. ಯಾರಾದರೂ ಮತನಾಡುವಾಗ ನಾನು ಎದ್ದು ನಿಲ್ಲುತ್ತೇನೆಯೇ? ನಾನು ಯಾರಿಗಾದರೂ ಇಂಟರ್‌ಪ್ಟ್ ಮಾಡುತ್ತೇನೆಯೇ? ಎರಡನೆಯದಾಗಿ, ನಾನು ಹೊಟ್ಟೆಪಾಡಿಗಾಗಿ 18 ವರ್ಷಗಳ ಕಾಲ ಲಾಯರ್ ಆಗಿ ಮಾತನಾಡಿಕೊಂಡು ಬದುಕಿದ್ದೇನೆ. 20 ವರ್ಷಗಳ ಕಾಲ ಒಬ್ಬ ಶಾಸಕನಾಗಿ, ರಾಜಕಾರಣಿಯಾಗಿ ಮಾತನಾಡಿದ್ದೇನೆ. ಆದರೆ ಇವರು XXX ಇವರಬಗ್ಗೆ ನಾನು ಹೇಳಲೀ? ಇವರು ಬಂದು ಇನ್ನೂ ಮೂರು ದಿವಸವಾಗಿಲ್ಲ, ಆಗಲೇ ನನ್ನ ಹಲ್ಲು ಹಿಡಿದು ನೋಡಲು ಬರುತ್ತಾರೆ ಎಂದು ನಾನು ನಿಮ್ಮ ಮುಖಾಂತರ

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಹೇಳಿದರೆ ಅದು ಸರಿಯಾಗುತ್ತದೆಯೇ? ಎಷ್ಟೋ ಹೆತ್ತವಳಿಗೆ ಎಷ್ಟೋ ಹೆತ್ತವಳು ಹೇಳಿಕೊಡಲು ಬಂದಳು ಎಂದು ಹೇಳಲೇ? ಹೇಳಿದರೆ ಅವರಿಗೆ ಸಿಟ್ಟು ಬರುವುದಿಲ್ಲವೇ? ಆದ್ದರಿಂದ ಅದನ್ನು ಕಡತದಿಂದ ತೆಗೆಯಬೇಕು. ಕಾಲಹರಣ ಮಾಡಲು ಮಾತನಾಡುತ್ತಾರೆ ಎಂದು ಹೇಳಿದರು ಅದನು ತೆಗೆಯಬೇಕು. ಇಲ್ಲದಿದ್ದರೆ ನಾನು ನನ್ನ ಭಾಷಣವನ್ನು ಮುಂದುವರೆಸುವುದಿಲ್ಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ರಾಮಯ್ಯನವರು ಬಹಳ ಹಿರಿಯ ಸದಸ್ಯರು, ಬಹಳ ಅನುಭವಸ್ಥರು. ಈ ಎಲ್ಲ ವಿಷಯಗಳ ಬಗ್ಗೆ ನನಗೂ ಅವರ ಬಗ್ಗೆ ಅಪಾರವಾದಂಥ ಗೌರವವಿದೆ. ಆದರೆ ನಾನು ನಿನ್ನೆಯಿಂದ ಅವರ ಮಾತನ್ನು ಕೇಳುತ್ತಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ನಾನು ಮಾತುಗಳನ್ನು ಕೇಳಿರುವುದು ಐದು ವರ್ಷ, ಇದು ಆರನೇ ವರ್ಷ. ಈಗಾಗಲೇ ರಾಜ್ಯಪಾಲರ ಐದು ಭಾಷಣಗಳ ಬಗ್ಗೆ ವಂದಾನ ನಿರ್ಣಯದ ಮೇಲೆ ಯಾರ್ಯಾರು ಏನೇನು ಮಾತನಾಡಿದ್ದಾರೆ ಎನ್ನುವುದನ್ನೂ ಕೇಳಿದ್ದೇನೆ. ಆದರೆ ಈ ನಿಶ್ಚಿತವಾಗಿ ರಾಮಯ್ಯನವರ ಉದ್ದೇಶ ಇರುವುದು ಏನೆಂದರೆ ಈ ಸದನದ XXX ಎನ್ನುವುದೇ ಹೊರತು, ರಾಜ್ಯಪಾಲರ ಭಾಷಣದಲ್ಲಿ ಸತ್ವೇನಾದರೂ ಇದ್ದಿದ್ದರೆ, ಸರ್ಕಾರದ ನೀತಿ, ದಿಕ್ಕು, ದಿಸೆಗಳು ಸ್ಪಷ್ಟವಾಗಿದ್ದಿದ್ದರೆ ಅದನ್ನು ಇನ್ಯಾವುದೋ ವಿಷಯದ ಬಗ್ಗೆ ಮಾತನಾಡುತ್ತಾ. XXX ನೀವು ಅವರಿಗೆ ಐದು ಗಂಟೆಗೆ ಮುಗಿಸಿ ಎಂದು ಹೇಳಿದಿರಿ. ಈಗಾಗಲೇ ಐದೂವರೆ ಆಯಿತು, ಇನ್ನೂ ಮುಗಿಸಿಲ್ಲ.

ಉಪಾಧ್ಯಕ್ಷರು: ಕಾಲಹರಣ ಎನ್ನುವುದಾಗಲೀ ಉಡಾಫೆಯ ಮುಖ್ಯಮಂತ್ರಿ ಎನ್ನುವುದಾಗಲೀ, ಕೇಂದ್ರದ ಸಚಿವರ ವಿಷಯವಾಗಲೀ ಅಥವಾ ಲೋಕಸಭಾ ಸದಸ್ಯರ ವಿಚಾರವಾಗಲೀ, ಇವುಗಳನ್ನು ದಯವಿಟ್ಟು ಕಡತದಿಂದ ತೆಗೆದುಹಾಕಬೇಕು ಮತ್ತು ಪತ್ರಿಕೆಯವರೂ ದಯವಿಟ್ಟು ಇವುಗಳನ್ನು ಪ್ರಕಟಿಸಬಾರದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕರುಗಳಿಗೆ ಹಾಕುವ ಹಾಗೆ ನಮಗೆ ಒಂದು ಮಕರಂದವನ್ನು ಹಾಕಿಬಿಡಿ. 2-3 ತಿಂಗಳ ಕರುಗಳು ಮಣ್ಣು ತಿಂದರೆ ಅಥವಾ ಧೂಳು ತಿಂದರೆ ಭೇದಿಯಾಗುತ್ತದೆ ಎಂದು ಅವುಗಳಿಗೆ ಒಂದು ಬಿದಿರಿನ ಬುಟ್ಟಿ ಹಾಕಿ, ಸ್ವಲ್ಪ ಹುಲ್ಲು ಹಾಕಿ ಮಣ್ಣು ತಿನ್ನದ ಹಾಗೆ ಕಟ್ಟಿಬಿಡುತ್ತಾರೆ. ಹಾಗೆ ನಮಗೆ ಒಂದು ಮಕರಂದವನ್ನು ಹಾಕಿಬಿಟ್ಟು ಏನು ಮಾತನಾಡಬಾರದು ಎನ್ನವುದನ್ನು ಹೇಳಿಬಿಡಿ.

ಉಪಾಧ್ಯಕ್ಷರು: ಕೆಲವೊಂದು ವಿಚಾರದಲ್ಲಿ ನಾವು ಹಿಡಿತದಿಂದ ಇರಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ತಮ್ಮ ಸ್ಥಾನದ ಬಗ್ಗೆ ನಮಗೆ ಗೌರವವಿದೆ, ಆದರೆ ತಾವು ಮಾಡತಕ್ಕಂಥ ನಿರ್ಣಯಗಳು ಕಾನೂನಿನ ಪುಸ್ತಕಕ್ಕೆ ಬದ್ಧವಾಗಿರಬೇಕು ಎನ್ನುವುದನ್ನು ತಾವು ದಯವಿಟ್ಟು ಪರಾಂಬರಿಸಬೇಕಾಗುತ್ತದೆ. ಏಕೆಂದರೆ, ಇವ್ಯಾವುವೂ ಅನ್-ಪಾರ್ಲಿಮೆಂಟರಿ ವರ್ಡ್‌ಗಳಲ್ಲ. ನಾವು ಏಕೆ ಲೋಕಸಭಾ ಸದಸ್ಯರ ವಿಚಾರವನ್ನು ನಾವು ಮಾತನಾಡಬಾರದು? ನಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಲೋಕಸಭಾ ಸದಸ್ಯರ ಹೆಸರನ್ನು ತೆಗೆದುಕೊಂಡು ಹೇಳಿದ್ದೀವೇನು? ಅದರಲ್ಲಿ ತಪ್ಪೇನು ಬೇರೆ ರಾಜ್ಯಗಳಲ್ಲಿ ಲೋಕಸಭಾ ಸದಸ್ಯರುಗಳ ಬಗ್ಗೆ ಸಿಕ್ಕಾಪಟ್ಟೆ ಮಾತನಾಡಿದ್ದಾರೆ. ಈ ಸದನದಲ್ಲೇ ಅವರಿಗೆ ಕಾರು ಕೊಡಲಿಲ್ಲ. ಅವರು ಸರಿಯಾಗಿ ದುಡ್ಡು ಹಂಚುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಮ್ಮ ಲೋಕಸಭಾ ಸದಸ್ಯರು ನಾನು ಆಡಳಿತ ಪಕ್ಷದಲ್ಲಿದ್ದಾಗಲೂ, ವಿರೋಧ ಪಕ್ಷದಲ್ಲಿದ್ದಾಗಲೂ ಸರಿ,

---

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಕಳೆದ 18 ವರ್ಷಗಳಿಂದ ನಮಗೂ, ಅವರಿಗೂ ಯಾವುದೇ ವಿಧವಾದಂಥ ಕನ್‌ಫ್ರಾಂಟೇಷನ್ ಆಗಿಲ್ಲ. ಅವರು ಕಾಂಗ್ರೆಸ್ಸಿಗೆ ನಿಷ್ಠೆಯಿಂದಿದ್ದಾರೆ. ನಮಗೆ ಯಾವ ಲೋಕಸಭಾ ಸದಸ್ಯರೂ ಆ ರೀತಿ ತೊಂದರೆಯನ್ನು ಕೊಟ್ಟಿಲ್ಲ. ಆದರೆ ಬಜೆಟ್‌ನ ವಿಚಾರದಲ್ಲಿ ಅವರು ಯಾರೂ XXX ಎಂದು ಹೇಳಿರುವುದರಲ್ಲಿ ತಪ್ಪೇನು ಇದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ರೂಲಿಂಗ್ ಕೊಟ್ಟಾಯಿತು ಕೊಟ್ಟ ಮೇಲೂ ಮಾತನಾಡುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ತಮ್ಮ ನಿರ್ಣಯವನ್ನು ಪುನರ್‌ವಿಮರ್ಶೆ ಮಾಡಬೇಕು. ಅವು ಅನ್‌ಪಾರ್ಲಿಮೆಂಟರಿ ಪದಗಳಲ್ಲ. ಕೇಂದ್ರದ ಮಂತ್ರಿಗಳ ಹೆಸರನ್ನು ಹೇಳಬಾರದು ಎಂದು ಹೇಳಿದಿರಿ. ಸೌಜನ್ಯತೆಯ ದೃಷ್ಟಿಯಿಂದ ಅದನ್ನು ಒಪ್ಪಿಕೊಳ್ಳೋಣ. ಬಾಕಿಯದನ್ನು ಏಕೆ ಎಕ್ಸ್‌ಪಂಜ್ ಮಾಡುತ್ತೀರಿ? ದಯವಿಟ್ಟು ಪುನರ್‌ವಿಮರ್ಶೆ ಮಾಡಿ.

ಉಪಾಧ್ಯಕ್ಷರು : ಎಂದು ಹೇಳಿದಿರಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ: ರೈಲ್ವೆ ಬಜೆಟ್ ಬಗ್ಗೆ ಅವರ್ಯಾರೂ ಮಾತನಾಡಲಿಲ್ಲ ಎಂದು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಕಾಂಟೆಕ್ಸ್ಟ್ ಅನ್ನು ರೆಫರ್ ಮಾಡಿದ್ದಕ್ಕಾಗಿ it is not in good taste ಎನ್ನುವ ದೃಷ್ಟಿಯಿಂದಲೇ ಹೊರತು ಬಾಕಿಯದೇನೂ ತಕರಾರಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಕೇಂದ್ರದ ರೈಲ್ವೆ ಬಜೆಟ್‌ನ ವಿಚಾರದಲ್ಲಿ, XXX ನಮ್ಮ ರಾಜ್ಯದ ಪರವಾಗಿ ಸರಿಯಾಗಿ ಪ್ರತಿಪಾದನೆಯನ್ನು ಮಾಡಿಲ್ಲ. ಇದು ಮೊದಲನೆಯದು. ರೈಲ್ವೆ ಬಜೆಟ್‌ನಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಅನ್ಯಾಯವಾಗಿದೆ. ಇದು ಎರಡನೆಯದು. ಕೇಂದ್ರದ ಮಂತ್ರಿಗಳು ಬೆಳಗಾವಿಯ ವಿಚಾರದಲ್ಲಿ ಮಾತನಾಡಿರತಕ್ಕಂಥಾದ್ದು ಖಂಡನೀಯ. ಮುಖ್ಯಮಂತ್ರಿಗಳು ರೈಲ್ವೆ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತ ಮಾಡಿಲ್ಲ. ಇದು ನನ್ನ ಅಭಿಪ್ರಾಯ. ಆಗಬಹುದಲ್ಲವೇ?

ಶ್ರೀ ಎಸ್. ಎಸ್. ಪಾಟೀಲ್: XXX ಮಾತನಾಡಬಾರದು ಎಂದು ಹೇಳಿದರೆ ಹೇಗೆ? ನಮ್ಮ ಬಜೆಟ್‌ನಲ್ಲಿ ಅವರಿಗಾಗಿ ನಮ್ಮ ರಾಜ್ಯದ ಕೋಟಿಗಟ್ಟಲೆ ದುಡ್ಡನ್ನು ಖರ್ಚು ಮಾಡುತ್ತೇವೆ. ರಾಜ್ಯದ ಅಭಿವೃದ್ಧಿಗಾಗಿ ಅವರಿಗೆ ಎಲ್ಲ ಸವಲತ್ತುಗಳನ್ನು ಒದಗಿಸಿದ್ದೇವೆ. ಹೀಗಿರುವಾಗ ಅವರ ಬಗ್ಗೆ ಇಲ್ಲಿ ಮಾತನಾಡಬಾರದು ಎಂದು ಹೇಳಿದರೆ ಹೇಗೆ? ಅವರು ಕೆಲಸ ಮಾಡಿಲ್ಲ ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ ಆ ವಿಷಯ ಬಂದಿಲ್ಲ, ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಾವು ಅವರಿಗೆ ಹಣ ಖರ್ಚು ಮಾಡುತ್ತಿದ್ದರೂ ಅವರ ಬಗ್ಗೆ ಮಾತನಾಡಲು ನಮಗೆ ಹಕ್ಕಿಲ್ಲ ಎಂದರೆ ಹೇಗೆ? ನಾವು ಅವರ ಬಗ್ಗೆ ಚರ್ಚೆ ಮಾಡಲು ಅವಕಾಶ ಬೇಕು. ಇಲ್ಲದಿದ್ದರೆ ಅವರಿಗೆ ನಾವು ಖರ್ಚು ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ತಾವು ಕೆಲವು ವಿಷಯಗಳನ್ನು ಕಡತದಿಂದ ತೆಗೆಯಬೇಕು ಎಂದು ಹೇಳಿದಿರಿ. ನಾನು ಈ ಹಿಂದೆ ನಡೆದಂಥ ಕಡತದಲ್ಲಿರುವ ಒಂದೇ ಒಂದು ಶಬ್ದವನ್ನು ಓದುತ್ತೇನೆ. ಅದಕ್ಕಿಂತ ಕಟ್ಟದ್ದನೇನಾದರೂ

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಮಾನ್ಯ ಸಿಂಧ್ಯಾರವರು ಉಪಯೋಗಿಸಿದ್ದರೆ ಅದನ್ನು ಕಡತದಿಂದ ತೆಗೆಯಿರಿ. 6-4-1985 ರಂದು ಈ ಸದನದಲ್ಲಿರುವಂಥ ಹಿರಿಯ ಸಚಿವರೊಬ್ಬರು ಮಾತನಾಡಿದಂಥ ಒಂದು ಶಬ್ಧವನ್ನು ಹೇಳುತ್ತೇನೆ. ''ನಾವು ಕೇಳಬೇಕಾದಂಥ ಸಮಯ ಬಂದಾಗ ನಿಮ್ಮ ತಾತ ಬಂದರೂ ಬಿಡುವುದಿಲ್ಲ'' ಎಂದು ಹೇಳಿದ್ದಾರೆ. ಇದು ಕಡತದಲ್ಲಿದೆ. ಅದಕ್ಕಿಂತ ಕೆಟ್ಟದ್ದೇನನ್ನೂ ಮಾನ್ಯ ಸಿಂಧ್ಯಾರವರು ಹೇಳಲಿಲ್ಲ. ಅದನ್ನು ತಾವು ನೋಡಬೇಕು. ಅದಕ್ಕಿಂತ ಕೆಟ್ಟದ್ದೇನಾದರೂ ಇದ್ದರೆ ತೆಗೆಯಬೇಕು. ಉಡಾಫೆ ಎನ್ನುವುದು ಅದಕ್ಕಿಂತ ಕೆಟ್ಟದ್ದೇನೂ ಅಲ್ಲ.

ಯು. ಆರ್. ಸಭಾಪತಿ : ತಾತ ಎನ್ನುವು ಕೆಟ್ಟ ಶಬ್ಧವೇನೂ ಅಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಹಿಂದೆ ಈ ಸದನದಲ್ಲಿ ಒಬ್ಬ ಮುಖ್ಯಮಂತ್ರಿಗಳಿಗೆ 'ಸುಳ್ಳಿನ ಸರದಾರ ಎಂದು ಅವರ ಪಕ್ಷದವರೇ ಹೇಳಿದ್ದರು. ಅದಕ್ಕಿಂತಲೂ ಇದು ಕೆಟ್ಟದ್ದೇ?.

5.40 ಪಿ.ಎಂ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಎಂ.ಪಿ.ಗಳು ಏನು ಕೆಲಸ ಮಾಡಬೇಕು, ಏನು ಕೆಲಸ ಮಾಡಬಾರದು ಎನ್ನುವುದನ್ನು ಕೇಳಲಿಕ್ಕೆ, ಹೇಳಲಿಕ್ಕೆ ನನಗೆ ಅಧಿಕಾರ ಇಲ್ಲ. ಕರ್ನಾಟಕದಲ್ಲಿ ಎಲ್ಲಾ ಪಕ್ಷದ ಎಂ.ಪಿ.ಗಳೂ ಇದ್ದಾರೆ. ಅವರ ಕಾರ್ಯನಿರ್ವಹಣೆ ಬಗ್ಗೆ ಇಲ್ಲಿ ಚರ್ಚೆ ಆಗಬೇಕೇ ಅಥವ ಬೇಡವೇ ಎನ್ನುವುದರ ಬಗ್ಗೆ ನಾನು ತಲೆ ಕಡೆಸಿಕೊಳ್ಳುವುದಿಲ್ಲ. ಅದು ತಮಗೆ ಬಿಟ್ಟಿದ್ದು. ಅವರು ಏನು ಕೆಲಸ ಮಾಡಬೇಕು. ಏನು ಕೆಲಸ ಮಾಡಬಾರದೆಂದು ಕೇಳುವಂಥ ಅಧಿಕಾರ ಅವರಿಗೆ ಇದೆ. ಅವರು ಕೇಳಿಕೊಳ್ಳಲಿ. ಅದರ ಬಗ್ಗೆಯೂ ನನ್ನ ಆಕ್ಷೇಪಣೆ ಇಲ್ಲ. ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಕುರಿತು ಮಾಡುತ್ತಾ ಇರುವಂಥ ಭಾಷಣವನ್ನು XXX ಎನ್ನುವಂಥ ಪದವನ್ನು ಉಪಯೋಗಿಸಿದ್ದಾರೆ. ಅದು ಯಾವ ಸದಸ್ಯರೆಂದು ನನಗೆ ಗೊತ್ತಿಲ್ಲ. ಆ ಪದವನ್ನು ತೆಗೆಯುವವರೆಗೆ ಈ ಭಾಷಣವನ್ನು ನಾನು ಮುಂದುವರಿಸುವುದಿಲ್ಲ. ನೀವು ಏನು ಬೇಕಾದರೂ ಮಾಡಿಕೊಳ್ಳಿ.

ಉಪಾಧ್ಯಕ್ಷರು : ಶ್ರೀ ರಾಮಯ್ಯನವರೆ, ' ಕಾಲಹರಣ' ಎನ್ನುವಂಥ ಪದವನ್ನು ತೆಗೆಯಬೇಕೆಂದು ಈಗಾಗಲೇ ನಾನು ಹೇಳಿ ಆಗಿದೆ. ಆದ್ದರಿಂದ ತಾವು ಮುಂದುವರಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, XXX ಇದು ಅನ್ ಪಾರ್ಲಿಮೆಂಟರಿ ಪದ ಹೌದೇ ಅಥವಾ ಅಲ್ಲವೇ ಎನ್ನುವ ಬಗ್ಗೆ ನನಗೆ ನಿಮ್ಮಿಂದ ಸ್ಪಷ್ಟನೆ ಬೇಕು. ಆ ಪದವನ್ನು ಕಡತದಿಂದ ಏಕೆ ತೆಗೆಯುತ್ತಿದ್ದೀರಿ?

(ಗೊಂದಲ)

ಶ್ರೀ ಕೆ. ಷಡಕ್ಷರಿ : ಅರ್ಥ ಇಲ್ಲದೆ ಮಾತನಾಡಬಾರದು. ಇಲ್ಲಿ ನಿಮ್ಮ ಕಡೆಯಿಂದ ಬರೀ ಕೆಲಸಕ್ಕೆ ಬಾರದ್ದನ್ನು ಮಾತನಾಡುತ್ತೀರಿ. ಈಗ ಮಾಡುತ್ತಾರೆಂದು ಹೇಳುತ್ತೀರಿ.

(ಗೊಂದಲ)

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೆ ಹೇಳಿದ XXX ಮಾತನಾಡುವುದಕ್ಕೆ ನನಗೆ ಶಕ್ತಿ ಇಲ್ಲ, ಅದರ ಅವಶ್ಯಕತೆಯೂ ಇಲ್ಲ. ಈ ರಾಜ್ಯದ ಜನಗಳ ಸಮಸ್ಯೆ ವಿಷಯದಲ್ಲಿ ನಮ್ಮ ಅಭಿಪ್ರಾಯ ಏನಿದೆ ಎನ್ನುವುದನ್ನು ಈ ಸದನದಲ್ಲಿ ವ್ಯಕ್ತಮಾಡಬೇಕೆಂಬುದಷ್ಟೇ ನನ್ನ ಸದುದ್ದೇಶವಾಗಿದೆ. ಏಕೆಂದರೆ ಬುದ್ಧಿ ಎನ್ನುವುದು ಒಂದು ಆಯುಧ. ಈ ಆಯುಧವನ್ನು ಯಾವಾಗಲೂ ಮಸೆಯುತ್ತಾ ಇರಬೇಕೆಂದು ಚಿಂತಕರು ಹೇಳಿದ್ದಾರೆ. ಆದೆ ನನ್ನ ಅನಿಸಿಕೆಪ್ರಕಾರ ಉಪಯೋಗಕ್ಕೆ ಬರದೇ ಇರುವಂಥ ಆಯುಧವನ್ನು ಮಸೆದು ಏನು ಪ್ರಯೋಜನ ಸ್ವಾಮಿ? ಪ್ರತೀ ದಿವಸ ಈ ಆಯುಧ ಎನ್ನುವಂಥ ಬುದ್ಧಿಯನ್ನು ಓದಿ ಓದಿ ಮಸೆಯುತ್ತಾ ಇರುತ್ತೇನೆ. ಆ ಮಸೆದ ಆಯುಧವನ್ನು ಉಪಯೋಗಿಸಬೇಕಲ್ಲವೇ?

ಶ್ರೀ ಎಸ್.ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಶ್ರೀ ವಿಶ್ವೇಶ್ವರ ಹೆಗಡೆಯವರು ಹೇಳಿರತಕ್ಕಂಥ ಮಾತಿಗೆ ಸ್ಪಷ್ಟನೆ ಕೊಡುವುದಾದರೆ, ಹಿರಿಯರಾಗಿರತಕ್ಕಂಥ ಸನ್ಮಾನ್ಯ ವೈ.ಕೆ. ರಾಮಯ್ಯನವರು ಬಹಳಷ್ಟು ವಿಚಾರಗಳನ್ನು ಮಾತನಾಡಿದರು. ಅದನ್ನು ನಾವು ಗಮನವಿಟ್ಟು ಕೇಳಬೇಕಾಗುತ್ತದೆ. ಏಕೆಂದರೆ ಇಲ್ಲಿ ಬಂದಿರತಕ್ಕಂಥ ನಾವುಗಳು ಬಹಳ ಯುವಕರು ಆಗಿರತಕ್ಕಂಥ ಸಂದರ್ಭದಲ್ಲಿ ಅವರು, ಅವರಂಥ ಹಿರಿಯರು ಮಾಡತಕ್ಕಂಥ, ಆಡತಕ್ಕಂಥ ಮಾತುಗಳು ನಮಗೆ ಮಾರ್ಗದರ್ಶಕವಾಗಿ ಇರುತ್ತವೆಯೇ ಹೊರತು ಯಾವುದೇ ಕಾರಣಕ್ಕೂ ಅದು ಕಾಲಹರಣವಾಲ್ಲ. ಹಾಗಾಗಿ ಮಾನ್ಯ ಉಪಾಧ್ಯಕ್ಷರ ಅನುಮತಿ ಮೇರೆಗೆ ಈ ಮಾತುಗಳು ಇನ್ನೂ ಸ್ವಲ್ಪ ಹೊತ್ತು ಅವರಿಂದ ಬರಬೇಕು. ಆದ್ದರಿಂದ ನಾನು ಇನ್ನೊಮ್ಮೆ ಸ್ಪಷ್ಟಪಡಿಸುವುದೇನೆಂದರೆ- ಯಾವುದೇ ಕಾರಣದಲ್ಲೂ ಕೂಡ ಅವರು ಆಡತಕ್ಕಂಥ ಮಾತು ಸಂಪೂರ್ಣವಾಗಿ ನಮ್ಮ ಯುವ ಜನತೆಗೆ, ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಯುವಜನತೆಗೆ ಕೂಡ ಅದು ಮಾರ್ಗದರ್ಶಕವಾಗಿದೆ, ಯಾವುದೇ ರೀತಿಯಲ್ಲಿ ಕೂಡ ಅದು ಕಾಲಹರಣ ಆಗುತ್ತಿಲ್ಲ. ಏಕೆಂದರೆ ಅವರ ಅನುಭವದ ಮೇಲಿರತಕ್ಕಂಥ ಹತ್ತಾರು ವಿಚಾರಗಳನ್ನು, ಏಕೆಂದರೆ ನಮಗಂತೂ ಅಂಥ ಅನುಭವ ಸಿಗುವುದಿಲ್ಲ. ಆದರೆ ಅವರು ಪಟ್ಟಿರತಕ್ಕಂಥ ಅನುಭವವನ್ನು ನಮಗೆ ಏನು ಕೊಟ್ಟಿದ್ದಾರೆ ಅದಕ್ಕೆ ಸಂಪೂರ್ಣವಾಗಿ, ಹೃದಯಪೂರ್ವಕವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಇನ್ನೂ ಕೂಡ ಹೆಚ್ಚು ಮಾರ್ಗದರ್ಶನಗಳನ್ನು ಮಾಡಬೇಕು ಹಾಗೆಯೇ ಎಲ್ಲಾ ಹಿರಿಯ ಸದಸ್ಯರು ಕೂಡ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಇದಕ್ಕಾಗಿ ನಾನು ಸ್ನೇಹಿತನನ್ನು ಮೆಚ್ಚಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ಬುದ್ಧಿ ಎನ್ನುವುದು ಒಂದು ಆಯುಧ ಇದ್ದ ಹಾಗೆ ಅದನ್ನು ಮಸೆಯುತ್ತಾ ಇರಬೇಕೆಂದು ಚಿಂತಕರು ಹೇಳಿದ್ದಾರೆ. ಆ ಮಸೆದು ಆಯುಧ ಹರಿತವಾಗುವ ಅದರ ಉಪಯೋಗ ಮಾಡಬೇಕೆನ್ನುವುದಷ್ಟೇ ನಮ್ಮ ಆಸೆ. ಆ ಉಪಯೋಗವಿಲ್ಲದೆ ಇರುವಂಥ ಆಯುಧವನ್ನು ಮಸೆಯುವುದಕ್ಕೆ ಏಕೆ ಹೋಗಲಿ? ಓದುವುದನ್ನು ಬಿಟ್ಟು ಬಿಡಬೇಕಾಗುತ್ತದೆ. ಇದನ್ನು ಬಿಟ್ಟರೆ ನಮ್ಮ ತಲೆ ಜಡ್ಡು ಹಿಡಿದು ಹೋಗುತ್ತದೆ. ಅದಕ್ಕಾಗಿ ನನ್ನ ತಲೆಯಲ್ಲಿ ಅನೇಕ ವಿಷಯಗಳು ತುಂಬಿಕೊಂಡಿವೆ. ಆದರೆ ಮನಸ್ಸಿನಲ್ಲಿ ಇರುವುದನ್ನು ಹೊರಹಾಕಬೇಕು. ಹೇಳಬೇಕು. ನಮ್ಮ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕು.

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

ನಮ್ಮ ತಲೆಯಲ್ಲಿರುವ ಹುಚ್ಚನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾನು ಹೇಳುತ್ತೇನೆ. ಮಾಡಲಿಕ್ಕಾಗಿ ಇಲ್ಲಿ ಮಾತನಾಡುತ್ತಾರೆ ಎನ್ನುವಂಥ ಮಾತು ನನಗೆ ಅತ್ಯಂತ ವೇದನೆಯನ್ನು ತರಿಸಿತು ಅದಕ್ಕಾಗಿ ಹೇಳಿದೆನೇ ಹೊರತು ಅವರ ಮೇಲೆ ಬೇರೆ ದೃಷ್ಟಿಯಿಂದಲ್ಲ. ಅದನ್ನು ಕಡತದಿಂದ ತೆಗೆದುಹಾಕಿಸಿದಿರಿ. ಅದಕ್ಕಾಗಿ ತಮಗೆ ವಂದನೆಗಳು. ನನಗೆ ಅತೀ ಪ್ರಿಯವಾದ ವಿಷಯ ನೀರಾವರಿ. ಈ ನೀರಾವರಿ ವಿಷಯದ ಕುರಿತು ಮಾತನಾಡುವುದಕ್ಕೆ ನನಗೆ 15 ನಿಮಿಷ ಕಾಲಾವಕಾಶ ಬೇಕಾಗುತ್ತದೆ. ಈಗಲೇ ಅವಕಾಶವನ್ನು ಕೊಟ್ಟರೆ ಮಾತನಾಡುತ್ತೇನೆ. ಇಲ್ಲದಿದ್ದರೆ ನಾಳೆ ನಾನು ಮುಂದುವರೆಸುತ್ತೇನೆ. ಇದು ತಮಗೆ ಬಿಟ್ಟಿದ್ದು.

ಉಪಾಧ್ಯಕ್ಷರು : ತಾವು ಮಾತನಾಡಿ ಈಗಲೇ ಮುಗಿಸಿಬಿಟ್ಟರೆ ಒಳ್ಳೆಯದು.

ಶ್ರೀ ವೈ.ಕೆ. ರಾಮಯ್ಯ : ಆಗಬಹುದು. ಕರ್ನಾಟಕದ ನೀರಾವರಿ ವಿಷಯದಲ್ಲಿ ಅನ್ಯಾಯದ ಪರಂಪರೆ ಏನು ನಡೆದು ಬಂದಿದೆ ಎನ್ನುವುದು ನನ್ನ ಅನೇಕ ವರ್ಷಗಳ ಸ್ಪಷ್ಟವಾದಂಥ ಖಚಿತವಾದಂಥ ಅಭಿಪ್ರಾಯಗಳಲ್ಲಿ ವ್ಯಕ್ತಪಡಿಸುತ್ತೇನೆ. ಏಕೆಂದರೆ, ಸ್ವಾತಂತ್ರ್ಯನಂತರ ಕರ್ನಾಟಕ ರಾಜ್ಯದಲ್ಲಿ ಆಡಳಿತಕ್ಕೆ ಬಂದಂಥ ಯಾವ ಸರ್ಕಾರವೂ ಕೂಡ ಆಯವ್ಯಯದಲ್ಲಿ ನಿಗದಿಪಡಿಸಿದಷ್ಟು ಹಣವನ್ನು ಖರ್ಚು ಮಾಡಿಲ್ಲ ಎನ್ನುವಂಥದ್ದು ನನ್ನ ಸ್ಪಷ್ಟವಾದಂಥ, ಖಚಿತವಾದಂಥ ಅಭಿಪ್ರಾಯವನ್ನು ವ್ಯಕ್ತಮಾಡಿ, ನಾನು ದಿವಂಗತ ಜೆ.ಹೆಚ್.ಪಟೇಲರಿಗೆ- '' ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕ ರಾಜ್ಯದ ನೀರಾವರಿಯಲ್ಲಿ ಅನ್ಯಾಯದ ಪರಂಪರೆ ನಡೆದುಕೊಂಡು ಬಂದಿದೆ, ಯಾವ ಸರ್ಕಾರವೂ ಆಯವ್ಯಯದಲ್ಲಿ ನಿಗದಿ ಮಾಡಿದ ಹಣವನ್ನು ಖರ್ಚು ಮಾಡಿಲ್ಲ. ನೀವು ಕೂಡ ಆ ಅನ್ಯಾಯವನ್ನು ಮಾಡಬೇಡಿ'' ಎಂದು ಒಂದು ಕಾಗದವನ್ನು ಬರೆದೆ. ನಾನು ಇವತ್ತು ಅವರನ್ನು ಸ್ಮರಿಸಿಕೊಳ್ಳುತ್ತೇನೆ. ಇದು ಸತ್ಯ ಎನ್ನುವಂಥ ಮಾತನ್ನು ಅವರು ಒಪ್ಪಿಕೊಂಡಿದ್ದಾರೆ. ಆ ಪತ್ರ ನನ ಹತ್ತಿರ ಇದೆ. ಈ ಮಾತನ್ನು ನಾನು ಏಕೆ ಹೇಳಿದೆನೆಂದರೆ, ಸತ್ಯವನ್ನು ಒಪ್ಪಿಕೊಳ್ಳಲಿಕ್ಕೆ, ಸತ್ಯವನ್ನು ಮಾತನಾಡಲಿಕ್ಕೆ, ಆದರ್ಶಗಳನ್ನು ಕಾರ್ಯರೂಪಕ್ಕೆ ತರಲಿಕ್ಕೆ ಜೀವನದಲ್ಲಿ ಬೆಲೆಯನ್ನು ತೆರಬೇಕಾಗುತ್ತದೆ. ದಿವಂಗತ ಜೆ.ಹೆಚ್.ಪಟೇಲರು ಈ ಸತ್ಯವನ್ನು ಮೆರೆದಿದ್ದಾರೆ ಅದಕ್ಕಾಗಿ ಅವರನ್ನು ನಾನು ಮೆಚ್ಚಿಕೊಳ್ಳುತ್ತೇನೆ. ನೀರಾವರಿ ವಿಷಯದಲ್ಲಿ ಈ ರಾಜ್ಯಕ್ಕೆ ಅನ್ಯಾಯವಾಗಿದೆ. ನಾನು ಆಗಲೇ ಹೇಳಿದ ಹಾಗೆ ಕೃಷ್ಣಾ ಮತ್ತು ಕಾವೇರಿ ನದಿಗಳು ಈ ನಾಡಿನ ಎರಡು ಕಣ್ಣುಗಳು. ಈ ಎರಡು ಕಣ್ಣುಗಳಲ್ಲಿಯೂ ಆನಂದಭಾಷ್ಪ ಸುರಿದು, ಭೂಮಿ ತೊಯ್ದು ಬೆಳೆ ಬಂದು ಸಮೃದ್ಧಿಯನ್ನು ಕಾಣಬೇಕಾಗಿತ್ತು. ಆದರೆ ದುರಾದೃಷ್ಟವಶಾತ್ ಈ ತಾಯಿಯ ಎರಡು ಕಣ್ಣುಗಳಲ್ಲಿಯೂ ಕಣ್ಣೀರು ಸುರಿಯುದನ್ನೇ ನೋಡುತ್ತಿದ್ದೇವೆ. ಎರಡು ಸಾವಿರ ಇಸವಿಯೊಳಗಾಗಿ ಕೃಷ್ಣಾ ನದಿಯ ಕೊಳದ ಎಲ್ಲಾ ನೀರನ್ನು ಉಪಯೋಗಿಸಿಕೊಳ್ಳುವಂಥ ಒಂದು ನಿಬಂಧನೆ ಈ ರಾಜ್ಯ ಸರ್ಕಾರಕ್ಕೆ ಕಟ್ಟಿಹಾಕಿ ಕಟ್ಟಿರುವಂಥ ಒಂದು ನಿಬಂಧನೆಯಾಗಿದೆ. ಎರಡು ಸಾವಿರದ ಒಂದನೇ ಇಸವಿಯೊಳಗಾಗಿ ಈ ನೀರನ್ನು ಉಪಯೋಗಿಸಿಕೊಳ್ಳದೇ ಇದ್ದರೆ the right of Karnataka will be extinguished, that is how said the ex Chief Minister, ಆದ್ದರಿಂದ ಕರ್ನಾಟಕ ಸರ್ಕಾರ ತನ್ನ ಪಾಲಿನ ನೀರನ್ನು ಎರಡು ಸಾವಿರದ ಒಂದನೆ ಇಸವಿಯೊಳಗಾಗಿ ಉಪಯೋಗಿಸಿಕೊಳ್ಳಲೇ ಬೇಕು ಎನ್ನುವಂಥ ಒಂದು ನಿಬಂಧನೆ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. we will not extinguish that right. That right will not be be extinguished. ಎರಡು ಸಾವಿರಯೊಳಗೆ ನಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳದೆ ಇದ್ದರೆ ನಮ್ಮ ಹಕ್ಕು ಹೋಗಿಬಿಡುತ್ತದೆ. ಎನ್ನುವಂಥ ಮಾತು ಈ ಸದನದಲ್ಲಿ ಹೋಗುವುದು ಬೇಡ. ಹೋಗುವುದಿಲ್ಲ ಎನ್ನುವಂಥದ್ದೇ ನಮ್ಮ ವಾದ. ಈಗಲೂ ಅದೇ ವಾದ ಮಾಡುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ, ಏನೇನೋ ಹೇಳುವುದಕ್ಕೆ ಹೋಗಿ ಪುನಃ ಅದು ನಮಗೆ ತಿರುಗುಬಾಣ ಆಗಿಬಿಡಬಹುದು. ದಯವಿಟ್ಟು ಅದನ್ನು ಬಹಳಷ್ಟು ಒತ್ತುಕೊಟ್ಟು ಮಾತನಾಡುವುದು ಬೇಡ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಪೂರ್ತಿ ಹೇಳುವುದನ್ನು ಅವರು ಕೇಳಿದ್ದರೆ ಈ ತಪ್ಪು ಕಲ್ಪನೆ ಅವರಿಗೆ ಬರುತ್ತಿರಲಿಲ್ಲ. ಅವರು ಏನು ಹೇಳಿದರು ಎನ್ನುವುದನ್ನು ಹೇಳಿಯೇ ಅದು ಸರಿಯಿಲ್ಲ ಎಂದು ನಾನು ಹೇಳುವುದಕ್ಕೆ ಹೊರಟಿದ್ದೆ. ಅವತ್ತು ಅವರು ಹೇಳಿದ್ದು ಆವತ್ತು ಅವರು ಹೇಳಿದ್ದು ಪ್ರೊಸೀಡಿಂಗ್ಸ್‌ನಲ್ಲಿದೆ. ನಮ್ಮ ಹಕ್ಕು ಹೊರಟುಹೋಗುತ್ತದೆಂದು ಅವರ ವಾದ. ನಮ್ಮ ಹಕ್ಕು ಹೋಗುವುದಿಲ್ಲ. 'ಬಿ' ಷೆಡ್ಯೂಲ್‌ನಲ್ಲಿ ನೀರನ್ನು ಹಾಯಿಸುವಂಥ ಸಂದರ್ಭದಲ್ಲಿ ನಮಗೆ ಈ ನೀರನ್ನೂ ಪಡೆದುಕೊಳ್ಳುವಂಥ ಹಕ್ಕು ಉಳಿದುಕೊಳ್ಳುತ್ತದೆ. ಅದು ನನಗೇ ಗೊತ್ತಿರುವುದು. ಆದರೆ ಅವರು ಆ ಮಾತನ್ನು ಹೇಳಿದರು. ಈ ಒಂದು ದಿಶೆಯಲ್ಲಿ ಕೃಷ್ಣಾ ಕೊಳ್ಳದ ನೀರನ್ನು ಎರಡು ಸಾವಿರ ಇಸವಿಯೊಳಗಾಗಿ ಉಳಿಸಿಕೊಳ್ಳಬೇಕಾಗಿತ್ತು. ಆಂಧ್ರ ಸರ್ಕಾರ ಹತ್ತಾರು ವಿಷಯಗಳಲ್ಲಿ ಈ ಒಂದು ಒಪ್ಪಂದವನ್ನು ಮುರಿದಿದ್ದಾರೆ. ಜುರಾಲ ಅಣೆಕಟ್ಟನ್ನು ಕರ್ನಾಟಕ ರಾಜ್ಯದ ಭೂಮಿ ಮೇಲೆ ಕಟ್ಟಿದ್ದಾರೆ. ಜುರಾಲ ಅಣೆಕಟ್ಟನ್ನು ಕಟ್ಟುವ ಸಂದರ್ಭದಲ್ಲಿ ನೂರಾರು ಹಳ್ಳಿಗಳು, ಸಾವಿರಾರು ಎಕರೆ ಜಮೀನು ಮುಳುಗಿ ಹೋಗಿದೆ. ಇವತ್ತಿನವರೆಗೆ ಆಂಧ್ರ ಸರ್ಕಾರದವರು ಅವರಿಗೆ ಪರಿಹಾರ ಕೊಟ್ಟಿಲ್ಲ ಇದು ಬಹುಶಃ ರಾಯಚೂರು ಕ್ಷೇತ್ರಕ್ಕೆ ಬರುತ್ತದೆ. ಕೇವಲ ಎಷ್ಟು ನೀರನ್ನು ಶೇಖರಿಸಿಕೊಳ್ಳಬೇಕು ಎನ್ನುವ ಅಷ್ಟೇ ಮಾತು ಇರುತ್ತದೆಯೇ ಹೊರತು ಎಷ್ಟು ಎತ್ತರ ಅಣೆಕಟ್ಟು ಕಟ್ಟಬೇಕೆಂದು ನಮ್ಮ ಮುಂದೆ ಇಲ್ಲ. ನಾನು ಒಬ್ಬ ವಕೀಲನಾಗಿ ಈ ವ್ಯತ್ಯಾಸವನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯಕ್ಕೆ ಎಷ್ಟು ಎತ್ತರ ಅಣೆಕಟ್ಟು ಕಟ್ಟಬೇಕೆಂದು ನಮ್ಮ ಮುಂದೆ ಇಲ್ಲ. ನಾನು ಒಬ್ಬ ವಕೀಲನಾಗಿ ಈ ವ್ಯತ್ಯಾಸವನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯಕ್ಕೆ ಎಷ್ಟು ಟಿ.ಎಂ.ಸಿ. ನೀರನ್ನು ಶೇಖರಿಸಿಕೊಳ್ಳಲಿಕ್ಕೆ ಅಧಿಕಾರ ಇದೆ, ಹಕ್ಕು ಇದೆ, ನ್ಯಾಯಯುತವಾದಂಥ ಷೇರ್ ಏನು ಇದೆ ಅಷ್ಟು ಮುಖ್ಯವೇ ಹೊರತು ಎಷ್ಟು ಅಡಿ ಎತ್ತರಿಸಬೇಕು ಎನ್ನುವುದು ಇಲ್ಲ. ಆ ವಿಷಯದಲ್ಲಿ ಆಂಧ್ರದವರು ತಕರಾರು ತೆಗೆದರು. ತಮಿಳುನಾಡಿಗೆ ಕುಡಿಯುವ ನೀರಿಗಾಗಿ 5 ಟಿ.ಎಂ.ಸಿ. ನೀರನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಒಂದು ಕಾಲುವೆಯನ್ನು ಮಾಡುವಂಥ ಕಾರ್ಯವನ್ನು ಕೈಗೆತ್ತಿಕೊಂಡು 15 ಟಿ.ಎಂ.ಸಿ. ನೀರನ್ನು ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ಮಾಡಿದರು.

ಈ ಸಂದರ್ಭದಲ್ಲಿ ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಕೃಷ್ಣ ಮತ್ತು ಕಾವೇರಿ ನದಿಯ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಪಾಲಿನ ನದಿಯ ನೀರಿನ ಹಕ್ಕಿಗಾಗಿ

ನಡೆದಂಥ ಹೋರಾಟ ನಿಜವಾಗಿಯೂ ಕೂಡ ರೋಮಾಂಚಕ, ಅದ್ಭುತ ಮತ್ತು ಚರಿತ್ರಾರ್ಹವಾದ ಹೋರಾಟವಾಗಿದೆ. 1889 ನೇ ಇಸವಿ ಅಕ್ಟೋಬರ್ 13 ನೇ ತಾರೀಖು ಮೈಸೂರಿನಲ್ಲಿ ನಡೆದಂಥ ಜನಪ್ರತಿನಿಧಿ ಸಭೆಯಲ್ಲಿ 17 ನೇ ವಿಷಯಕ್ಕೆ ಸಂಬಂಧ ಪಟ್ಟಂತೆ, ಕಾವೇರಿ ನೀರಿನ ಹಂಚಿಕೆಯ ವಿಷಯ ಚರ್ಚೆಯಾಗಿದೆ. ಆ ದಿನ ಮೈಸುರಿನ ಪರವಾಗಿ ಮಾತನಾಡಿದಂಥವರು ಈ ಮಣ್ಣಿನಲ್ಲಿ ಹುಟ್ಟಿದವರಲ್ಲ ಮತ್ತು ಇಲ್ಲಿನ ಯಾವ ಜಾತಿಗೂ ಸಹ ಸೇರಿದವರಲ್ಲ. ಬ್ರಿಟಿಷ್ ಪ್ರತಿನಿಧಿಯೊಬ್ಬರು ಮೈಸೂರಿನ ಮಹಾರಾಜರ ಮುಂದೆ ವಾದ ಮಾಡುತ್ತಾ, ಯಾವ ಭೂಮಿಯ ಮೇಲೆ ಮಳೆ ಬೀಳುಯತ್ತದೆಯೋ ಆ ಭೂಮಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದನ್ನು ತಮಿಳುನಾಡು ರಾಜ್ಯಕ್ಕೆ ತೆಗೆದುಕೊಂಡು ಹೋಗಿ ಕೊಡಬೇಕೆನ್ನತಕ್ಕಂಥ ವಾದವನ್ನು ಯಾವ ದಡ್ಡ ಕೂಡ ಒಪ್ಪುವುದಿಲ್ಲ ಎಂದು ವಾದಿಸಿದರು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಮದರೆ, 1924 ರಲ್ಲಿ ಅಗ್ರಿಮೆಂಟ್ ಆದಮೇಲೆ ಸರ್.ಎಂ.ವಿಶ್ವೇಶ್ವರಯ್ಯನವರು ಮತ್ತು ಶ್ರೀ ಮಿರ್ಜಾ ಇಸ್ಮಾಯಿಲ್‌ನವರು ದಿವಾನರಾಗಿದಂಥ ಕಾಲದಲ್ಲಿ ಕಾವೇರಿ ನದಿಯ ನೀರನ ಹಂಚಿಕೆ ವಿಷಯದಲ್ಲಿ ಯಾವರೀತಿಯಾಗಿ ಕಿತಾಪತಿ ಮತ್ತು ತೊಂದರೆಗಳು ಇತ್ತೋ, ಅಷ್ಟೇ ತೊಂದರೆಗಳು ಇವತ್ತು ಕೂಡ ಇದೆ. ನಾನು ಯಾರನ್ನಾದರು ಕುರಿತು ಮಾತನಾಡಿದರೆ ಕೆಲವರಿಗೆ ಇಷ್ಟ ಆಗದೇ ಇರಬಹುದು. ಈ ಸಂದರ್ಭದಲ್ಲಿ ನನ್ನನ್ನು ಸೇರಿಸಿಕೊಂಡು ಹೇಳುವುದಾದರೆ, ಸರ್.ಎಂ.ವಿಶ್ವೇಶ್ವರಯ್ಯನವರು ಮತ್ತು ಶ್ರೀ ಮಿರ್ಜಾ ಇಸ್ಮಾಯಿಲ್‌ರವರು ಮಣ್ಣಿನ ಮಕ್ಕಳಲ್ಲ. ಅವತ್ತಿನದಿವಸ ತಮಿಳುನಾಡು ಇರಲಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅವತ್ತಿನದಿವಸ ಮದ್ರಾಸ್ ಮತ್ತು ಮೈಸೂರು ರಾಜ್ಯಗಳಿಗೆ ಇದ್ದಂಥ ವ್ಯಾಜ್ಯದಲ್ಲಿ ಕೆಲಸ ನಿಲ್ಲಿಸತಕ್ಕಂಥ ಕಡತ ಮುಂದೆ ಹೋದಾಗ - I have seen writings, he has said: Provide Petromax lights and see the work continue for all the 24 hours. ಇದನ್ನು ಬರೆದವರು ಮಣ್ಣಿನ ಮಕ್ಕಳಾಗಲಿ ಅಥವಾ ರೈತರ ಮಕ್ಕಳಲ್ಲ. ಈ ನಾಡಿನ ರೈತರ ಬಗ್ಗೆ ಕಾಳಜಿ ಇದ್ದಂಥ ವಿಶ್ವೇಶ್ವರಯ್ಯನವರು ಹಾಗೆ ಬರೆದಿದ್ದಾರೆ. ಆದರೆ ಇವತ್ತಿನದಿವಸ ಆ ಪದ್ಧತಿ. ಆತುರ, ತುಮುಲ ಮತ್ತು ನೋವು ನಮಗೆ ಇದೆಯೊ? ಈ ಸಂದರ್ಭದಲ್ಲಿ ಪ್ರಾಮಾನಿಕವಾಗಿ ಹೇಳುವುದೇನೆಂದರೆ, ಕರ್ನಾಟಕ ಮಾತೆಯ ಎರಡು ಕಣ್ಣುಗಳಂತಿರುವ ಕಾವೇರಿ ಮತ್ತು ಕೃಷ್ಣೆಯರ ಕಣ್ಣಿನಲ್ಲಿ ಸಮೃದ್ಧವಾದಂಥ ನೀರು ಹರಿಯಲೆಂದು ನಾನು ಭಾವಿಸಿದ್ದೆನು. ಆದರೆ ಇಲ್ಲಿ 11 ಲಕ್ಷ 20 ಸಾವಿರ ಎಕರೆಗಿಂತ ಹೆಚ್ಚಿಗೆ ಬೇಸಾಯವನ್ನು ಮಾಡಬಾರದೆಂದು ಮಧ್ಯಂತರ ಆದೇಶದ ಕತ್ತಿಯನ್ನು ನಮ್ಮ ಮೇಲೆ ಹಾಕಿದ್ದಾರೆ. 2000 ನೇ ಇಸವಿಯೊಳಗೆ ಎಲ್ಲಾ ಕೆಲಸವನ್ನು ಮುಗಿಸಿಕೊಳ್ಳಬೇಕು ಎನ್ನತಕ್ಕಂಥ ಪರಿಸ್ಥಿತಿ ಅಲ್ಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ನಮ್ಮ ಸರ್ಕಾರದವರಲ್ಲಿ ಅತ್ಯಂತ ಹೆಮ್ಮೆಯಿಂದ ಹೇಳುವುದೇನೆಂದರೆ, ನಾನು ಬಹಳ ಹತ್ತಿರದಿಂದ, ಒಂದು ವರ್ಷದಿಂದ ನೋಡಿಕೊಂಡು ಬಂದಂತೆ ಎರಡು ನದಿಗಳ ನೀರಿನ ಹಂಚಿಕೆ ವಿಷಯದ ಪರಿಸ್ಥಿತಿಯನ್ನು ನೀಗಿಸಲಿಕ್ಕೆ ಮೆಚ್ಚುವಂಥ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಆದರೆ, ಇದು ಇಷ್ಟಕ್ಕೆ ಸಾಲದು. ಈ ಎರಡು ಕೊಳ್ಳದಲ್ಲಿರತಕ್ಕಂಥ ನೀರನ್ನು ಸಂಪೂರ್ಣವಾಗಿ ಸದುಪಯೋಗಿ ಪಡಿಸಿಕೊಳ್ಳುವುದಕ್ಕೆ ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 21 ನೇ ಶತಮಾತನದ ಪ್ರಥಮ ವರ್ಷದಲ್ಲಿ ಈ ಎರಡು ನದಿಗಳ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದರ ಸಂಕಲ್ಪ ಮಾಡುವ ಮತ್ತು ನಿರ್ಧಾರ ಮಾಡತಕ್ಕಂಥ ವರ್ಷ ಆಗಲೆಂದು ಆಶಿಸುತ್ತೇನೆ. ಆದರೆ ರೈತರ ಹಿತವನ್ನು ಕಾಪಾಡುವುದಕ್ಕೆ ಸ್ಪರ್ಧೆ ಮಾಡತಕ್ಕಂಥ ಯುವಾಗುವುದು ಬೇಡ

ಎನ್ನತಕ್ಕಂಥ ವಿಷಯ ಪರಂಪರೆಯನ್ನು ಮುರಿಯಲಿಕ್ಕೆ ಪ್ರಯತ್ನ ಮಾಡುತ್ತಿರುವಂಥ ಈ ಸರ್ಕಾರಕ್ಕೆ ಅಭಿನಂದಿಸುತ್ತಾ, ನಾನು ಈಗಾಗಲೇ ಹೇಳಿದಂತೆ ಎರಡು ನದಿಗಳಲ್ಲಿರತಕ್ಕಂಥ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತಾ, ನಾನು ಇಷ್ಟು ಹೊತ್ತು ಕಾಲಹರಣ ಮಾಡಲಿಕ್ಕೆ ಮಾತನಾಡಲಿಲ್ಲ. ನನ್ನ ಮನಸ್ಸಿನ ನೋವು ಚಿಂತನೆಯನ್ನು ನನ್ನ ಎಲ್ಲ ಸ್ನೇಹಿತರ ಜೊತೆಯಲ್ಲಿ ಆತ್ಮಪೂರಕವಾಗಿ ಹಂಚಿಕೊಳ್ಳಬೇಕೆಂಬ ಸದುದ್ದೇಶದಿಂದ ನಾನು ಮಾತನಾಡುತ್ತಿದ್ದೇನೆ. ನನಗೆ ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಹೃತ್ಪೂರ್ವಕವಾಗಿ ವಂದಿಸುತ್ತಾ, ಸನ್ಮಾನ್ಯ ರಾಜ್ಯಪಾಲರು ಕೃಪೆ ಮಾಡಿ ಈ ಸದನಕ್ಕೆ ಆಗಮಿಸಿ ಕನ್ನಡ ಭಾಷೆಯಲ್ಲಿ ಭಾಷಣ ಮಾಡಿದ್ದಾರೆ. ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಮೇಲಿನ ಚರ್ಚೆಗೆ ಸಂಬಂಧಪಟಂತೆ ನಾನು ಈಗಾಗಲೇ ರೆಸಲ್ಯೂಷನ್ ಮೂವ್ ಮಾಡಿದ್ದೇನೆ. ಆದ್ದರಿಂದ ನನ್ನ ಮಾತನ್ನು ಮುಗಿಸುವುದಕ್ಕಿಂತ ಮೊದಲು ಇಲ್ಲಿ ಭಾಷಣ ಮಾಡಲು ಕೃಪೆ ಮಾಡಿದಂಥ ಸನ್ಮಾನ್ಯ ರಾಜ್ಯಪಾಲರಿಗೆ ಸದನದ ಪರವಾಗಿ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವೈ.ಕೆ. ರಾಮಯ್ಯನವರು ಹಿರಿಯರೆಂದು ಅವರ ಗೌರವದ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳಿರತಕ್ಕಂಥ ಮಾತುಗಳಿಂದ ಅವರ ಮನಸ್ಸಿಗೆ ನೋವು ಮಾಡಬೇಕು ಎನ್ನತಕ್ಕಂಥದ್ದು ಎಳ್ಳಷ್ಟು ನನ್ನ ಹೃದಯದಲ್ಲಿ ಆ ಭಾವನೆ ಇಲ್ಲ. ಆದರೆ ಅವರ ಅಪಾರ ಅನುಭವ ನಮ್ಮೆಲ್ಲರಿಗೂ ಮತ್ತು ಈ ಸದನಕ್ಕೆ ಹಾಗೂ ಇಡೀ ರಾಜ್ಯಕ್ಕೆ ಅನುಕೂಲವಾಗಬೇಕು ಎನ್ನತಕ್ಕಂಥದ್ದು ನನ್ನ ಇಚ್ಛೆಯಾಗಿದೆ. ಆದರೆ, ನನ್ನ ಮತ್ತೊಂದು ಇಚ್ಛೆ ಏನೆಂದರೆ, ಆಡಳಿತ ಪಕ್ಷದವರು ಮಾಡಿ ತೋರಿಸಬೇಕಾದದು ಹೆಚ್ಚು ಆಗಬೇಕೆ ವಿನಹಃ ಮಾತನಾಡಿ ತೋರಿಸತಕ್ಕಂಥದ್ದು ಹೆಚ್ಚು ಆಗಬಾರದು ಎನ್ನತಕ್ಕಂಥ ಮಾತನ್ನು ಹೇಳಿದೆನೆ ಹೊರತು ಅವರ ಮನಸ್ಸಿಗೆ ನೋವು ಮಾಡಬೇಕೆಂಬ ಉದ್ದೇಶದಿಂದ ನಾನು ಹೇಳಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

DEPUTY SPEAKER : The like "Wasting the time of the House" should not be used. It is unparliamentary. ಈಗ ನಿಯಮ 69 ರಮೇರೆಗೆ, ವಿದ್ಯುತ್ ದರ ಏರಿಕೆಯಿಂದ ಉಂಟಾಗಿರುವ ತೊಂದರೆಗಳ ಬಗ್ಗೆ ಚರ್ಚಿಸುವ ವಿಷಯವನ್ನು ವಿರೋಧಪಕ್ಷದ ನಾಯಕರು ಪ್ರಾರಂಭ ಮಾಡಬೇಕು.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಸನ್ಮಾನ್ಯ ವೈ.ಕೆ. ರಾಮಯ್ಯನವರು ಸೂಚನೆ ಕೊಟ್ಟು ಭಾಷಣ ಮಾಡಿದ ಮೇಲೆ, ನಾನು ಅನುಮೋದನೆ ಭಾಷಣ ಮಾಡಬೇಕಾಗಿದೆ. ಆ ನಂತರ ಬೇರೆ ವಿಷಯದ ಬಗ್ಗೆ ಚರ್ಚೆ ಮಾಡಬಹುದು.

(ಗೊಂದಲ)

ಉಪಾಧ್ಯಕ್ಷರು : ಈಗ ನಿಯಮ 69 ರ ಮೇಲೆ ಪ್ರಸ್ತಾಪ ಮಾಡಬೇಕಾಗಿರತಕ್ಕಂಥ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಅನುಮೋದನೆಗೆ ಸಂಬಂಧಪಟ್ಟ ಭಾಷಣವನ್ನು ನಾಳೆ ಬೆಳಿಗ್ಗೆ ಪ್ರಾರಂಭ ಮಾಡಿ. ಈಗ ವಿರೋಧಪಕ್ಷದ ನಾಯಕರು ನಿಯಮ 69 ರ ಮೇಲೆ ಪ್ರಸ್ತಾಪ ಮಾಡಬೇಕಾಗಿರತಕ್ಕಂಥ ವಿಷಯದ ಬಗ್ಗೆ ಮಾತನಾಡಲಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ನಾಳೆ ಬೆಳಿಗ್ಗೆ ನನಗೆ ಪ್ರಥಮ ಅವಕಾಶ ಕೊಡಬೇಕು. ಈಗ ನಿಯಮ 69 ರ ಮೇಲಿನ ವಿಷಯದ ಬಗ್ಗೆ ಚರ್ಚೆ ಆಗತಕ್ಕಂಥದ್ದು ಇವತ್ತು ಮಗಿದರೆ ಪರವಾಗಿಲ್ಲ. ಆದರೆ ನಾಳೆದಿವಸ ಇದೇ ವಿಷಯ ಮುಂದುವರೆದರೆ, ನಾನು ಈಗಾಗಲೇ ಹೇಳಿದಂತೆ ನನಗೆ ನಾಳೆದಿವಸ ಮೊದಲು ಅವಕಾಶ ಕೊಡಬೇಕು. ಯಾವುದೇ ಕಾರಣಕ್ಕೂ ರಾಜ್ಯಪಾಲರ ಭಾಷಣಕ್ಕೆ ಅನುಮೋದನೆ ಮಾಡದೆ ಮುಂದು ಹೋಗುವಂಥ ಪದ್ಧತಿ ಸರಿಯಲ್ಲ. ಆದ್ದರಿಂದ ಈ ರೀತಿಯಾದಂಥ ಸಂಪ್ರದಾಯವನ್ನು ತಾವು ಮೀರಬಾರದು. ಏಕೆಂದರೆ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಪ್ರಸ್ತಾವನೆಯ ಸಲುವಾಗಿ ಸನ್ಮಾನ್ಯ ವೈ.ಕೆ. ರಾಮಯ್ಯನವರು ಸೂಚಿಸಿ ಮಾತನಾಡಿದ್ದಾರೆ. ಆದ್ದರಿಂದ ಅದಕ್ಕೆ ಅನುಮೋದನೆ ಮಾಡಿ ನಾನು ಭಾಷಣ ಮಾಡಬೇಕಾಗಿರತಕ್ಕಂಥದ್ದು ನನ್ನ ಕರ್ತವ್ಯವಾಗಿದೆ. ಇದನ್ನು ಬಿಟ್ಟು ಹೊಸ ಸಂಪ್ರದಾಯಕ್ಕೆ ಪೀಠಿಕೆ ಹಾಕುವುದು ಸರಿಯಲ್ಲ.

ಉಪಾಧ್ಯಕ್ಷರು : ಹಿಂದೆ ಈಗಾಗಲೇ ತಾವು ಅನುಮೋದನೆ ಮಾಡಿದ್ದೀರಿ. ಆದ್ದರಿಂದ ನಾಳೆಯದಿವಸ ತಾವು ಮಾತನಾಡಿ.

ನಿಯಮ 69 ರ ಮೇರೆಗೆ

ವಿಷಯ : ವಿದ್ಯುತ್ ದರ ಏರಿಕೆಯಿಂದ ಜನ ಸಾಮಾನ್ಯರಿಗೆ ಉಂಟಾಗಿರುವ ತೊಂದರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ದರ ಏರಿಕೆಯು ಬಹಳ ಮಹತ್ವಪೂರ್ಣವಾದ ವಿಚಾರವಾಗಿರುವುದರಿಂದ ನಾವು ಇಲ್ಲಿ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅಧಿವೇಶನ ಪ್ರಾರಂಭವಾದ ಮೇಲೆ ರಾಜ್ಯದ ಜ್ವಲಂತ ಸಮಸ್ಯೆಗಳಾದ ರೈತನ ಸಂಕಷ್ಟಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ರಾಮಯ್ಯನವರು ಕೂಡ ಇದರ ಬಗ್ಗೆ ಬಹಳ ಒಳ್ಳೆಯ ವಿಚಾರಗಳನ್ನು ಹೇಳಿ ಸಾಕಷ್ಟು ಬೆಳಕು ಚೆಲ್ಲುವುದರ ಮೂಲಕ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಏರಿಕೆ ಹಾಗೂ ವಿದ್ಯುತ್ ಪರಿಸ್ಥಿತಿಯ ಬಗ್ಗೆಯೂ ಕೂಡ ಸಾಕಷ್ಟು ಚರ್ಚೆ ಮಾಡಬೇಕಾಗುತ್ತದೆ. ಬಹುಶಃ ಈ ಮನೆಯ ಎಲ್ಲಾ ಸದಸ್ಯರು ಕೂಡ ಈ ಒಂದು ವಿಚಾರದಲ್ಲಿ ಭಾಗವಹಿಸಬಹುದು. ಮೊದಲನೇಯದಾಗಿ ವಿದ್ಯುತ್ ದರ ಏರಿಕೆ ಹಾಗೂ ಎರಡನೇಯದಾಗಿ ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಮೊನ್ನೆ ಬೆಂಕಿ ಕಾಣಿಸಿಕೊಂಡು ಸುಮಾರು 50 ಕೋಟಿ ನಷ್ಟವಾಗಿರುವ ಅಂದಾಜು ಇದೆ.